


ಅಖಿಲ ಭಾರತ ಪತ್ರಿಕೆ

ಜುಲೈ 2021

# ಸಾಧನೆಯ ಪ್ರಥಮ ಹೆಜ್ಜೆ

## ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಸೂಕ್ತಿಗಳು

ಬೆಲೆ : 15/-



ಈ ಊರ್ಧ್ವ ಗಮನ ಸಾಹಸದ ನಮನ ನೆಗೆತವಿದು ಗಗನದೆಡೆಗೆ
ಲಘುಚೇತವೀಗ ಆಧಾರದಿಂದ ಚೈತನ್ಯ ಕಾಂತಿಯೆಡೆಗೆ
ಅವಕಾಶದಲ್ಲಿ ಅವಕಾಶವಾಗೆ ಮಾನವನ ಚಿತ್ತ–ಪ್ರಜ್ಞೆ
ಭಂಗುರವ ತೊರೆದು ಲಂಘನದಿ ಲಘಿಮೆ ದಿವ್ಯತ್ವದೆಡೆಗೆ ಸಂಜ್ಞೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 3 ಪುಟ 116)**

Photo: Imaging Savitri

**ಅಖಿಲ ಭಾರತ ಪತ್ರಿಕೆ**

**ಜುಲೈ 2021**

ಸಂಪುಟ: 31 ಸಂಚಿಕೆ: 07


**ಪರಿವಿಡಿ**


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ಸಾಧನೆಗಾಗಿ ಪ್ರಥಮ ಹೆಜ್ಜೆ

## ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಸೂಕ್ತಿಗಳು

*ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು*

**ಭಾಗ 1**


**ನಾವು ಏತಕ್ಕಾಗಿ ಬದುಕಿದ್ದೇವೆ ಎಂದು ತಿಳಿಯುವುದು** 5

**ಅಸ್ತಿತ್ವ ಎಂದರೇನು?** 7

**ನಮ್ಮ ಜ್ಞಾನದಿಂದ ಅವಿತುಕೊಂಡಿರುವ ಮೂಲಭೂತ ವಾಸ್ತವಿಕತೆ** 9

ಅನು: ನಾಗಜ್ಯೋತಿ ಮಾನ್ವಿ


**ಭಾಗ 2**


**ಸಾಧನೆಯಲ್ಲಿ ಏಕೆ ತೊಡಗಿಸಿಕೊಳ್ಳಬೇಕು** 10

**ಯೋಗದಲ್ಲಿ, ಸಾಧಕ ಯಾರು? ಮತ್ತು ಸಾಧನವೇನು?** 14

**ಮುಕ್ತತೆ ಎಂದರೆ ಏನು ಮತ್ತು ನಮ್ಮನ್ನು ನಾವು ಹೇಗೆ ತೆರೆದುಕೊಳ್ಳಬೇಕು** 16

**ನಮ್ಮ ಶ್ರದ್ಧೆಯ ಕೋರಿಕೆ** 19

ಅನು: ಡಾ॥ ಮಹಾದೇವ ಸಕ್ರಿ

**ಸ್ವಾನುಭೂತಿಗೊಳ್ಳುವಿಕೆ ಮತ್ತು ಆಂತರ್ಯದಲ್ಲಿರುವ ಈ ದಿವ್ಯ ಸಾನಿಧ್ಯದ ಆವಿಷ್ಕಾರ** 22

ಅನು: ಪುಟ್ಟು ಕುಲಕರ್ಣಿ


**ಭಾಗ 3**


**ಸಮರ್ಪಣೆಯ ಮೂಲಕವೇ ಯೋಗದ ಸರ್ವ ಪ್ರಕ್ರಿಯೆ..** 29

**ಪರಿಪೂರ್ಣ ಸ್ವರೂಪದ ಸಾಧನೆಯ ರಹಸ್ಯ** 32

**ಮೂಲಭೂತ ಅವಶ್ಯಕತೆ; ಸ್ವಯಂ–ಏಕಾಗ್ರತೆ** 35
ಅನು: ಪುಟ್ಟು ಕುಲಕರ್ಣಿ

**ಸಾಧನೆಯ ಮೂರು ಆಯಾಮಗಳ ಮಾರ್ಗದರ್ಶನ** 39
ಅನು: ಶ್ರೀ ಎಂ.ಎಸ್. ನಾಗರವಳ್ಳಿ

**ದಿವ್ಯತ್ವದ ಜೊತೆಗೆ ಸದಾ ...** 44

**ಸದಾ ಸ್ಮರಣೆಯಲ್ಲಿರಲಿ** 48
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ "ಋಗ್ವೇದದ ಪ್ರಥಮ ಋಕ್"** 50
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಸಂಸ್ಕೃತ ಕಾವ್ಯ "ಭವಾನೀ ಭಾರತೀ"**
**(ಪದ್ಯಾನುವಾದ–5)** 60
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಗೀತಾ ಪ್ರಬಂಧಗಳು** 62
ಅನು: ಜಾನ್ವಿ

**ಮಹರ್ಷಿ ಶ್ರೀ ಅರವಿಂದ ಘೋಷರ**
**ಸಂಕ್ಷಿಪ್ತ ಚರಿತವು – 7** 68
– ಡಾ॥ ಶಂ.ಬಾ. ಜೋಶಿ

## ಸಂಪಾದಕರ ಟಿಪ್ಪಣಿ

ಈ ಸಂಚಿಕೆಯಲ್ಲಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಸೂಕ್ತಿಗಳನ್ನು ಸಂಕ್ಷೇಪಿಸಿ ರೂಪಿಸಲಾಗಿದೆ. ಸಾಧನೆಯ ಸಲುವಾಗಿ ಒಂದು ಪರಿಚಯಾತ್ಮಕವಾಗಿರುವ ಕೈಪಿಡಿಯೊಂದನ್ನು ರೂಪಿಸುವ ಪ್ರಯತ್ನ ಇದಾಗಿದೆ. ಈ ಸಂಕ್ಷಿಪ್ತ ಸಂದೇಶಗಳು ಓದುಗರನ್ನು ಪ್ರಭಾವಿತರನ್ನಾಗಿಸಿ, ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಕೃತಿಗಳನ್ನು ಅಧ್ಯಯನ ಮಾಡಲು ಉದ್ದೀಪಿಸಲಿ ಅಥವಾ ಓದುಗರು ತಮಗೆ ಸೂಕ್ತವಾಗಿರುವ ಆಯ್ಕೆಯನ್ನು ಮಾಡಿಕೊಳ್ಳುವ ಮೂಲಕ, ಮಾರ್ಗದರ್ಶನಕ್ಕೆ ಸೂಕ್ತವಾಗಿರುವ ಪ್ರಕಾಶವನ್ನು ಈ ಮೂಲಕ ಪಡೆದುಕೊಳ್ಳಬಹುದು. ಅಂತಿಮವಾಗಿ ಚೇತನದ ಒಂದು ಅಂಶವಾಗಿಯೇ ರೂಪಾಂತರಗೊಳ್ಳಲು ಸಹಕಾರಿಯಾಗುವದು. [ಎಐಎಮ್]

*

## ಸಂಪಾದಕೀಯ

### ಪ್ರಥಮ ಹೆಜ್ಜೆ ಇಡುವ ಮುನ್ನ. . .

ನಡೆಯದೇ ದಾರಿ ಮೂಡದು. ಆದರೆ ಸಾಮಾನ್ಯ ಮನೋಭೂಮಿಕೆಯಲ್ಲಿ ದಾರಿ ಮೂಡದೇ ನಡೆಯುವದು ಎಂತು? ಎನ್ನುವ ಸಂದೇಹದಲ್ಲಿಯೇ ಜೀವನ ಕಳೆದು ಹೋಗುತ್ತದೆ. ಪ್ರಥಮ ಹೆಜ್ಜೆ ಇಡುವ ಮುನ್ನ, ಇಲ್ಲಿಯವರೆಗೂ ಅಲ್ಲೊಂದು ಪಥವು ಇರಲಿಲ್ಲ, ಹೀಗಾಗಿ ಅಲ್ಲಿಡುವ ಪ್ರಥಮ ಹೆಜ್ಜೆಗೆ ಮುಳ್ಳು–ಕಲ್ಲು ಚುಚ್ಚುವದು ಸಹಜ. ನೆಲವೂ ಗಟ್ಟಿಯಾಗಿದೆಯೋ ಅಥವಾ ಹೆಜ್ಜೆ ಇಡುವವನನ್ನೇ ನುಂಗಿ ಬಿಡುವ ಕಳ್ಳುಸುಕಿನಂತಿದೆಯೋ ಏನೂ ಗೊತ್ತಿರುವದಿಲ್ಲ. ಆದರೆ ಅಖಂಡ ವಿಶ್ವಾಸ ಮತ್ತು ಏಕಾಗ್ರತೆಯ ಪರಮಾವಧಿಯಲ್ಲಿ ಹೃದಯದ ಅಭೀಪ್ಸೆಯನ್ನು ಹೊಂದಿ, ಆ ವೈಶ್ವಿಕದ ಸ್ಪಂದವನ್ನು ಅನುಭಾವಿಸುವ ಪ್ರಯತ್ನವಿದ್ದಲ್ಲಿ, ಈ "ಪ್ರಥಮ ಹೆಜ್ಜೆ"ಯೇ ಒಂದು ಭವ್ಯವಾದ ಹಾಗೂ ದಿವ್ಯವಾದ ಪಥವೊಂದನ್ನು ನಿರ್ಮಿಸಲು ಸಹಕಾರಿಯಗುತ್ತದೆ.

ಮಾನವನ ಊರ್ಧ್ವಮುಖಿ ಚಿಂತನವು ಅವನ ಚಿತ್ತದ ವಿಕಾಸದ ಹಂತವೇ ಆಗಿದೆ. ಮಾನವನ ಸ್ವರೂಪದಲ್ಲಿ ಜೀವನವನ್ನು ರೂಪಣೆ ಮಾಡಿಕೊಂಡಿರುವ ಆ "ವಿಶ್ವ ಶಕ್ತಿ"ಯ ಮೂಲ ಉದ್ದೇಶವೇನು ಎನ್ನುವದು ಇನ್ನೂ ಗೋಚರವಾಗಿಲ್ಲ. ಇನ್ನುಳಿದ ಜೀವಿಗಳ–ಪ್ರಾಣಿಗಳ ಹುಟ್ಟು–ಬದುಕು–ಸಾವು ಎನ್ನುವ ಹಂತದಲ್ಲಿಯೇ ನಿಂತಂತೆ ಕಾಣುತ್ತದೆ. ಆದರೆ ಮಾನವನಿಗೆ ಲಭ್ಯವಾದ ಬದುಕಿನಲ್ಲಿಯೇ, ಊರ್ಧ್ವಗಾಮಿಯಾಗಿ, ಅನಂತಾನಂತವನ್ನು ಅರಸುವ ಕುತೂಹಲದಿಂದ ಇಟ್ಟ ಪ್ರಪ್ರಥಮ ಹೆಜ್ಜೆ ಇಂದು ಪ್ರಸ್ತುತ ಮಾನವ ಕುಲವನ್ನು ಮತ್ತೂ ಮತ್ತೂ ಊರ್ಧ್ವದ ಕಡೆಗೆ ಸಾಗುವಂತೆ ಉತ್ತೇಜನವನ್ನು ಒದಗಿಸುತ್ತಿದೆ. ಭೌತಿಕ ವ್ಯವಸ್ಥೆಯಲ್ಲಿ ಲಭ್ಯಗೊಂಡಿರುವ ಸೌಲಭ್ಯಗಳ ಸಮೃದ್ಧಿಯ ಸುನಾಮೀ ಅಲೆಗಳು, ವಿಧಾಯಕವಾಗುವ ಬದಲು ವಿಘಾತಕಾರಿಯಾಗಿವೆ. ಕಾರಣವೆಂದರೆ, ನಾವೇ ಸ್ವಯಂ ನಿರ್ಮಿಸಿಕೊಂಡ ಸುನಾಮಿ–ಅಲೆಗಳ ಪರಿಣಾಮವಿದಾಗಿದೆ.

ಪ್ರಕೃತಿಯ ವೈವಿಧ್ಯತೆಯು ಎಷ್ಟೊಂದು ಸಹಜವಾಗಿಯೇ ಅನುಷ್ಠಾನಗೊಂಡಿದೆಯೋ, ಅದೇ ರೀತಿಯಲ್ಲಿ ಪ್ರಕೃತಿಯ ಒಂದು ಅಂಶವೇ ಆಗಿರುವ ಮಾನವನಲ್ಲಿ ಅದರಲ್ಲೂ ಅವನ ಚಿಂತನಾ ಕ್ರಮಗಳಲ್ಲಿ, ಅಭಿವ್ಯಕ್ತಿಯಲ್ಲಿ ವೈವಿಧ್ಯತೆ ಸಹಜವಾಗಿಯೇ ವಿಧವಿಧದ ಸ್ವರೂಪವನ್ನು ಪಡೆದುಕೊಂಡೇ ಕಾಣಿಸುತ್ತದೆ. ಆದರೆ ಈ ಎಲ್ಲ ವೈವಿಧ್ಯತೆಗಳ ಆಂತರ್ಯ ಮಾತ್ರ "ಒಂದೇ" ಆಗಿದೆ. ಈ ಒಂದನ್ನು ಅರಿತುಕೊಳ್ಳಲು ಇರುವ ಮಾರ್ಗಗಳೂ ಸಹಿತ, ಆಯಾ ವ್ಯಕ್ತಿಗಳ ಚಿಂತನಾಕ್ರಮವನ್ನೇ ಆಧರಿಸಿರುತ್ತದೆ. ಆದರೆ, ಯಾವುದೇ ಮಾರ್ಗದಲ್ಲಿ ಸಾಗಿದರೂ ಗುರಿ ಮಾತ್ರ ಒಂದೇ ಆಗಿರುವದಕ್ಕೆ, ಇಲ್ಲಿ ಇಡುವ ಪ್ರತಿಯೊಬ್ಬನ ಪ್ರಥಮ ಹೆಜ್ಜೆಯೂ ಪ್ರಾಮುಖ್ಯವಾಗಿ, ಮುಂದಿನ ಹೆಜ್ಜೆಗೆ, ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗುತ್ತದೆ.

ಪ್ರಥಮ ಹೆಜ್ಜೆಯ ಪರಿಶುದ್ಧತೆ, ತನ್ಮಯತೆ, ಏಕಾಗ್ರತೆ ಮತ್ತು ವಿಕಾಸದ ಸ್ಪಂದನಕ್ಕೆ ಶ್ರುತಿಬದ್ಧಗೊಂಡಿರುವದು ಹಾಗೂ ಈ ಮೂಲಕ ವಿಶ್ವಶಕ್ತಿಯು ಮಾನವನ ಮೂಲಕ ಏನನ್ನು ಪಡೆಯಬಯಸುತ್ತಿದೆ ಎನ್ನುವ ಆಂತರ್ಯದ ಅಭಿಲಾಷೆಗಳು, ಈ ಪಥದಲ್ಲಿ ಸಾಗಲು ಬರುವವರಿಗೆಲ್ಲರಿಗೂ ನಿರಂತರವಾಗಿ ಪಥದರ್ಶನ ಮಾಡುವಂತೆ ಇರುತ್ತದೆ. ಹೀಗಾಗಿಯೇ, ಪಥದಲ್ಲಿ ನಡೆಯುತ್ತಿರುವ ವಿಕಾಸದ ಹಂತದಲ್ಲಿ ಏನೇ ಅಲ್ಲೋಲ–ಕಲ್ಲೋಲಗಳು ಕಂಡುಬಂದರೂ, ಏನೇ ವಿಚಲನೆಗಳು ಘಟಿಸಿದರೂ ಸಹಿತ ಅದಾವುದಕ್ಕೆ ಹಿಂಜರಿಯದ ನಿರಂತರ ಶಕ್ತಿಯೊಂದಿಗೆ ಈ ಪ್ರಥಮ ಹೆಜ್ಜೆ ರೂಪುಗೊಂಡಿದೆ.

ಭೂಮಿಯ ಮೇಲೆ ಇರುವ ಬದುಕಿನ ಚಿಂತನಗಳು ಪ್ರಾಯಶಃ ಮನುಷ್ಯನಿಗೆ ಸಂತೃಪ್ತಿಯ ಹಂತವನ್ನು ನೆಮ್ಮದಿಯ ಜೀವನವನ್ನು ಕೊಟ್ಟಿವೆ. ಆದರೆ ಮಾನವ ಮಾತ್ರ ನೆಮ್ಮದಿಪೂರ್ಣ ಸಂತೃಪ್ತಿಯ ಪ್ರಶಾಂತತೆಗಿಂತ, ಅತೃಪ್ತತೆಯೇ ತುಂಬಿರುವ ಸುಖದ ಸಂಘರ್ಷಕ್ಕಾಗಿಯೇ, ತನ್ನ ಮೇಲೆ ತಾನೇ ಪರದೆಯೊಂದನ್ನು ಎಳೆದುಕೊಂಡು, ಇದರಿಂದ ಘಟಿಸುತ್ತಿರುವ ಅವಘಡಗಳಿಗೆ, ದುಃಖಗಳಿಗೆ ಈ ವಿಶ್ವಶಕ್ತಿಯ ಸೂತ್ರವೇ ಕಾರಣವೆಂದುಕೊಂಡು ವಾದ ಮಾಡುತ್ತಾನೆ. ಇಂತಹ ಸಂದರ್ಭದಲ್ಲಂತೂ 'ಪ್ರಥಮ ಹೆಜ್ಜೆಯು' ತುಂಬ ಸಂಕೀರ್ಣಮಯವಾಗಿರುವ ಸವಾಲುಗಳನ್ನು ಎದುರಿಸಿ ಮುನ್ನಡಿ ಇಡಬೇಕಾಗುತ್ತದೆ.

ಇಲ್ಲಿ ಶ್ರೀ ಅರವಿಂದರು ನಿರ್ಮಿಸಿರುವ ಈ ನೂತನ ಪಥದಲ್ಲಿ ಪ್ರಯಾಣ ಮಾಡಲು, ಸದಾ ರಕ್ಷಣಾತ್ಮಕವಾಗಿರುವ ಸಂದರ್ಭಗಳನ್ನು ಹೇಗೆ ನಮಗೆ ನಾವೇ ರೂಪಿಸಿಕೊಳ್ಳಬೇಕು ಎನ್ನುವ ವಿಷಯದ ಬಗೆಗೆ ಮಾತೆಯವರು ಒದಗಿಸಿದ ಸೂಕ್ತಿಗಳು ಇವೆ. ಆಧುನಿಕ ಚಿಂತನಾ ಕ್ರಮಗಳು, ಬದಲಾವಣೆಗೊಂಡ ಭಾಷಾ–ಸ್ವರೂಪ, ವಿಜ್ಞಾನದ ಹೆಸರಿನಲ್ಲಿ ಸಂಕೀರ್ಣವಾಗಿಯೇ ಅಭಿವೃದ್ಧಿಯಾಗಿದೆ ಎಂದು ಪರಿಭಾವಿಸುವಂತೆ ಸೌಲಭ್ಯ ಒದಗಿಸುತ್ತಿರುವ ವೈಜ್ಞಾನಿಕ ಯಾಂತ್ರೀಕೃತ ಬದುಕಿನ ಚೌಕಟ್ಟುಗಳು, ನಮ್ಮ ಚಿಂತನವನ್ನು ವಿಕಾಸಗೊಳಿಸುವದರ ಬದಲು, ಅದುಮಿಡಲು ಯತ್ನಿಸುತ್ತವೆ. ಇಂತಹ ಸಂದರ್ಭದಲ್ಲಿ, ಈಗಾಗಲೇ ನಿರ್ಮಿತವಾಗಿರುವ ಪಥದಲ್ಲಿಯೇ 'ಪ್ರಥಮ ಹೆಜ್ಜೆ'ಯನ್ನು ಇಡಲೂ ಸಹಿತ ನಾವೆಲ್ಲ ನಮ್ಮನ್ನು ಏಕಾಗ್ರತೆಗೊಳಿಸುವದರ ಕಡೆಗೆ ತೊಡಗಿಸಿಕೊಳ್ಳಬೇಕಾಗಿದೆ. [ಪಿಪಿಕೆ]

## ಭಾಗ 1

# ನಾವು ಏತಕ್ಕಾಗಿ ಬದುಕಿದ್ದೇವೆ ಎಂದು ತಿಳಿಯುವುದು

**– ಅನುವಾದ: ನಾಗಜ್ಯೋತಿ ಮಾನ್ವಿ**

ವೈಯಕ್ತಿಕ ಅಸ್ತಿತ್ವದ ಉದ್ದೇಶವೆಂದರೆ ದೈವವನ್ನು ಹುಡುಕುವುದರಲ್ಲಿ ಆನಂದ ಪಡೆಯುವುದು ಮತ್ತು ಆತನೊಂದಿಗೆ ಐಕ್ಯವಾಗುವುದು. ಒಬ್ಬರು ಇದನ್ನು ಅರ್ಥ ಮಾಡಿಕೊಂಡಾಗ, ಮತ್ತು ಅವನು ಎಲ್ಲಾ ಕಷ್ಟಗಳನ್ನು ಮೀರುವ ಸಾಮರ್ಥ್ಯವನ್ನು ಪಡೆಯಲು ಸಿದ್ಧನಾಗುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ)** Vol. **16, ಪುಟ 423**

**22 ನವೆಂಬರ್ 1971**

*

ನಾವು ಏತಕ್ಕಾಗಿ ಬದುಕಿದ್ದೇವೆ ಎಂದು ತಿಳಿಯುವುದೆಂದರೆ, ದೈವವನ್ನು ಹುಡುಕುಲು ಮತ್ತು ಆತನೊಂದಿಗೆ ಪ್ರಜ್ಞಾಯುತವಾಗಿ ಐಕ್ಯವಾಗಲು. ಕೇವಲ ಈ ಸಾಕ್ಷಾತ್ಕಾರಕ್ಕಾಗಿ ಏಕಾಗ್ರತೆಗೊಳಿಸಲು ಅಭೀಪ್ಸೆ ಪಡಬೇಕು, ಎಲ್ಲಾ ಪರಿಸ್ಥಿತಿಗಳನ್ನು ರೂಪಾಂತರಿಸಿ ಈ ಗುರಿಯನ್ನು ಹೇಗೆ ತಲುಪಬಹುದು ಎಂದು ತಿಳಿಯಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ)** Vol. **16, ಪುಟ 428**

**22 ಡಿಸೆಂಬರ್ 1971**

*

ಬದುಕಲು ಅವಶ್ಯಕವಾಗಿಯೂ ನಿಜವಾದ ಒಂದು ಏಕೈಕ ಕಾರಣವೆಂದರೆ: ನಮ್ಮನ್ನು ನಾವು ತಿಳಿದುಕೊಳ್ಳುವುದು, ನಾವು ಇಲ್ಲಿರುವುದು ಕಲಿಯಲು – ನಾವು ಏನಿದ್ದೇವೆ, ನಾವು ಇಲ್ಲಿ ಏಕಿದ್ದೇವೆ, ಮತ್ತು ನಾವು ಇಲ್ಲಿ ಏನು ಮಾಡಬೇಕಾಗಿದೆ ಎಂದು ಕಲಿಯಲು ಮತ್ತು ನಮಗದು ಗೊತ್ತಿಲ್ಲವೆಂದರೆ, ನಮಗೂ ಮತ್ತು ಬೇರೆಯವರಿಗೂ ನಮ್ಮ ಜೀವನ ಇಡಿಯಾಗಿ ಅರ್ಥವಿಲ್ಲದ್ದಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ)** Vol. **6 ಪುಟ 15–16**

**03 ಫೆಬ್ರವರಿ 1954**

**ಏನಿದೆಯೋ ಎಲ್ಲವೂ ನೀನೆ**

ಮತ್ತು ಅದ್ಭುತವಾದ ಆನಂದವೇ ಸೃಷ್ಟಿಯ ಗುರಿ ಎಂಬುದು ಸ್ಪಷ್ಟವಾಗಿದೆ.. ಈ ಆನಂದದ ಭಾವವೇ 'ನೀನು'.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/268 (28 ಆಗಸ್ಟ್ 1971)**

**– ಶ್ರೀಮಾತೆ**

**ಜೀವನಕ್ಕೊಂದು ಉದ್ದೇಶವಿದೆ**

ಈ ಉದ್ದೇಶವೆಂದರೆ ದೈವವನ್ನು ಹುಡುಕುವುದು ಮತ್ತು ಅದರ ಸೇವೆ ಮಾಡುವುದು.

ದೈವವು ದೂರವಿಲ್ಲ. ಆತ ನಮ್ಮೊಳಗಿದ್ದಾನೆ, ಅಂತರಂಗದ ಆಳದಲ್ಲಿ ಮತ್ತು ಭಾವನೆಗಳು ಮತ್ತು ಯೋಚನೆಗಳಿಂದಾಚೆಯಲ್ಲಿದ್ದಾನೆ. ದೈವದಲ್ಲಿಯೇ ಮತ್ತು ಶಾಂತಿ ಮತ್ತು ಖಚಿತತೆಯಿರುತ್ತದೆ ಮತ್ತು ಎಲ್ಲಾ ತೊಂದರೆಗಳ ಪರಿಹಾರವೂ ಅಲ್ಲೇ ಇರುತ್ತದೆ.

ನಿಮ್ಮ ತೊಂದರೆಗಳನ್ನು ದೈವದ ಕೈಯಲ್ಲಿಡಿ ಮತ್ತು ಆತ ಎಲ್ಲಾ ತೊಂದರೆಗಳಿಂದ ನಿಮ್ಮನ್ನು ಮೇಲೆತ್ತುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ)** Vol. **14, ಪುಟ 5 (3 ಜುಲೈ 1970)**

**– ಶ್ರೀಮಾತೆ**

*

ದೈವವೆಂದರೆ ಯಾವುದರಿಂದ ಎಲ್ಲವೂ ಬರುತ್ತದೆಯೋ, ಯಾವುದರಲ್ಲಿ ಎಲ್ಲವೂ ಜೀವಿಸುತ್ತದೆಯೋ ಮತ್ತು ಈಗ 'ಅಜ್ಞಾನದಿಂದ' ಮುಚ್ಚಲ್ಪಟ್ಟಿದ್ದರೂ ದೈವೀ ಸತ್ಯದೆಡೆಗೆ ಮರುಳುವುದು ಜೀವನದಲ್ಲಿ ಆತ್ಮದ ಗುರಿಯಾಗಿದೆ. ಪರಾತ್ಪರ 'ಸತ್ಯದಲ್ಲಿ ದೈವ'ವು ಪರಿಪೂರ್ಣ ಮತ್ತು ಅನಂತ ಶಾಂತಿ, ಪ್ರಜ್ಞೆ, ಅಸ್ತಿತ್ವ, ಶಕ್ತಿ ಮತ್ತು ಆನಂದವೇ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ)** Vol. **28, ಪುಟ 5** (SABCL Vol. **23, ಪುಟ 1081**)

*

ದೈವವನ್ನು ತಿಳಿಯುವುದು ಮತ್ತು ದೈವವೇ ನಾವಾಗುವುದು, ಏಕೆಂದರೆ ನಮ್ಮ ರಹಸ್ಯ ಸ್ವಭಾವದಲ್ಲಿ ನಾವು 'ಅದೇ' ಆಗಿದ್ದೇವೆ.., ಎಲ್ಲಾ ಆಗುವಿಕೆಯ ಅನಾವರಣವೇ **ಸ್ವಯಂ ಸಾಧನೆಯ ರಹಸ್ಯವಾಗಿದೆ:** ಆತ್ಮಜ್ಞಾನ ಮತ್ತು ಹೆಚ್ಚುತ್ತಿರುವ ಪ್ರಜ್ಞೆ ಇವು **ಸಾಧನ ಮತ್ತು ಪ್ರಕ್ರಿಯೆಗಳಾಗಿವೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ)** Vol. **23, ಪುಟ 54** (SABCL Vol. **20, ಪುಟ 48**) **– ಶ್ರೀ ಅರವಿಂದರು**

## ಅಸ್ತಿತ್ವ ಎಂದರೇನು?

**– ಅನುವಾದ: ನಾಗಜ್ಯೋತಿ ಮಾನ್ವಿ**

ಅಸ್ತಿತ್ವ ಎಂದರೆ ಅನಿರೀಕ್ಷಿತ ಅಲ್ಲ, ಯಾರೂ ಇಲ್ಲದೆ ಮನಸ್ಸಿಗೆ ಬಂದಂತೆ ಮಾಡಿದ ಸೃಷ್ಟಿಯಲ್ಲ, ಬೇಜವಾಬ್ದಾರಿಯಿಂದಾದ ವಸ್ತುವಲ್ಲ. ಇದು ದೇವರ ಶಬ್ದವನ್ನು ತನ್ನೊಳಗೊಂಡಿದೆ, ಇದು ರಹಸ್ಯ ದೈವೀ ಸನ್ನಿದಾನದಿಂದ ತುಂಬಿದೆ.

ಅಸ್ತಿತ್ವವು ಯಾವುದೇ ಗುರಿ ಅಥವಾ ಅರ್ಥ ಅಥವಾ ಉದ್ದೇಶವಿಲ್ಲದ ಹೇಗೋ ಆಗಮಿಸಿ ಮತ್ತು ಹೀನವಾದ ಚಲನೆಯನ್ನು ಪ್ರಾರಂಭಿಸಿ ಕುರುಡು ಯಂತ್ರವಲ್ಲ. ಅಸ್ತಿತ್ವವು ಪ್ರಕಣೆಯ ಹಂತ ಹಂತವಾದ ಪ್ರಕ್ರಿಯೆಯಿಂದ ತೆರೆದುಕೊಳ್ಳುತ್ತಿರುವ ವಸ್ತುಗಳ ಸತ್ಯವಾಗಿದೆ. ತನ್ನದೇ ಆದ 'ಸತ್ಯತೆ'ಯನ್ನು ಒಳಗೊಂಡಿರುವ ವಿಕಾಸವಾಗಿದೆ.

ಅಸ್ತಿತ್ವವು ಮಾಯೆಯಲ್ಲ, ಮಾಯೆಗೆ ಕಾರಣವಿಲ್ಲ, ಮಾಯೆಗೆ ಇರಲು ಕೆಲಸವಿಲ್ಲ, ಇರಲು ಸಾಧ್ಯವಿಲ್ಲ, ಮಾಯೆ ಅಸ್ತಿತ್ವದಲ್ಲಿ ಆದರೆ ಕೇವಲ ಇದ್ದ ಹಾಗೆ ಭಾವವಾಗುತ್ತದೆ. ಈ ಅದ್ಭುತ ವಿಶ್ವದಲ್ಲಿ ತನ್ನನ್ನು ತಾನೇ ಪ್ರಕಟಪಡಿಸಿಕೊಳ್ಳುವ ಒಂದು ಸರ್ವಶಕ್ತ 'ಸತ್ಯತೆ'ಯಾಗಿದೆ.

*

ಪ್ರಕಟಣೆಯು 'ಶಾಶ್ವತನ' ಸಂಚಿಕೆಯಲ್ಲಿ ಇದು ಆತನ ಮೂರ್ಚೆಯ ಮತ್ತು ಅವಿನಾಶಿಯಾದವನ ವೈಭೋಗದ ದೇಹವಾಗಿದೆ. ಇದು ಆತನ ಆನಂದ ಮತ್ತು ಶಕ್ತಿಯ ಚಲನೆಯಾಗಿದೆ.

*

ಏನು ಇದೆಯೋ ಅದೆಲ್ಲವೂ ಅನಂತ ದೈವದ ಪ್ರಕಟಣೆಯಾಗಿದೆ, ಇದಲ್ಲದೆ, ವಿಶ್ವವು ಅಸ್ತಿತ್ವದಲ್ಲಿರಲು ಯಾವ ಕಾರಣವೂ ಇಲ್ಲವಾಗಿದೆ.

*

ನಾವು ಆರಾಧಿಸುವ ದೈವವು ದೂರದ ವಿಶ್ವಾತೀತ ವಾಸ್ತವಿಕತೆ ಮಾತ್ರವಾಗಿರದೆ, ಅರ್ಧ ಮರೆಮಾಚಿದ ಪ್ರಕಟಣೆಯಾಗಿ ಮತ್ತು ಇಲ್ಲಿಯೇ ವಿಶ್ವದಲ್ಲಿ ನಮಗೆ ಹತ್ತಿರದಲ್ಲಿರುವವನಾಗಿದ್ದಾನೆ. ಜೀವನವು ಇನ್ನೂ ಸಂಪೂರ್ಣವಾಗಿರದ ದೈವೀ ಪ್ರಕಟಣೆಯ ಕ್ಷೇತ್ರವಾಗಿದೆ; ಇಲ್ಲಿ, ಜೀವನದಲ್ಲಿ, ಭೂಮಿಯ ಮೇಲೆ, ದೇಹದಲ್ಲಿ, ಉಪನಿಷತ್ತುಗಳು ಹೇಳಿದಂತೆ ಹೈವ (ಇಲ್ಲಿಯೇ) ದೈವತ್ವವನ್ನು ಅನಾವರಣಗೊಳಿಸಬೇಕು; ನಾವು ಆ ಪರಾತ್ಪರನ ಶ್ರೇಷ್ಠತೆ, ಬೆಳಕು ಮತ್ತು ಮಧುರತೆಯನ್ನು ನಮ್ಮ ಪ್ರಜ್ಞೆಗೆ ನಿಜವಾಗಿಸಬೇಕು, ಇಲ್ಲಿಯೇ ಪಡೆಯಬೇಕು ಮತ್ತು ಎಷ್ಟರ ಮಟ್ಟಿಗೆ ಸಾಧ್ಯವೋ ಅದನ್ನು ವ್ಯಕ್ತಪಡಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/218, 219, 218; 23/74**

*

ವಿಕಾಸವೆಂದರೆ ಭೌತಿಕ ಪ್ರಜ್ಞೆಯ ಸಾಂದ್ರತೆಯಿಂದ ಪ್ರಗತಿದಾಯಕವಾಗಿ ಅನಾವರಣಗೊಳ್ಳುತ್ತಿರುವ ಚೈತನ್ಯವಾಗಿದೆ. ಮತ್ತು ಸಹಜವಾಗಿ ಕಾಣುತ್ತಿರುವ ಪ್ರಾಣಿಕ ಅಸ್ತಿತ್ವದಿಂದ ಕ್ರಮೇಣವಾಗಿ ಸ್ವ–ಅನಾವರಣಗೊಳ್ಳುತ್ತಿರುವ ದೇವರಾಗಿದೆ.

*

ಎಲ್ಲಾ ವಿಕಾಸವು ತನ್ನ ಮೂಲದಲ್ಲಿ ಪ್ರಕಟ ಅಸಿತ್ವದ ಪ್ರಜ್ಞೆಯ ಶಕ್ತಿಯ ಉನ್ನತೀಕರಣವೇ ಆಗಿದೆ, ಆದ್ದರಿಂದ ಭೌತಿಕದಿಂದ ಪ್ರಾಣ, ಪ್ರಾಣದಿಂದ ಮನ, ಮನದಿಂದ ಚೈತನ್ಯ ಇನ್ನೂ ಪ್ರಕಟವಾಗದಿರುವ ಶ್ರೇಷ್ಠ ತೀವ್ರತೆಯೆಡೆಗೆ ಇದನ್ನು ಮೇಲೆತ್ತುವುದೇ ವಿಕಾಸವಾಗಿದೆ.

*

ಎಲ್ಲಾ ವಿಕಾಸವು 'ಒಬ್ಬನು' ಅನೇಕನಾಗಿ ಅಚೇತನದಿಂದ, ಅಜ್ಞಾನದ ಮೂಲಕ ಸ್ವಯಂ ಪ್ರಜ್ಞೆಯ ತನ್ನ ಕಡೆಗೆ ಪರಿಪೂರ್ಣತೆಯೆಡೆಗೆ ಪ್ರಗತಿದಾಯಕ ಸ್ವ–ಅನಾವರಣಗೊಳ್ಳುವುದಾಗಿದೆ.

*

ವಿಕಾಸವು ತನ್ನ ಮೂಲತೆಯಲ್ಲಿ ಹೆಚ್ಚು ಹೆಚ್ಚು ಸಂಘಟಿತ ದೇಹದ ಅಥವಾ ಹೆಚ್ಚು ಕಾರ್ಯದಕ್ಷ ಪ್ರಾಣದ ಬೆಳವಣಿಗೆಯಲ್ಲ – ಇವು ಕೇವಲ ಅದರ ಯಾಂತ್ರಿಕ ಮತ್ತು ಬಾಹ್ಯ ಸಂದರ್ಭಗಳಾಗಿವೆ. ವಿಕಾಸವೆಂದರೆ ಜಡದ ನಿದ್ರೆಯೊಳಗೆ ಸಿಲುಕಿದ ಪ್ರಜ್ಞೆಯು ಹೋರಾಟದಿಂದ ತನ್ನನ್ನು ತಾನು ಜಾಗೃತಗೊಳಿಸಿ ಸ್ವತಂತ್ರನಾಗಿ ತನ್ನ ಸ್ವಯಂ ಆಧೀನದಲ್ಲಿ ಬಂದು ತನ್ನ ಎಲ್ಲಾ ಸಾಧ್ಯತೆಗಳನ್ನು ಅತ್ಯುನ್ನತ ಮತ್ತು ಅತಿ ವಿಶಾಲ ಸ್ಥರದಲ್ಲಿ ಪ್ರಕಟಪಡಿಸುವುದಾಗಿದೆ, ವಿಕಾಸವೆಂದರೆ ನಾಮರೂಪಗಳಲ್ಲಿ ಅಡಗಿರುವ ಆತ್ಮವು ತನ್ನನ್ನು ತಾನು ವಿಮೋಚನೆ–ಗೊಳಿಸಿಕೊಂಡು ತನ್ನ ದೈವತ್ವದ ಮತ್ತು ಚೈತನ್ಯದ ಸ್ಥರದೆಡೆಗೆ ಬೆಳೆಯುವುದು.

ಈ ವಿಕಾಸದಲ್ಲಿ ಮಾನಸಿಕ ಮನುಷ್ಯನಾಗುವುದೇ ಗುರಿ ಮತ್ತು ಮುಕ್ತಾಯ, ಸಂಪೂರ್ಣ ಮೌಲ್ಯ, ಅತ್ಯುನ್ನತ ಕೊನೆಯ ಮಹತ್ವವಲ್ಲ: ಪ್ರಕೃತಿಯ ಈ ವೇದನೆಯ ವಿಕಾಸದ ಕಿರೀಟವಾಗಲು ಆತ ಇನ್ನೂ ತುಂಬಾ ಚಿಕ್ಕ ಮತ್ತು ಅಪೂರ್ಣನಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/334; 22/754–55; 12/219, 166** **– ಶ್ರೀ ಅರವಿಂದರು**

## ನಮ್ಮ ಜ್ಞಾನದಿಂದ ಅವಿತುಕೊಂಡಿರುವ ಮೂಲಭೂತ ವಾಸ್ತವಿಕತೆ ಮತ್ತು 'ನಿಜವಾದ ಜ್ಞಾನ'ದೆಡೆಗೆ ನಾವು ತಲುಪುವ ಸಾಧನ

**– ಅನುವಾದ: ನಾಗಜ್ಯೋತಿ ಮಾನ್ವಿ**

ಎಲ್ಲಾ ಅಸ್ತಿತ್ವವು ಅದರ ನೋಟ ಅಥವಾ ಪ್ರಕ್ರಿಯೆ ಅದು ಆ ಚೈತನ್ಯ ವಸ್ತುವಿನಿಂದಲೇ ತನ್ನೆಲ್ಲಾ ವಸ್ತುವು, ಮೂಲ ಶಕ್ತಿಯು, ಅದರ ಸತ್ಯವು 'ಚೈತನ್ಯ' ವಸ್ತುವಿನಂದಲೇ ಬಂದಿರುತ್ತದೆ. ಈ ವಸ್ತುವೇ ಅಸ್ತಿತ್ವದ ಪ್ರಾರಂಭ ಮಧ್ಯ, ಕೊನೆಯ ಅಂಶವು ಅದೇ ಆಗಿರುತ್ತದೆ, ಇದು ಶಾಶ್ವತ, ಆನಂತ, ಆರಂಭ ಅಥವಾ ಅಂತ್ಯದಾಚೆಗಿರುವ, ಸ್ವಯಂಭೂ, ದೇಶ ಮತ್ತು ಕಾಲಾತೀತ, ಆಕಾರ ಗುಣ ಮತ್ತು ಸಂದರ್ಭಕ್ಕೆ ಮೀರಿದ್ದುದಾಗಿದೆ. ಈ ನಿಜ ಅಸ್ತಿತ್ವವು ನಮ್ಮ ಜ್ಞಾನದಿಂದ ಅಡಗಿದೆ. ಯಾವ ಒಂದೇ ಸತ್ಯದ ಮೇಲೆ ಎಲ್ಲಾ ಸತ್ಯಗಳು ಅವಲಂಬಿತವಾಗಿದೆ; ಯಾವ ಸತ್ಯವು ಅದನ್ನು ಸಮರ್ಥಿಸುತ್ತದೆಯೋ ಮತ್ತು ಯಾವ ಸತ್ಯವು ಅದನ್ನು ವಿರೋಧಿಸುತ್ತದೆಯೋ, ಇವೆರಡೂ ಆ ಸತ್ಯದ ಅಂಶಗಳೇ ಆಗಿವೆ. ಈ ನಿಜ

ಅಸ್ತಿತ್ವದ ಬೇರೆ ತೋರುವಿಕೆಗಳ ಮತ್ತು ಬೇರೆ ಸತ್ಯಗಳ ಜೊತೆಗಿನ ಸರಿಯಾದ ಸಂಬಂಧ ಅರಿವು, ಈ ನಿಜ ಅಸ್ತಿತ್ವದಲ್ಲಿ ಬದುಕಿ, ಅದರ ಸತ್ಯದ ಆಡಳಿತದಲ್ಲಿ ನಮ್ಮ ಅಸ್ತಿತ್ವದ ಪ್ರಜ್ಞೆ, ಗುಣ, ಸಂಕಲ್ಪ, ಕ್ರಿಯೆಗಳು ನಡೆಯುವುದೇ ಪರಿಪೂರ್ಣ ಜೀವನದ ನಿಯಮವಾಗಿದೆ. ಮನುಷ್ಯನ ಜೀವನ ಅಪರಿಪೂರ್ಣವಾಗಿದೆ ಅದು ಏಕೆಂದರೆ ತನ್ನ ಮೂಲಭೂತ ಅಸ್ತಿತ್ವದ ಸತ್ಯದ ಅರಿವಿಲ್ಲದ ಅಜ್ಞಾನದಲ್ಲಿ ತನ್ನೆಲ್ಲಾ ಹುಡುಕಾಟ ನಡೆಸಿದೆ, ಹೀಗಾಗಿ ತನ್ನ ಜೀವನದ ನಿಜ ನಿಯಮವೆಂದರೆ ಅರಿಯದಾಗಿದೆ. ಯಾವಾಗ ಮನುಷ್ಯನು ಈ ಅಜ್ಞಾನ ಮತ್ತು ಆಸಕ್ತತೆಯಿಂದ ಹೊರಗೆ ಬರುತ್ತಾನೋ ಆಗ ಮಾತ್ರ ತನ್ನ ಜೀವನವನ್ನು ಪರಿಪೂರ್ಣ ಮಾಡುವ ಭರವಸೆ ಹೊಂದಬಹುದು. ಕೇವಲ ನಮ್ಮ ತರ್ಕ ಮತ್ತು ಪ್ರಕೃತಿಯ ನಿಯಮಗಳನ್ನು ಉಪಯೋಗಿಸಿ ಅವು ಪರಿಪೂರ್ಣರಾಗಬಹುದೆಂಬ ಭರವಸೆಯು ಹುಸಿಯಾಗಿದೆ. ನಮ್ಮ ಪ್ರಕೃತಿಯು ಅಜ್ಞಾನ ಮತ್ತು ಅಪರಿಪೂರ್ಣವಾಗಿರುವುದರಿಂದ ಅದನ್ನೇ ಉಪಯೋಗಿಸಿಕೊಂಡು ಪರಿಪೂರ್ಣತೆಯೆಡೆಗೆ ಹೋಗಲು ಸಾಧ್ಯವಿಲ್ಲ. ಆದರೆ ಎಲ್ಲದರ ಹಿಂದಿರುವ ಈ ನಿಜ ಅಸ್ತಿತ್ವದ ಸತ್ಯದ ಜ್ಞಾನವನ್ನು ಪಡೆದುಕೊಂಡರೆ ಮತ್ತು ಆ ನಿಜ ಅಸ್ತಿತ್ವದ ಸತ್ಯ, ಬೆಳಕು, ಶಕ್ತಿಯಲ್ಲಿ ಪ್ರವೇಶ ಮಾಡಲು ಸಾಧ್ಯವಾದರೆ, ಆಗ ನಾವು ನಮ್ಮ ಜೀವನವನ್ನು ಸಂಪೂರ್ಣ ಮತ್ತು ದೈವೀಮಯ ಮಾಡಲು ಸಾಧ್ಯವಾಗಬಹುದು. ಯೋಗಮಾರ್ಗದಿಂದ ನಾವು ಇದನ್ನು ಸಾಧಿಸಿಕೊಳ್ಳಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/177–78 – ಶ್ರೀ ಅರವಿಂದರು**

**ಭಾಗ 2**

## ಸಾಧನೆಯಲ್ಲಿ ಏಕೆ ತೊಡಗಿಸಿಕೊಳ್ಳಬೇಕು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ನಿಮಗೆ ಯೋಗವು ಏತಕ್ಕಾಗಿ ಬೇಕು? ಅಧಿಕಾರ ಹೊಂದಲು? ಶಾಂತಿ ಹಾಗೂ ನೆಮ್ಮದಿಯನ್ನು ಪಡೆಯಲು? ಮಾನವ ಕುಲವನ್ನು ಸೇವೆ ಮಾಡಲು?

ನೀವು ಯೋಗಪಥಕ್ಕಾಗಿ ಉದ್ದೇಶಿಸಿದ್ದೀರಿ ಎಂದು ತೋರಿಸಲು ಈ ಯಾವುದೇ ಕಾರಣಗಳು ಸಾಕಾಗುವುದಿಲ್ಲ.

ನೀವು ಉತ್ತರಿಸಬೇಕಾದ ಪ್ರಶ್ನೆ ಇದಾಗಿದೆ: ದೇವರಿಲ್ಲದೆ ನಾನು ಏನನ್ನೂ ಮಾಡಲು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ದೇವರು ನಿಮ್ಮ ಜೀವನದ ಅತ್ಯುನ್ನತ ವಾಸ್ತವಾಂಶವಾಗಿದೆಯೆ? ನೀವು ಬದುಕಲು ಬೇಕಾದ ಮುಖ್ಯ ಕಾರಣವು ದೇವರೆಂದು ಮತ್ತು ದೇವರಿಲ್ಲದೆ ನಿಮ್ಮ ಅಸ್ತಿತ್ವಕ್ಕೆ ಬೆಲೆಯೇ ಇಲ್ಲವೆಂದು ನಿಮ್ಮ ಭಾವನೆಯೆ? ಹಾಗಿದ್ದಲ್ಲಿ ನಿಮಗೆ ಯೋಗ ಮಾರ್ಗಕ್ಕೆ ಆಹ್ವಾನವಿದೆಯೆಂದು ಮಾತ್ರ ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/1**

*

***ಪ್ರಶ್ನೆ: ಈ ವಿಮೋಚನೆಯನ್ನು, ವಿಪುಲತೆಯನ್ನು, ನಮ್ಮ ಸ್ವಂತಕ್ಕಾಗಿ ಬೆನ್ನಟ್ಟಬಾರದು, ಆದರೆ ದೇವರ ಸಲುವಾಗಿ ಬೆನ್ನಟ್ಟಬೇಕು. [ಶ್ರೀ ಅರವಿಂದರು]***

**ಆದರೆ ನಾವು ಮಾಡುವ ಸಾಧನೆಯು ನಮಗೋಸ್ಕರ ಅಲ್ಲವೇ?**

ಅವರು ಅದಕ್ಕೇ ನಿಖರವಾಗಿ ಒತ್ತುಕೊಡುತ್ತಾರೆ. ಅದು ವಿಷಯವನ್ನು ಸೂಚಿಸುವ ಸಲುವಾಗಿ ಮಾತ್ರ. ಅಂದರೆ, ನಾವು ಪಡೆದುಕೊಳ್ಳಲಿರುವ ಈ ಎಲ್ಲ ಪರಿಪೂರ್ಣತೆಯು ನಮ್ಮ ವೈಯಕ್ತಿಕ ಹಾಗೂ ಸ್ವಾರ್ಥದ ಉದ್ದೇಶಕ್ಕಾಗಿ ಅಲ್ಲ, ಅದು ದೈವೀ ಪ್ರಕಟಣೆಯನ್ನು ಸಾಧ್ಯವಾಗಿಸುವುದಕ್ಕಾಗಿ, ಅದನ್ನು ದೈವೀ ಸೇವೆಗಾಗಿ ಮೀಸಲಿಡಲು. ನಾವು ಈ ಪ್ರಗತಿಯನ್ನು ವೈಯಕ್ತಿಕ ಪರಿಪೂರ್ಣತೆಯ ಸ್ವಾರ್ಥದ ಇರಾದೆಯಿಂದ ಬೆನ್ನು ಹತ್ತಿಲ್ಲ: ದೈವೀ ಕಾರ್ಯವು ಪೂರ್ಣವಾಗಬೇಕೆಂದು ನಾವು ಇದರ ಬೆನ್ನ ಹಿಂದೆ ಬಿದ್ದಿದ್ದೇವೆ.

***ಪ್ರಶ್ನೆ: ಆದರೆ, ನಾವು ಈ ದೈವೀ ಕಾರ್ಯವನ್ನು ಏಕೆ ಮಾಡಬೇಕು? ನಮ್ಮನ್ನು ನಾವು ರೂಪಿಸಿಕೊಳ್ಳಲು....***

ಇಲ್ಲ, ಎಂದಿಗೂ ಇಲ್ಲ! ಯಾಕೆಂದರೆ ಅದು ದೈವೇಚ್ಛೆ. ಅದು ಸ್ವ–ಕಾರಣಕ್ಕಾಗಿ ಅಲ್ಲವೇ ಅಲ್ಲ, ಅದು ಹಾಗಾಗಿರಬಾರದು. ಯಾಕೆಂದರೆ, ಅದು ದೈವೀ ಕಾರ್ಯ ಮತ್ತು ದೈವೀ ಇಚ್ಛೆ.

ಎಲ್ಲಿಯವರೆಗೆ ವೈಯಕ್ತಿಕ ಅಭೀಪ್ಸೆ ಅಥವಾ ಅಪೇಕ್ಷೆ, ಒಂದು ವೈಯಕ್ತಿಕ ಸಂಕಲ್ಪ ಅದರಲ್ಲಿ ಬೆರೆಯುತ್ತದೆಯೊ, ಅದು ಯಾವಾಗಲೂ ಕಲಬೆರಕೆಯನ್ನು ಸೃಷ್ಟಿಸುತ್ತದೆ ಮತ್ತು ಅದು ನಿಖರವಾಗಿ ದೈವೀ ಇಚ್ಛೆಯ

ಅಭಿವ್ಯಕ್ತಿಯಾಗಿರುವುದಿಲ್ಲ. ಇಲ್ಲಿ ಗಣನೆಗೆ ಬರುವಂಥದ್ದು ದೈವ, ದೈವೀ ಇಚ್ಛೆ, ಅವನ ಪ್ರಕಟಣೆ, ಅವನ ಅಭಿವ್ಯಕ್ತಿ. ನಾವಿಲ್ಲಿರುವುದು ಅದಕ್ಕಾಗಿ, ಮತ್ತೇನೂ ಅಲ್ಲ. ಎಲ್ಲಿಯವರೆಗೆ ಆತ್ಮನ ಅಹಮಿಕೆಯ, ವ್ಯಕ್ತಿಯ ಭಾವನೆಯ, ಪುರುಷನ ಪ್ರವೇಶಿಸುವ ಭಾವನೆಯು ಇರುತ್ತದೆಯೊ, ನಾವು ಏನಾಗಬೇಕೆಂದುಕೊಂಡಿದ್ದೆವೋ ಅದಾಗಲಿಲ್ಲ ಎಂಬುದನ್ನು ನಿರೂಪಿಸುತ್ತದೆ, ಅಷ್ಟೆ. ಬೆಳಗಾಗುವುದರೊಳಗಾಗಿ ಇದನ್ನು ಮಾಡಬಹುದು ಎಂದು ನಾನು ಹೇಳುತ್ತಿಲ್ಲ, ಆದರೂ ಇದು ವಾಸ್ತವಾಂಶ.

ಈ ಆಧ್ಯಾತ್ಮ ಕ್ಷೇತ್ರದಲ್ಲಿಯೂ ಸಹ ಬಹಳಷ್ಟು ಜನರು, ಯೋಗ ಸಾಧನೆಯನ್ನು ಮಾಡುವವರು ತಮ್ಮೆಲ್ಲ ವೈಯಕ್ತಿಕ ಕಾರಣಗಳಿಗಾಗಿ ಮಾಡುತ್ತಾರೆ: ಕೆಲವರು ಜೀವನದಿಂದ ವಿಮುಖರಾಗಿರುತ್ತಾರೆ, ಅದಕ್ಕಾಗಿ ಮಾಡುತ್ತಾರೆ, ಕೆಲವರು ನೆಮ್ಮದಿ ಇಲ್ಲದ ಕಾರಣ ಮಾಡುತ್ತಾರೆ, ಇನ್ನೂ ಕೆಲವರು ಹೆಚ್ಚಿನದನ್ನು ತಿಳಿದುಕೊಳ್ಳಲು ಮಾಡುತ್ತಾರೆ, ಕೆಲವರು ಆಧ್ಯಾತ್ಮಿಕವಾಗಿ ಶ್ರೇಷ್ಠರಾಗಲು ಮಾಡುತ್ತಾರೆ, ಕೆಲವರು ಇನ್ನೊಬ್ಬರಿಗೆ ಸಾಧನೆಯನ್ನು ಮಾಡಲು ಕಲಿಸಲು ಸಾಧನೆ ಮಾಡುತ್ತಾರೆ: ವಾಸ್ತವವಾಗಿ ಯೋಗವನ್ನು ಮಾಡುವ ಸಾವಿರಾರು ಕಾರಣಗಳಿಗೆ ನಮ್ಮನ್ನು ನಾವು ದೈವಕ್ಕೆ ಅರ್ಪಿಸಿಕೊಳ್ಳುವುದರಿಂದ, ದೈವವು ನಮ್ಮನ್ನು ಸ್ವೀಕರಿಸುತ್ತದೆ ಮತ್ತು ತನ್ನಿಚ್ಛೆಯಂತೆ ನಮ್ಮನ್ನು ರೂಪಿಸುತ್ತದೆ. ಬಹಳಷ್ಟು ಜನರು ಅದರ ಪರಿಶುದ್ಧತೆಯಲ್ಲಿ ಮತ್ತು ಸ್ಥಿರತೆಯಲ್ಲಿ ಮಾಡುವುದಿಲ್ಲ ಎನ್ನುವುದು ವಾಸ್ತವಾಂಶ. ಇದರೊಂದಿಗೆ ನಾವು ನೇರವಾಗಿ (ತಪ್ಪುಗಳನ್ನು ಮಾಡುವ ಅಪಾಯವಿಲ್ಲದೆಯೆ) ಗುರಿಯೆಡೆಗೆ ಹೋಗುತ್ತೇವೆ. ಆದರೆ ಉಳಿದೆಲ್ಲ ಪ್ರೇರಣೆಗಳು ಯಾವಾಗಲೂ ಮಿಶ್ರವಾಗಿರುತ್ತವೆ, ಅಹಮಿಕೆಯೊಂದಿಗೆ ದೋಷಪೂರಿತವಾಗಿರುತ್ತಾರೆ: ಸ್ವಾಭಾವಿಕವಾಗಿ ಅವರು ನಿಮ್ಮನ್ನು ಅಲ್ಲಿ ಮತ್ತು ಇಲ್ಲಿ ಕೊನೆಗೆ ಗುರಿಯಿಂದ ಬಹುದೂರ ಕರೆದುಕೊಂಡು ಹೋಗುತ್ತಾರೆ.

ನಿನ್ನನ್ನು ನೀನು ವ್ಯತ್ಯಾಸವನ್ನು ಮಾಡಿಕೊಳ್ಳಲು ಸಾಧ್ಯವಾಗದಿರುವಂಥ ಘಟ್ಟದವರೆಗೆ, ಆ ದೈವಕ್ಕೆ ಸಮಗ್ರವಾದ, ಪರಿಪೂರ್ಣವಾದ, ಸಂಪೂರ್ಣವಾದ ಮುಡಿಪಾಗಿರುವ, ಸಮಗ್ರವಾಗಿ, ಪೂರ್ಣವಾಗಿ, ಯಾವುದೇ ವೈಯಕ್ತಿಕ ಪ್ರತಿಕ್ರಿಯೆಯು ಹಸ್ತಕ್ಷೇಪವಿಲ್ಲ ಎಂಬ ಭಾವನೆಯು ಅತ್ಯುತ್ತಮ ಭಾವನೆಯಾಗಿದೆ: ಇದು ಮಾತ್ರ ನಿನಗೆ ಅಪಾಯವಾದ ಎಲ್ಲದರಿಂದ ರಕ್ಷಿತವಾದ ಮತ್ತು ನಿನ್ನಿಂದ

ರಕ್ಷಿತವಾದ ರೀತಿಯಲ್ಲಿ ನೀನು ಜೀವನದಲ್ಲಿ ಮತ್ತು ಕಾರ್ಯದಲ್ಲಿ ಮುಂದೆ ಹೋಗಲು ಸಾಧ್ಯವಾಗಿಸುತ್ತದೆ – 'ಸ್ವಯಂ'ಕ್ಕಿಂತ ಹೆಚ್ಚು ಅಪಾಯವಾದುದು ಯಾವುದೂ ಇಲ್ಲ ('ಸ್ವಯಂ' ಎಂದರೆ ಅಹಂಕಾರವುಳ್ಳ ಸ್ವಯಂ ಎಂಬ ಅರ್ಥದಲ್ಲಿ)...

***ಪ್ರಶ್ನೆ: ಆದರೆ, ಈ ಗೊಂದಲದಲ್ಲಿ 'ದೈವಿಕ'ವು ತನ್ನನ್ನು ತಾನು ಭೂಮಿಯ ಮೇಲೆ ಪ್ರಕಟಗೊಳಿಸಲು ಏಕೆ ಬಯಸುತ್ತದೆ?***

ಯಾಕೆಂದರೆ, ಈ ಭೂಮಿಯನ್ನು ಅವನು ಸೃಷ್ಟಿಸಿದ್ದು ಇದಕ್ಕಾಗಿ, ಮತ್ತಾವ ಉದ್ದೇಶಕ್ಕೂ ಅಲ್ಲ: ಈ ಭುವಿಯು ಅವನೇ (ದೈವಿಕ) ಆಗಿದೆ. ಆದರೆ ವಿರೂಪದಲ್ಲಿ ಮತ್ತು ಅದನ್ನು ತನ್ನ ಸತ್ಯತೆಯಲ್ಲಿ ಪುನಃ ಮರುಸ್ಥಾಪಿಸಲು ಬಯಸುತ್ತದೆ. ಈ ಭೂಮಿಯು ಅವನಿಂದ ಬೇರೆಯಾದ ಏನೋ ಒಂದು ವಸ್ತು ಅಲ್ಲ ಮತ್ತು ಅದು ಅವನಿಗೆ ಪರಕೀಯ ಕೂಡ ಅಲ್ಲ. ಅದು (ಭೂಮಿಯು) ಅವನ ವಿರೂಪವಾಗಿದೆ ಮತ್ತು ಅದು ತನ್ನ ಮೂಲ ತತ್ವದಲ್ಲಿ ಏನಾಗಿದೆಯೋ ಅದು ಪುನಃ ಆಗಬೇಕು – ಅದು ದೈವಿಕ.

***ಪ್ರಶ್ನೆ: ಹಾಗಾದರೆ, ಅವನೇಕೆ ನಮಗೆ ಅಪರಿಚಿತನಾಗಿದ್ದಾನೆ?***

ಮಗು, ಅವನು ಅಪರಿಚಿತನಲ್ಲ. ಅವನು ಅಪರಿಚಿತನೆಂಬುದು ನಿನ್ನ ಭ್ರಾಂತಿ, ಆದರೆ ಅವನು ಭ್ರಾಂತಿಯಲ್ಲ. ಆವನು ನಿನ್ನ ಮೂಲತತ್ವವಾಗಿದ್ದಾನೆ – ಪರಕೀಯ ಅಂತು ಅಲ್ಲವೇ ಅಲ್ಲ. ಅವನನ್ನು ನೀನು ತಿಳಿದುಕೊಂಡಿರಲಿಕ್ಕಿಲ್ಲ, ಆದರೆ ಅವನು ಅಪರಿಚಿತನಲ್ಲ: ನಿನ್ನ ಅಸ್ತಿತ್ವದ ಮೂಲತತ್ವ ಅವನಾಗಿದ್ದಾನೆ. ದೇವರಿಲ್ಲದೆ ನೀನಿರಲು ಸಾಧ್ಯವಿಲ್ಲ. ದೇವರಿಲ್ಲದೆ ಅರೆಕ್ಷಣವೂ ಸಹ ನೀನಿರಲಾರೆ. ನೀನು ಒಂದು ಬಗೆಯ ತಪ್ಪು ಕಲ್ಪನೆಯಲ್ಲಿ ಮತ್ತು ವಿಕಾರದಲ್ಲಿ ಇರುವಿ, ನಿನಗೆ ಅರಿವಿಲ್ಲ. ನಿನ್ನ ಅರಿವು ನಿನಗಿಲ್ಲ, ನೀನು ಏನೋ ಆಗಿರುವಿ ಎಂಬ ಕಲ್ಪನೆಯ ಅರಿವು ನಿನಗಿದೆ, ಆದರೆ ಅದು ನೀನಲ್ಲ.

***ಪ್ರಶ್ನೆ: ಹಾಗಾದರೆ ನಾನು ಯಾರು, ಪ್ರೀತಿಯ ಮಾತೆಯವರೆ?***

**ದಿವ್ಯ ಪುರುಷ!**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/198–99 – ಶ್ರೀಮಾತೆ**

## ಯೋಗದಲ್ಲಿ, ಸಾಧಕ ಯಾರು? ಮತ್ತು ಸಾಧನವೇನು?

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ವಿಶ್ವದಲ್ಲಿ ಆಗುತ್ತಿರುವ ಎಲ್ಲ ಕ್ರಿಯೆಗಳ ಹಿಂದೆ ದಿವ್ಯ ಪುರುಷನು ತನ್ನ ಶಕ್ತಿಯೊಂದಿಗಿದ್ದಾನೆ. ಆದರೆ ಅವನು ತನ್ನ ಯೋಗ ಮಾಯೆಯಿಂದ ಮರೆಯಾಗಿದ್ದಾನೆ. ಅವನು ಜೀವಾತ್ಮನ ಮುಖಾಂತರ ನಿಮ್ನ ಪ್ರಕೃತಿಯಲ್ಲಿ ಕಾರ್ಯಗತನಾಗಿದ್ದಾನೆ.

ಯೋಗದಲ್ಲಿಯೂ ಸಹ ದಿವ್ಯ ಪುರುಷನು ಸಾಧಕ ಮತ್ತು ಸಾಧನವಾಗಿದ್ದಾನೆ: ಅವಳ ಬೆಳಕಿನೊಂದಿಗೆ, ಪ್ರಭಾವದೊಂದಿಗೆ, ಜ್ಞಾನದೊಂದಿಗೆ, ಪ್ರಜ್ಞೆಯೊಂದಿಗೆ, ಆದಂರೊಂದಿಗೆ ಆಧಾರದ ಮೇಲೆ ಕಾರ್ಯ ಪ್ರವೃತ್ತವಾಗುತ್ತ ಇರುವುದು ಅವನ ಶಕ್ತಿಯಾಗಿದೆ ಮತ್ತು ಇದು ಅವಳಿಗೆ ತೆರೆದುಕೊಂಡಾಗ, ಈ ಎಲ್ಲ ದಿವ್ಯ ಶಕ್ತಿಗಳನ್ನು ಅದರಲ್ಲಿ ಸುರಿದಾಗ ಸಾಧನೆಯು ಸಾಧ್ಯವಾಗುತ್ತದೆ. ನಿಮ್ನ ಪ್ರಕೃತಿಯು ಕ್ರಿಯಾತ್ಮಕವಾಗಿರುವವರೆಗೆ ಸಾಧಕನ ವೈಯಕ್ತಿಕ ಪ್ರಯತ್ನವು ಅವಶ್ಯವಾಗಿ ಇರಬೇಕಾಗುತ್ತದೆ.

ಇದಕ್ಕೆ ಬೇಕಾದ ವೈಯಕ್ತಿಕ ಪ್ರಯತ್ನವು, ಅಭೀಪ್ಸೆ, ನಿರಾಕರಣೆ ಮತ್ತು ಸಮರ್ಪಣೆಯ ಶ್ರಮದ ಮೂರರಷ್ಟಾಗಿದೆ...

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/6** SABCL **25/6–7**

ಈ ಯೋಗದಲ್ಲಿರುವ ಪೂರ್ಣ ತತ್ವವೇನೆಂದರೆ, ನಮ್ಮನ್ನು ನಾವು ದೈವೀ ಪ್ರಭಾವಕ್ಕೆ ತೆರೆದುಕೊಳ್ಳುವುದು. ಅದು ನಿಮ್ಮ ಮೇಲೆ ಇದೆ, ಒಂದೊಮ್ಮೆ ಅದರ ಅರಿವು ನಿಮಗೆ ಬಂದಾಗ, ಅದನ್ನು ನಿಮ್ಮಲ್ಲಿ ಕೆಳ ತರಬೇಕು. ಅದು ನಿಮ್ಮ ಮನಸ್ಸಿನಲ್ಲಿ ಮತ್ತು ದೇಹದಲ್ಲಿ ಶಾಂತಿಯಾಗಿ, ಬೆಳಕಾಗಿ ಕಾರ್ಯ ಮಾಡುವಂಥ ಒಂದು ಬಲವಾಗಿ, ದೈವೀ ಉಪಸ್ಥಿತಿಯಾಗಿ (ಮೂರ್ತ ಅಥವಾ ಅಮೂರ್ತ), ಆನಂದವಾಗಿ ಕೆಳಗಿಳಿಯುತ್ತದೆ. ನಾವು ಈ ಪ್ರಜ್ಞೆಯನ್ನು ಹೊಂದುವುದಕ್ಕಿಂತ ಮೊದಲು ನಮ್ಮಲ್ಲಿ ನಂಬಿಕೆ ಇರಬೇಕು ಮತ್ತು ತೆರೆದುಕೊಳ್ಳುವಿಕೆಗಾಗಿ ಹಂಬಲಿಸಬೇಕು. ಅಭೀಪ್ಸೆ, ಕರೆ, ಪ್ರಾರ್ಥನೆ ಎಲ್ಲವೂ ಒಂದೇ ವಸ್ತುವಿನ ರೂಪಗಳು ಮತ್ತು ಎಲ್ಲವೂ ಪರಿಣಾಮಕಾರಿಯಾಗಿವೆ: ನಿನಗೆ ಬಂದಂಥಹ

ರೂಪವನ್ನು ಸ್ವೀಕರಿಸು ಅಥವಾ ನಿನಗೆ ಸುಲಭವಾದದ್ದನ್ನು ಸ್ವೀಕರಿಸು. ಮತ್ತೊಂದು ಮಾರ್ಗವೆಂದರೆ, ಏಕಾಗ್ರತೆ (ತನ್ಮಯತೆ): ನಿಮ್ಮ ಪ್ರಜ್ಞೆಯನ್ನು ನಿಮ್ಮ ಹೃದಯದಲ್ಲಿ ಏಕಾಗ್ರಗೊಳಿಸಿ (ಕೆಲವರು ತಲೆಯಲ್ಲಿ ಅಥವಾ ತಲೆಯ ಮೇಲೆ ಮಾಡುತ್ತಾರೆ) ಮತ್ತು ಹೃದಯದಲ್ಲಿ ಶ್ರೀಮಾತೆಯವರ ಧ್ಯಾನ ಮಾಡಿರಿ ಹಾಗೂ ಅವರನ್ನು ಆಹ್ವಾನಿಸಿರಿ. ನಾವು ಈ ವಿಧಗಳಲ್ಲಿ, ಯಾವುದಾದರೊಂದನ್ನು ಮಾಡಬಹುದು ಅಥವಾ ಎರಡನ್ನೂ ಬೇರೆ–ಬೇರೆ ಸಮಯಗಳಲ್ಲಿ ಮಾಡಬಹುದು. ನಮ್ಮ ಮನಸ್ಸನ್ನು ಶಾಂತಗೊಳಿಸುವುದು, ಧ್ಯಾನದ ಸಮಯದಲ್ಲಿ ಸಾಧನೆಗೆ ಬಾಹ್ಯವಾದ ಎಲ್ಲ ಆಲೋಚನೆಗಳನ್ನು, ಚಲನೆಗಳನ್ನು ತಿರಸ್ಕರಿಸುವುದು ಪ್ರಾರಂಭದಲ್ಲಿ ಬೇಕಾದ ಅತಿ ಅವಶ್ಯಕತೆಗಳಾಗಿವೆ. ಶಾಂತ ಮನಸ್ಸಿನಲ್ಲಿ ಅನುಭವಕ್ಕಾಗಿ ಪ್ರಗತಿಪರ ತಯಾರಿ ನಡೆದಿರುತ್ತದೆ. ನೀವು ನಿಮ್ಮ ಸಂಯಮವನ್ನು ಕಳೆದುಕೊಳ್ಳಬಾರದು; ಶಾಂತಿಯನ್ನು ಮನಸ್ಸಿನಲ್ಲಿ ತರಲು ಸಮಯ ಬೇಕಾಗುತ್ತದೆ; ಪ್ರಜ್ಞೆಯು ಸಿದ್ಧವಾಗುವವರೆಗೆ ಇದನ್ನು ಅಭ್ಯಾಸ ಮಾಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/106** SABCL **23/604–05**

ಅಂತರಂಗದಿಂದ ಪ್ರಕಟಗೊಳಿಸುವಿಕೆ ಅಥವಾ ಅವರೋಹಣ, ಎರಡೂ ಮಾರ್ಗಗಳು ಯೋಗಸಿದ್ಧಿಯ ಶ್ರೇಷ್ಠ ಮಾರ್ಗಗಳಾಗಿವೆ. ಬಾಹ್ಯ ಮನಸ್ಸಿನ ಅಥವಾ ಭಾವಗಳ ಪ್ರಯತ್ನ, ಒಂದು ರೀತಿಯ ತಪಸ್ಸು ಈ ವಿಷಯಗಳನ್ನು ನಿರ್ಮಿಸುವಂತೆ ತೋರಬಹುದು, ಆದರೆ ಮೂಲಸ್ವರೂಪದ ಮಾರ್ಗಗಳ ಪರಿಣಾಮಗಳಿಗೆ ಹೋಲಿಸಿದರೆ ಈ ಮಾರ್ಗಗಳ ಪರಿಣಾಮಗಳು ಸಾಮಾನ್ಯವಾಗಿ ಅನಿಶ್ಚಿತವಾಗಿರುತ್ತವೆ ಮತ್ತು ಅಪೂರ್ಣವಾಗಿರುತ್ತವೆ. ಆದ್ದರಿಂದ ಈ ಯೋಗದಲ್ಲಿ ನಾವು ಯಾವಾಗಲೂ "ತೆರೆದುಕೊಳ್ಳುವಿಕೆಗೆ (ವಿಕಸನಕ್ಕೆ)" ಒತ್ತು ಕೊಡುತ್ತೇವೆ – ಆಂತರಿಕ ಮನಸ್ಸಿನ ಅಂತರಂಗದಿಂದ, ಪ್ರಾಣಿಕದಿಂದ, ಭೌತಿಕದಿಂದ ನಮ್ಮ ಅಂತರಾಳದ ಭಾಗವಾದ ಚೈತ್ಯನೆಡೆಗೆ ವಿಕಸನ ಮತ್ತು ಮನಸ್ಸಿನ ಮೇಲೆ ಏನಿದೆಯೋ ಅದರ ಕಡೆಗೆ ವಿಕಸನ – ಸಾಧನೆಯ ಫಲಗಳಿಗಾಗಿ ಅನಿವಾರ್ಯವಾಗಿರುವಂತೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/324** SABCL **24/1163–64**

**(ಅನುಯಾಯಿಗೆ ಬರೆದ ಒಂದು ಪತ್ರದಿಂದ)**

ನೈಜ ಸಮರ್ಪಣೆಯಾಗಲಿ, ದಿವ್ಯಮಾತೆಯವರ ಕರಗಳಲ್ಲಿ ನಿಮ್ಮನ್ನು ನೀವು ಮುಕ್ತವಾಗಿ ಮತ್ತು ಸರಳವಾಗಿ ಅರ್ಪಿಸಿಕೊಳ್ಳುವುದಾಗಲಿ ಇಲ್ಲಿ ಎಂದಿಗೂ ಆಗಿಲ್ಲ. ಆದಾಗ್ಯೂ, ಅತಿಮಾನಸ ಯೋಗದಲ್ಲಿ ಯಶಸ್ವಿಯಾಗಲು ಇರುವ ಏಕಮಾತ್ರ ಮಾರ್ಗ ಅದೊಂದೆ. ಇಲ್ಲಿಯ ಉದ್ದೇಶ ಯೋಗಿಯಾಗುವುದು, ಸನ್ಯಾಸಿಯಾಗುವುದು, ತಪಸ್ವಿಯಾಗುವುದು ಅಲ್ಲ. ಪರಿವರ್ತನೆಯು ಉದ್ದೇಶವಾಗಿದೆ ಮತ್ತು ಪರಿವರ್ತನೆಯು ನಿಮ್ಮ ಬಲಕ್ಕಿಂತ ಅನಂತವಾದ ಬಲದಿಂದ ಮಾಡಲು ಮಾತ್ರ ಸಾಧ್ಯ. ದಿವ್ಯಮಾತೆಯವರ ಕರಗಳಲ್ಲಿ ಒಂದು ಪುಟ್ಟ ಮಗುವಿನಂತೆ ಇರುವುದರಿಂದ ಮಾತ್ರ ಪರಿವರ್ತನೆಯು ಸಾಧ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/143** SABCL **25/129**

**– ಶ್ರೀ ಅರವಿಂದರು**

## ಮುಕ್ತತೆ ಎಂದರೆ ಏನು ಮತ್ತು ನಮ್ಮನ್ನು ನಾವು ಹೇಗೆ ತೆರೆದುಕೊಳ್ಳಬೇಕು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಅರಳುವಿಕೆ ಅಥವಾ ವಿಕಸನ ಎಂದರೆ ಶ್ರೀಮಾತೆಯವರ ಶಕ್ತಿಯು ಯಾವುದನ್ನೂ ತಿರಸ್ಕಾರ ಮಾಡದೆ ಅವರ ಕಾರ್ಯವನ್ನು ವಿರೋಧಿಸದೆ ನಮ್ಮಲ್ಲಿ ಕೆಲಸ ಮಾಡುವಂತಾಗಲು ಅವರ ಕಡೆಗೆ ಹೊರಳುವುದು. ಮನಸ್ಸು ತನ್ನ ಸ್ವಂತ ಕಲ್ಪನೆಗಳಲ್ಲಿ ಬಂದಿಯಾದರೆ ಮತ್ತು ಬೆಳಕನ್ನು ಹಾಗೂ ಸತ್ಯವನ್ನು ಶ್ರೀಮಾತೆಯವರು ತರುವುದನ್ನು ತಡೆದರೆ, ನಮ್ಮ ಪ್ರಾಣಿಕವು ತನ್ನ ಕಾಮನೆಗಳಿಗೆ ಅಂಟಿಕೊಂಡು, ಶ್ರೀಮಾತೆಯವರು ಪ್ರಭಾವವು ತರುವಂಥ ನೈಜ ಪ್ರಾರಂಭ ಹಾಗೂ ಉದ್ವೇಗಗಳನ್ನು ಅಂಗೀಕರಿಸದಿದ್ದರೆ, ಭೌತಿಕವು ತನ್ನ ಕಾಮನೆಗಳಲ್ಲಿ, ಹವ್ಯಾಸಗಳಲ್ಲಿ ಮತ್ತು ಜಡತ್ವದಲ್ಲಿ ಬಂದಿಯಾದರೆ ಮತ್ತು ಬೆಳಕನ್ನು ಹಾಗೂ ಬಲವನ್ನು ಇವುಗಳಲ್ಲಿ ಪ್ರವೇಶ ಮಾಡಲು ಹಾಗೂ ಕಾರ್ಯಪ್ರವೃತ್ತವಾಗುವುದನ್ನು ತಡೆ ಹಿಡಿದರೆ, ನಾವು ಅರಳುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/151** SABCL **25/123–24**

ಅರಳುವಿಕೆಯು ಸ್ವ–ಇಚ್ಛೆ ಮತ್ತು ಅಭೀಪ್ಸೆಯಿಂದ ತನ್ನಷ್ಟಕ್ಕೆ ತಾನು ಸಂಭವಿಸುವ ವಿಷಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/105** SABCL **23/604**

ಅರಳಲು ಇರುವಂಥ ಒಂದು ಅತ್ಯುತ್ತಮ ಮಾರ್ಗವೆಂದರೆ, ಸಮರ್ಪಣೆ: ಒಂದು ಹಂತದವರೆಗೆ ಅಭೀಪ್ಸೆ ಹಾಗೂ ಪ್ರಶಾಂತತೆಗಳು ಆ ಕೆಲಸವನ್ನು ಮಾಡಬಲ್ಲವು – ಸಮರ್ಪಣೆಯು ಅಲ್ಲಿ ಇಲ್ಲದಿರುವವರೆಗೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/106** SABCL **23/603**

ನಿಮ್ಮ ಪ್ರಜ್ಞೆಯು ಸಿದ್ಧವಾದಾಗ, ಶ್ರೀಮಾತೆಯರಲ್ಲಿನ ಭರವಸೆಯಿಂದ ಅಗತ್ಯವಾದ ಅರಳುವುಕೆಯು ಬರುವುದು...

ಅಗತ್ಯವಿದ್ದದ್ದು ಬರೀ ಧ್ಯಾನದಿಂದಲೇ ಬರುವುದಿಲ್ಲ. ಅದು ಶ್ರೀಮಾತೆಯವರಲ್ಲಿ ನಮ್ಮ ನಂಬಿಕೆಯಿಂದ ಮತ್ತು ಮುಕ್ತತೆಯಿಂದ ಬರುವಂಥದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/109** SABCL **23/604**

ಶ್ರೀಮಾತೆಯವರಿಗೆ ನಿಮ್ಮನ್ನು ನೀವು ಮುಕ್ತವಾಗಿರಿಸಿಕೊಳ್ಳಿ, ಅವರನ್ನು ಯಾವಾಗಲೂ ಸ್ಮರಿಸುತ್ತ ಇರಿ ಹಾಗೂ ಅವರ ಶಕ್ತಿಯು ನಿಮ್ಮಲ್ಲಿ ಕೆಲಸ ಮಾಡಲು ಬಿಡಿ – ಅದು ಯೋಗದ ನಿಯಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/109** SABCL **23/604**

ನಿನ್ನ ಕಡೆಯ ಯಾವುದೇ ಪ್ರಯತ್ನವಿಲ್ಲದೆ ದೈವೀ ಬಲವು ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಸತ್ಯವಾಗಿದೆ. ದೈವೀ ಕಾರ್ಯಕ್ಕಾಗಿ ಬೇಕಾಗಿದ್ದು ಪ್ರಯತ್ನವಲ್ಲ, ಪುರುಷನ ಸಮ್ಮತಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/721** SABCL **23/697**

ಶ್ರೀಮಾತೆಯವರಿಗೆ ಮುಕ್ತವಾಗಬೇಕಾದರೆ, ಯಾವಾಗಲೂ ನಿಶ್ಚಲವಾಗಿ, ಆನಂದವಾಗಿ, ಮತ್ತು ಧೈರ್ಯದಿಂದ ಇರಬೇಕಾಗುವುದು, ಚಂಚಲವಾಗಿರಬಾರದು, ದುಃಖಿಸುತ್ತಿರಬಾರದು ಅಥವಾ ಎದೆಗುಂದಬಾರದು. ಶ್ರೀಮಾತೆಯವರ ಶಕ್ತಿಯು ನಿಮ್ಮಲ್ಲಿ ಕಾರ್ಯ ಮಾಡಲು ನಿಮಗೆ ಮಾರ್ಗದರ್ಶನ ಮಾಡಲು, ನಿಮಗೆ ಜ್ಞಾನವನ್ನು ಕೊಡಲು, ನಿಮಗೆ ಶಾಂತಿ ಮತ್ತು ಆನಂದವನ್ನು ಕೊಡಲು ನಾವು ಮುಕ್ತರಾಗಿರಬೇಕು. ನಿಮ್ಮನ್ನು ನೀವು ಮುಕ್ತವಾಗಿ ಇಟ್ಟುಕೊಳ್ಳದಿದ್ದಾಗ, ಸತತವಾಗಿ ಆದರೆ ಪ್ರಶಾಂತವಾಗಿ ಹಂಬಲಿಸುವುದರಿಂದ ನೀವು ತೆರೆದುಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/151** SABCL **25/124**

ಶ್ರೇಷ್ಠ ಪ್ರಜ್ಞೆಗಾಗಿ ಮುಕ್ತತೆ ಮತ್ತು ಅವಶ್ಯವಿದ್ದಾಗ ಜಡತ್ವ, ಆದರೆ ಮತ್ತಿನ್ಯಾವುದೋ ಬರುವಂಥದ್ದಕ್ಕೆ ಅಲ್ಲ. ಆದುದರಿಂದ ಜಡತ್ವದಲ್ಲಿಯೂ ಸಹ ಒಂದು ನಿಶ್ಚಿತವಾದ ಎಚ್ಚರಿಕೆ ಅಲ್ಲಿರಬೇಕು. ಇಲ್ಲದಿದ್ದರೆ ತಪ್ಪು ಚಲನೆಗಳು ಅಥವಾ ಜಡತೆ ಅಲ್ಲಿರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/119** SABCL **23/607**

ಕರ್ಮವು ಯೋಗದ ಭಾಗ ಮತ್ತು ಅದು ಸಾನಿಧ್ಯವನ್ನು, ಬೆಳಕನ್ನು ಮತ್ತು ಪ್ರಭಾವವನ್ನು ಪ್ರಾಣಿಕದಲ್ಲಿ ಮತ್ತು ಅದರ ಚಟುವಟಿಕೆಗಳಲ್ಲಿ ಕೆಳಗೆ ಕರೆತರಲು ಒಂದು ಉತ್ತಮ ಅವಕಾಶ: ಅದು ಶರಣಾಗತಿಯ ಕ್ಷೇತ್ರವನ್ನು ಮತ್ತು ಅವಕಾಶವನ್ನು ಸಹ ಹೆಚ್ಚಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/247** SABCL **25/200**

ಭೌತಿಕವಾಗಿ ಶ್ರೀಮಾತೆಯವರಿಗೆ ಮುಕ್ತವಾಗಿರುವುದರಿಂದ, ಕಾಯಕಕ್ಕಾಗಿ ಅಥವಾ ಸಾಧನೆಗಾಗಿ ಬೇಕಾದ ಎಲ್ಲವೂ ಹಂತ ಹಂತವಾಗಿ ಬೆಳೆಯುತ್ತದೆ. ಆದು ಮುಖ್ಯವಾದ ರಹಸ್ಯಗಳಲ್ಲಿ ಒಂದು, ಸಾಧನೆಯ ಅತಿ ಮುಖ್ಯ ರಹಸ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/154** SABCL **25/121**

**– ಶ್ರೀ ಅರವಿಂದರು**

# ನಮ್ಮ ಶ್ರದ್ಧೆಯ ಕೋರಿಕೆ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಯೋಗದಲ್ಲಿಯ ಮೂಲಭೂತ ನಂಬಿಕೆಯು ದಿವ್ಯ ಪುರುಷನು ಆತ್ಮನಲ್ಲಿ ಅಂತಃಸಿದ್ಧನಾಗಿದ್ದಾನೆ ಮತ್ತು ನಂತರದಲ್ಲಿ ಅನುಸರಿಸಬೇಕಾದ ಒಂದು ವಿಷಯ, ದಿವ್ಯ ಪುರುಷ ಎಂಬುದಾಗಿದೆ. ಅದಕ್ಕೆ ಹೋಲಿಸಿದಲ್ಲಿ ಜೀವನದಲ್ಲಿ ಮೌಲ್ಯವುಳ್ಳದ್ದು ಬೇರೆ ಯಾವುದೂ ಇಲ್ಲ. ನಿಮ್ಮಲ್ಲಿ ಬೆಳೆಯುವ ಈ ಶ್ರದ್ಧೆಯು ಈ ಯೋಗಕ್ಕಾಗಿ ಬರುವಂತೆ ಮಾಡಿದೆ ಮತ್ತು ಈ ಶ್ರದ್ಧೆಯು ಕಡಿಮೆಯಾಗಿಲ್ಲ ಅಥವಾ ಅಳಿದಿಲ್ಲ – ನಿಮ್ಮ ಪತ್ರಗಳಲ್ಲಿ ನೀವು ಏನನ್ನು ಹೇಳಿರುವಿರೋ ಅದರಿಂದ ತಿರ್ಮಾನಕ್ಕೆ ಬರುವುದು ಹೆಚ್ಚು ಒತ್ತಾಯಪೂರ್ವಕವಾಗಿದೆ ಮತ್ತು ಹೆಚ್ಚು ಸ್ಥಿರವಾಗಿದೆ. ಅದು ಮನುಷ್ಯನಲ್ಲಿ ಇರುವವರೆಗೆ ಅವನು ಆಧ್ಯಾತ್ಮ ಜೀವನಕ್ಕಾಗಿ ಗುರುತಿಸಲ್ಪಟ್ಟಿದ್ದಾನೆ. ಒಂದು ವೇಳೆ ಅವನ ಸ್ವಭಾವವು ವಿಘ್ನಗಳಿಂದ ತುಂಬಿದ್ದರೆ ಮತ್ತು ನಿರಾಕಣೆಗಳಿಂದ ಹಾಗೂ ತೊಂದರೆಗಳಿಂದ ಅದುಮಲ್ಪಟ್ಟಿದ್ದರೆ, ಅವನು ಬಹಳ ವರ್ಷಗಳ ಪ್ರಯಾಸಪಟ್ಟಿದ್ದರೂ ಸಹ ಅವನು ಆಧ್ಯಾತ್ಮ ಜೀವನದಲ್ಲಿ ಯಶಸ್ಸಿಗಾಗಿ ಗುರುತಿಸಲ್ಪಟ್ಟಿದ್ದಾನೆ.

ಈ ಶ್ರದ್ಧೆಯನ್ನು ನಾವು ಅರಳಿಸಬೇಕಾಗಿದೆ – ವಿವೇಚನೆ ಮತ್ತು ಸಾಮಾನ್ಯ ಜ್ಞಾನದ ಪ್ರಕಾರ ಇರುವಂಥ ಒಂದು ಶ್ರದ್ಧೆ – ಒಂದು ವೇಳೆ ದಿವ್ಯ ಶಕ್ತಿಯು ಇದ್ದದ್ದು ಸ್ಪಷ್ಟವಾಗಿದ್ದರೆ ಮತ್ತು ಯೋಗ ಮಾರ್ಗಕ್ಕೆ ಕರೆದಿದ್ದರೆ ನೀನು ಎದುರಿಸುವ ಎಲ್ಲ ದೈವೀ ಮಾರ್ಗದರ್ಶನ ಅಲ್ಲಿ ಇರಲೇಬೇಕು ಮತ್ತು ಎಲ್ಲ ತೊಂದರೆಗಳ ಹೊರತಾಗಿಯೂ ನೀನು ಯೋಗ ಮಾರ್ಗಕ್ಕೆ ಬರುವಿ. ವೈಫಲ್ಯವನ್ನು ಸಲಹೆ ಮಾಡುವ, ಅಹಿತಕರವಾದ ಮಾತುಗಳನ್ನು ಅಥವಾ ಮಾರ್ದನಿಸುವ ಪ್ರಾಣಿಕದ ಅಸಹನೆಯ ದುಡುಕಿನ ಧ್ವನಿಗಳನ್ನು ಕೇಳಬೇಡ. ಮುಂದೆ ದೊಡ್ಡ ತೊಂದರೆಗಳು ಇರುವುದರಿಂದ ಯಶಸ್ಸು ದೊರೆಯಲಿಕ್ಕಿಲ್ಲ ಅಥವಾ ದಿವ್ಯ ಪುರುಷನು ತನ್ನನ್ನು ತಾನು ಇನ್ನೂ ಪ್ರಕಟಪಡಿಸದೆ ಇದ್ದುದರಿಂದ ಅವನು ಎಂದಿಗೂ ತೋರಿಸಿಕೊಳ್ಳಲಿಕ್ಕಿಲ್ಲ ಎಂದು ನಂಬಬೇಡ, ಆದರೆ ಅವನು ತನ್ನ ಮನಸ್ಸನ್ನು ಒಂದು ಉನ್ನತವಾದ ಮತ್ತು ಕಠಿಣವಾದ ಉದ್ದೇಶದ ಮೇಲೆ ಸ್ಥಿರಗೊಳಿಸಿದಾಗ ಎಲ್ಲರೂ ತೆಗೆದುಕೊಳ್ಳುವ "ಯಶಸ್ಸು ಕಾಣುವವರೆಗೆ ನಾನು ಮುನ್ನಡೆಯುವೆ ಮತ್ತು ಯಶಸ್ವಿಯಾಗುವೆ – ಎಲ್ಲ ತೊಂದರೆಗಳಿದ್ದರೂ ಸಹ"

ಎಂಬ ನಿಲುವನ್ನು ನೀನು ತೆಗೆದುಕೊ. ಇದಕ್ಕೆ, "ದಿವ್ಯ ಪುರುಷನಿದ್ದಾನೆ, ಅವನಲ್ಲಿದ್ದಾನೆ ಮತ್ತು ಅವನಿದ್ದುದರಿಂದ ನನ್ನ ಅನುಸರಣೆಯನ್ನು ದಿವ್ಯ ಪುರುಷನು ವಿಫಲಗೊಳಿಸಲಾರ ಎಂದು ದೈವಿಕವನ್ನು ನಂಬುವವನು ಸೇರಿಸುತ್ತಾನೆ. ಅವನನ್ನು ಕಾಣುವವರೆಗೆ ಎಲ್ಲವುದರಗಳ ಮುಖಾಂತರ ಸಾಗುತ್ತೇನೆ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/93–94** SABCL **23/573**

ನಮ್ಮಿಂದ ಕೋರಲಾದ ಶ್ರದ್ಧೆಯು ತನ್ನ ಮೂಲತತ್ವದಲ್ಲಿ ಮತ್ತು ನಿರಂತರವಾದ ವಿಶೇಷ ಪ್ರಯತ್ನದಲ್ಲಿ ಬೃಹತ್ ಹಾಗೂ ಸತತವಾಗಿ ಹೆಚ್ಚಾಗುತ್ತಿರುವ, ಮತ್ತು ನಿರಂತರವಾಗಿ ಶುದ್ಧ, ವಿಪುಲ ಹಾಗೂ ಗಟ್ಟಿಯಾದ ಸಮಗ್ರ ಪುರುಷನ ಹಾಗೂ ಅವನ ಎಲ್ಲ ಭಾಗಗಳ ಸಮ್ಮತಿಯು ಭಗವಂತನ ಹಾಗೂ ಶಕ್ತಿಯ ಉಪಸ್ಥಿತಿಗೆ ಮತ್ತು ಮಾರ್ಗದರ್ಶನಕ್ಕೆ ಸಮಾನವಾಗುತ್ತದೆ. ಎಲ್ಲಿಯವರೆಗೆ ಶಕ್ತಿಯ ಮತ್ತು ಆ ಶಕ್ತಿಯ ಉಪಸ್ಥಿತಿಯಿಂದ ತುಂಬಿದ ಅರಿವು ನಮಗೆ ಇಲ್ಲವೊ ಶಕ್ತಿಯಲ್ಲಿನ ನಮ್ಮ ಶ್ರದ್ಧೆಯು ಅಗತ್ಯವಾಗಿ ನಮ್ಮ ಸ್ವಂತ ಆಧ್ಯಾತ್ಮಿಕ ಇಚ್ಛೆಯಲ್ಲಿನ ಹಾಗೂ ಶಕ್ತಿಯಲ್ಲಿನ ಸ್ಥಿರವಾದ ಮತ್ತು ಓಜಸ್ವಿ ಶ್ರದ್ಧೆಯಿಂದ ಮತ್ತು ಏಕತೆಯ ಹಾಗೂ ಸ್ವಾತಂತ್ರ್ಯದ ಕಡೆಗೆ ಮತ್ತು ಪರಿಪೂರ್ಣತೆಯ ಕಡೆಗೆ ಯಶಸ್ವಿಯಾಗಿ ಚಲಿಸುವಂಥ ನಮ್ಮ ಸಾಮರ್ಥ್ಯದಿಂದ ಮುಂಚಿನದಾಗಿಬೇಕು ಅಥವಾ ಅದರ ಜೊತೆಯಾಗಿರಬೇಕು. ಮನುಷ್ಯನ ಕಲ್ಪನೆಗಳು ಮತ್ತು ಅವನ ಸಾಮರ್ಥ್ಯಗಳು ಅವನು ಕೆಲಸ ಮಾಡಲೆಂದು ಹಾಗೂ ರಚಿಸಲೆಂದು (ಸೃಷ್ಟಿಸಲೆಂದು) ಮತ್ತು ಉನ್ನತವಾದ ಸಂಗತಿಗಳಿಗೆ ಏರಲು ಮತ್ತು ಕೊನೆಯಲ್ಲಿ ಆತ್ಮನ ಸನ್ನಿಧಿಯಲ್ಲಿ ಒಂದು ಯೋಗ್ಯ ಕಾಣಿಕೆಯಾಗಿ ತರಲು ಅವನಲ್ಲಿ ಕೊಟ್ಟಿವೆ. ಈ ಆತ್ಮನನ್ನು ದುರ್ಬಲರು ಜಯಿಸಲು ಆಗುವುದಿಲ್ಲವೆಂದು ಧರ್ಮ ಗ್ರಂಥಗಳು ಹೇಳುತ್ತವೆ, ನಯಮ್ ಆತ್ಮ ಬಲಹೀನೇನ ಲಭ್ಯಃ. ದುರ್ಬಲಗೊಳಿಸುವ ಸ್ವ–ಅಪನಂಬಿಕೆಯನ್ನು ಪೂರ್ಣಗೊಳಿಸಲು ಬೇಕಾದ ನಮ್ಮ ಸಾಮರ್ಥ್ಯದ ಸಂಶಯವನ್ನು ವಿರೋಧಿಸಬೇಕು, ಯಾಕೆಂದರೆ ಅದು ನಿರ್ಬಲತೆಗೆ ಒಂದು ತಪ್ಪು ಸಮ್ಮತಿಯಾಗಿದೆ, ಒಂದು ದುರ್ಬಲತೆಯ ಕಲ್ಪನೆಯಾಗಿದೆ ಮತ್ತು ಸರ್ವಶಕ್ತನ ಸರ್ವಶಕ್ತತೆಯನ್ನು ಅಲ್ಲಗಳೆಯುದಾಗಿದೆ. ಸದ್ಯದ ಅಸಮರ್ಥತೆಯು – ಅದರ ಒತ್ತಡ ಎಷ್ಟೇ ಭಾರವಾಗಿದ್ದರೂ, ಅದೊಂದು ಶ್ರದ್ಧೆಯ ಪರೀಕ್ಷೆಯಾಗಿದೆ ಮತ್ತು ಒಂದು ತಾತ್ಕಾಲಿಕ ತೊಂದರೆಯಾಗಿದೆ. ಅಸಮರ್ಥತೆಯ ಭಾವನೆಗೆ ಬಾಗುವುದು ಸಮಗ್ರ ಯೋಗವನ್ನು ಬಯಸುವವನಿಗೆ

ಒಂದು ಅಸಂಬದ್ಧ. ಯಾಕೆಂದರೆ, ಅವನ ಗುರಿಯು ಪರಿಪೂರ್ಣತೆಯನ್ನು ವಿಕಾಸ ಮಾಡುವುದಾಗಿದೆ ಮತ್ತು ಅದು ಆಗಲೆ ಅವನಲ್ಲಿದೆ, ಅವನಲ್ಲಿ ಸುಪ್ತವಾಗಿದೆ. ಮನುಷ್ಯನು ತನ್ನಲ್ಲಿಯೇ, ತನ್ನ ಅತ್ಮನಲ್ಲಿ ದೈವೀ ಅಂಶವನ್ನು ಹೊಂದಿದ್ದಾನೆ. ಪ್ರಯತ್ನದಲ್ಲಿ ಯಶಸ್ಸು ಒಳಗೊಂಡಿದೆ ಮತ್ತು ಹಿಂದುಗಡೆ ಸರ್ವಶಕ್ತನ ಪ್ರಭಾವದ ಕೂಗು ಮತ್ತು ಮಾರ್ಗದರ್ಶನ ಇರುವುದರಿಂದ ಜಯವು ನಿಶ್ಚಿತವಾಗಿದೆ. ನಮ್ಮಲ್ಲಿಯ ಶ್ರದ್ಧೆಯನ್ನು ಎಲ್ಲ ರಾಜಸಿಕ ಅಹಂನಿಂದ ಮತ್ತು ಆಧ್ಯಾತ್ಮಿಕ ಅಹಂಕಾರದಿಂದ ಶುದ್ಧಗೊಳಿಸಬೇಕು. ತನ್ನ ಶಕ್ತಿಯು ತನ್ನ ಸ್ವಂತದ್ದಲ್ಲ (ಅಹಂಕಾರದ ಅರ್ಥದಲ್ಲಿ) ಆದರೆ ವಿಶ್ವ ದೈವಿಕ ಶಕ್ತಿಯದು ಎಂಬ ಕಲ್ಪನೆಯನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಅಹಂಕಾರಯುತವಾದದ್ದೆಲ್ಲ ಮಿತಿಗೆ ಕಾರಣವಾಗುತ್ತದೆ ಮತ್ತು ಕೊನೆಯಲ್ಲಿ ಒಂದು ಅಡಚಣೆಯಾಗುತ್ತದೆ. ನಮ್ಮ ಹಿಂದಿರುವ ವಿಶ್ವಾತ್ಮಕ ಶಕ್ತಿಯ ಪ್ರಭಾವವು ಅನಂತವಾಗಿದೆ ಮತ್ತು ಸರಿಯಾಗಿ ಅದನ್ನು ಯಾಚಿಸಿದಾಗ ಅದು ನಮ್ಮಲ್ಲಿ ತನ್ನನ್ನು ತಾನು ಸುರಿಸಿಕೊಳ್ಳಲು ಮತ್ತು ಅಸಮರ್ಥತೆಯನ್ನು ಹಾಗೂ ಅಡಚಣೆಯನ್ನು ತೆಗೆಯಲು ವಿಫಲವಾಗುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/779–80** SABCL **21/751–52**

ಅವನು ಒಂದು ಸಮಷ್ಟಿ: ಅವನು ಎಲ್ಲ ಸ್ಥಿತಿಗಳನ್ನು ನಿಯೋಜಿಸುವ ಮತ್ತು ಅವುಗಳನ್ನು ಮೀರುವ ಮೂಲ ಮತ್ತು ವಿಶ್ವಾತ್ಮಕ ಪರಮಾನಂದವಾಗಿದ್ದಾನೆ: ಅವನು ಎಲ್ಲ ಪ್ರಜ್ಞೆಗಳನ್ನು ಜೋಡಿಸುವ ಮತ್ತು ಅವುಗಳ ಚಲನೆಗಳನ್ನು ತಿಳಿಸುವ ಏಕ ಅನಂತ ಪ್ರಜ್ಞೆಯಾಗಿದ್ದಾನೆ: ಅವನು ಎಲ್ಲ ಕ್ರಿಯೆಯನ್ನು ಮತ್ತು ಅನುಭವವನ್ನು ಎತ್ತಿ ಹಿಡಿಯುವ ಮಿತಿರಹಿತ ಪುರುಷನಾಗಿದ್ದಾನೆ: ಅವನ ಇಚ್ಛೆಯು ವಸ್ತುಗಳ ವಿಕಾಸವನ್ನು ಅವುಗಳ ಇನ್ನೂ ಕೈಗೂಡದ ಆದರೆ ಅನಿವಾರ್ಯವಾದ ಗುರಿಯನ್ನು ಹಾಗೂ ಸಮಗ್ರತೆಯನ್ನು ನಿರ್ದೇಶಿಸುತ್ತಾನೆ.

ಅವನಿಗೆ ಹೃದಯವು ತಾನಾಗಿಯೇ ಅರ್ಪಿಸಿಕೊಳ್ಳುತ್ತದೆ, ಅತ್ಯುತ್ತಮ ಪ್ರೀತಿಗಾಗಿ ಅವನನ್ನು ಸಮೀಪಿಸು, ಪ್ರೇಮದ ವಿಶ್ವಾತ್ಮಕ ಸಿಹಿಯಲ್ಲಿರುವಂತೆ ಜೀವಂತ ಆನಂದದ ಸಾಗರದಂತೆ ಅವನನ್ನು ಮಥಿಸು ಮತ್ತು ಪ್ರವೇಶಿಸು. ತನ್ನ ಎಲ್ಲ ಅನುಭವಗಳಲ್ಲಿ ಆತ್ಮನನ್ನು ಬೆಂಬಲಿಸುವ, ಮತ್ತು ದಾರಿಗೆಟ್ಟ ತನ್ನ ಅಹಮಿಕೆಯನ್ನು, ಎಲ್ಲ ದುಃಖ ಹಾಗೂ ಯಾತನೆಗಳು ನಿಲ್ಲುವವರೆಗೆ ಅಗ್ನಿ ಪರೀಕ್ಷೆಗಳಲ್ಲಿ ಹಾಗೂ ಪ್ರಯಾಸಗಳಲ್ಲಿ ಸಮರ್ಥಿಸುವ ರಹಸ್ಯ ಪರಮಾನಂದವು

ಅವನದಾಗಿದೆ. ಎಲ್ಲ ವಸ್ತುಗಳನ್ನು ಅವುಗಳ ಸ್ವ–ಮಾರ್ಗದಿಂದ ತನ್ನ ಆನಂದದ ಏಕತೆಯ ಕಡೆಗೆ ಸೆಳೆಯುವ ಅನಂತ ದಿವ್ಯ ಪ್ರೇಮಿಯ ಪ್ರೇಮ ಮತ್ತು ಅತ್ಯಾನಂದವಾಗಿದೆ.

ಅವನ ಮೇಲೆ ಸಂಕಲ್ಪವು ಮಾರ್ಗದರ್ಶನ ಮಾಡುವಂಥ ಮತ್ತು ಅದನ್ನು ಈಡೇರಿಸುವಂಥ ಅಗೋಚರವಾದ ಸಾಮರ್ಥ್ಯವನ್ನಾಗಿ ಮತ್ತು ಅದರ ಬಲದ ಆಧಾರವಾಗಿ ಮಾರ್ಪಡಿಸಲಾಗದಂತೆ ಸ್ಥಿರಗೊಳ್ಳಬಹುದು. ವೈಯಕ್ತಿಕತೆಯಲ್ಲಿ ಈ ಚಲನ ಕೊಡುವ ಪ್ರಭಾವವು ಎಲ್ಲ ಫಲಿತಾಂಶಗಳನ್ನು ಒಳಗೊಂಡ ಹಾಗೂ ಅದು ಈಡೇರುವವರೆಗೆ ಶಾಂತವಾಗಿ ಕೆಲಸ ಮಾಡುವ ಸ್ವ–ಪ್ರಕಾಶಮಾನವಾದ ಬಲವಾಗಿದೆ ಮತ್ತು ವೈಯಕ್ತಿಕತೆಯಲ್ಲಿ ತನ್ನ ಗುರಿಯೆಡೆಗೆ ಮುನ್ನಡೆಸುವಲ್ಲಿ ಸರ್ವಜ್ಞನಾದ ಹಾಗೂ ಸರ್ವಶಕ್ತನಾದ ಯೋಗದ ಗುರುವಾಗಿದೆ. ಅನ್ವೇಷಿಯು ತನ್ನ ಅನ್ವೇಷಣೆಯನ್ನು ಹಾಗೂ ಸಾಹಸವನ್ನು ಈ ಶ್ರದ್ಧೆಯೊಂದಿಗೆ ಪ್ರಾರಂಭಿಸಬೇಕು; ಇಲ್ಲಿಯ ತನ್ನೆಲ್ಲ ಶ್ರಮದಲ್ಲಿ ಆದರೆ ಕಾಣದ ಕಡೆಗಿನ ತನ್ನ ಎಲ್ಲ ಶ್ರಮದಲ್ಲಿ ಮಾನಸಿಕ ವ್ಯಕ್ತಿಯು ಕಡ್ಡಾಯವಾಗಿ ಶ್ರದ್ಧೆಯಿಂದ ಮುಂದೆ ಸಾಗಬೇಕು. ಸಾಕ್ಷಾತ್ಕಾರವಾದಾಗ ಈಡೇರಿದ ಶ್ರದ್ಧೆಯು ಹಾಗೂ ದಿವ್ಯತೆಯಿಂದ ಪೂರ್ಣಗೊಂಡ ಶಾಶ್ವತ ಜ್ಞಾನ ಜ್ವಾಲೆಯಾಗಿ ರೂಪಾಂತರ ಹೊಂದುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/83** SABCL **20/76–77**

**– ಶ್ರೀ ಅರವಿಂದರು**

### ಭಾಗ 3

## ಸ್ವಾನುಭೂತಿಗೊಳ್ಳುವಿಕೆ ಮತ್ತು ಆಂತರ್ಯದಲ್ಲಿರುವ ಈ ದಿವ್ಯ ಸಾನಿಧ್ಯದ ಆವಿಷ್ಕಾರ

**– ಅನುವಾದ: ಪುಟ್ಟು ಕುಲಕರ್ಣಿ**

ಮಾನವ ಕುಲವು ಬಹುತೇಕವಾಗಿ ಬಾಹ್ಯ ವಸ್ತು–ವಿಷಯಗಳ ಕಡೆಗೆ ಹೆಚ್ಚು ಆಸಕ್ತಿ ವಹಿಸಿರುತ್ತದೆ. ಅದರಲ್ಲಿಯೇ ಇರಲು ಯತ್ನಿಸುತ್ತದೆ. ಇದರರ್ಥವೇನೆಂದರೆ, ಅವರ ಈ ಚೇತನವು ಕೇವಲ ಬಾಹ್ಯ ವಸ್ತುಗಳ ಕಡೆಗೆ ಇರುವದಲ್ಲದೇ, ಆ ಕಡೆಗೆ ಸದಾ ಸೆಳೆಯಲ್ಪಡುತ್ತಿರುತ್ತದೆ. ಅವರಿಗೆ ಕಾಣುವ, ಕೇಳುವ, ತಿಳಿದುಕೊಳ್ಳುವ

ಮತ್ತು ಅವರು ಮಾಡುತ್ತಿರುವ ಎಲ್ಲ ಘಟನೆಗಳೂ ಅಂತರಂಗಿಕವಾಗಿ ಶೋಧಿಸುವದನ್ನು, ಅರಿತುಕೊಳ್ಳುವದನ್ನು, ಆ ದಿಸೆಯತ್ತ ಸಾಗುವದನ್ನು ಮತ್ತೂ ಆ ಮೂಲಕವೇ ಸತ್ಯದ ಮೂಲನೆಲೆಯನ್ನು ಅರಿತುಕೊಳ್ಳುವದಕ್ಕೆ ಹಾಗೂ ಅಲ್ಲಿಯೇ ಇರುವ ದೈವೀ ಸಾನಿಧ್ಯವನ್ನು ಕಾಣುವದನ್ನು ಬಯಸದೇ, ಕೇವಲ ಬಹಿರಂಗದಲ್ಲಿಯೇ ನೆಲೆಸಲೆಳಸುತ್ತದೆ. ನಾವು ಆ ದಿಸೆಯಲ್ಲಿ ಚಲನೆ ಪ್ರಾರಂಭ ಮಾಡಲು ಇದೇ ಪ್ರಪ್ರಥಮ ಹೆಜ್ಜೆಯಾಗಿದೆ. ನೀವೆಲ್ಲರೂ ಇದೇ ಬಾಹ್ಯದೊಡನೇ ನಿಮ್ಮನ್ನು ತುಂಬಿಕೊಂಡಿದ್ದೀರಿ. ನಿಮ್ಮ ಸುತ್ತಲೂ, ಅದೇ ರೀತಿಯಲ್ಲಿಯೇ ಇರುವ ಜನರೊಡನೆಯೇ ಓಡಾಡಿಕೊಂಡಿದ್ದೀರಿ, ನೀವೂ ಅದನ್ನೇ ಅನುಸರಿಸುತ್ತಿರುವಿರಿ. ಇದಾದ ಮೇಲೆ ನಿಮ್ಮದೇ ಜೀವದೊಂದಿಗೂ ಸಹಿತ; ನಿದ್ರೆ, ಊಟ, ಹರಟೆ, ಅಲ್ಪ–ಸ್ವಲ್ಪ ಕೆಲಸ, ಆಗಾಗ ಅಲ್ಪ ಹಾಸ್ಯ–ವಿನೋದಗಳೂ ಇರುತ್ತವೆ; ಮತ್ತೆ ಮತ್ತೆ ಇದೇ ಇದೇ ಪುನರಾವರ್ತನೆ. ಇದರ ಜೊತೆಗೆ ಆಯಾ ವಿಷಯದ ಬಗೆಗೆ ಇವರು ಯಾವ ರೀತಿ ಹೇಳಿದ್ದಾರೆ, ಅವರು ಯಾವ ರೀತಿ ಹೇಳಿದ್ದಾರೆ, ಯಾರು ಏನು ಮಾಡಿದ್ದಾರೆ ಎನ್ನುವ ವಿಷಯದ ಬಗೆಗೆ ಚರ್ಚೆ–ಚರ್ಚೆ. ಮತ್ತೆ ಮೇಲಾಗಿ ಇವನು ಏನು ಮಾಡಬೇಕು ಅವನು ಏನು ಮಾಡಬೇಕು ಎನ್ನುವದರ ಕುರಿತು, ಅವನು ಯಾವ ರೀತಿಯಲ್ಲಿ ಕಲಿಯಬೇಕು, ಇವನು ಯಾವ ರೀತಿಯಲ್ಲಿ ಕಲಿಯಲು ಸಿದ್ದನಾಗಬೇಕು, ಹೀಗೆ ಹೀಗೆ ಮತ್ತೆ ಅವನು ಯಾವ ರೀತಿಯಲ್ಲಿ ಸುಖವಾಗಿರುವ ಬಗೆಗೆ, ಆ ಸುಖಕ್ಕೆ ಅವನಿಗೆ ಅರ್ಹತೆ ಇದೆಯೋ ಇಲ್ಲವೋ ಎನ್ನುವ ವಿಷಯದ ಬಗೆಗೆ ಇತ್ಯಾದಿ ಇತ್ಯಾದಿ... ವಿಷಯಗಳಲ್ಲಿಯೇ ಯೋಚಿಸುತ್ತ ಇದ್ದೀರಿ.

ಹೀಗಾಗಿ ಇಲ್ಲಿ ಪ್ರಥಮ ಹೆಜ್ಜೆ ಇಡುವದೆಂದರೆ – ಅದು ನಾವು ತಿಳಿದುಕೊಂಡಷ್ಟು ಸುಲಭವೂ ಅಲ್ಲ – ಅದರಲ್ಲೂ ಮೇಲ್ಕಂಡ ವಿಷಯಗಳನ್ನು ಹಿಂದೆ ಸರಿಸಿ, ಮುಂದೆ ಮುಂದೆ ಸಾಗಬೇಕಾಗಿದೆ. ಅದಕ್ಕೂ ಮಿಗಿಲಾಗಿ ಅಂತರಂಗದಲ್ಲಿ ಪ್ರವೇಶ ಪಡೆಯುವ ವಿಷಯ ಒಂದಕ್ಕೆ ಸಜ್ಜುಗೊಂಡು, ಅದರಲ್ಲೂ ಚೇತನದ ಸಮಕ್ಷಮದಲ್ಲಿಯೇ ಅದನ್ನು ಎದುರುಗೊಳ್ಳುವದು ಇಲ್ಲಿ ಅತಿ ಮುಖ್ಯವಾಗಿರುವ ಸಂಗತಿಯಾಗಿರುತ್ತದೆ. ನಮ್ಮ ಈ ಜೀವನದ, ಬದುಕಿನ ಮೂಲ ಅಸ್ತಿತ್ವದ ಉದ್ದೇಶವನ್ನು ಆವಿಷ್ಕಾರಗೊಳಿಸಿಕೊಳ್ಳಬೇಕಾಗಿದೆ. ಆ ಮೂಲಕ ಈ "ಏಕ" ವ್ಯಕ್ತಿತ್ವವು ಇದೆ, ಅದು ಜೀವಿಸುತ್ತಿದೆ, ಯಾವ ಕಾರಣಕ್ಕಾಗಿ ಅದು ಜೀವಿಸುತ್ತಿದೆ ಎನ್ನುವ ಎಲ್ಲ ಘಟನೆಗಳ ಹಿಂದೆ ಇರುವದಾದರೂ ಏನು?

ಇದನ್ನರಿತುಕೊಳ್ಳಲು ಪ್ರಾರಂಭಿಸುವದೇ ಇಲ್ಲಿ 'ಪ್ರಥಮ ಹೆಜ್ಜೆ'ಯಾಗಿದೆ. ಅದಕ್ಕಾಗಿ ಈ 'ಕಾರಣ' ಮತ್ತು 'ಗುರಿ'. ಇದಾದ ನಂತರವಷ್ಟೇ ಅನುಷ್ಠಾನದ ವಿಷಯದಲ್ಲಿ ಹೆಚ್ಚಿನ ಆಸಕ್ತಿ. ಅದಕ್ಕಾಗಿ ಇರುವ ಈ ಪ್ರಥಮ ಹೆಜ್ಜೆ ಎಂದರೆ, ನಮ್ಮ ಚೇತನವು ಈ ಬಾಹ್ಯದೊಡನೆ ಹಾಗೂ ಕಣ್ಣಿಗೆ ಕಾಣುವ ವಿಷಯಗಳ ಮೂಲಕವೇ ಒಟ್ಟಾಭಿಪ್ರಾಯವನ್ನು, ಗುರುತಿಸುವಿಕೆಯನ್ನೂ ಮಾಡುತ್ತಿರುವ ಕ್ರಿಯೆಯಿಂದ ನಾವು ನಮ್ಮನ್ನು ದೂರ ಮಾಡಿಕೊಳ್ಳಬೇಕಿದೆ. ಈ ರೀತಿಯಾಗಿಯೇ ನಾವು ಒಂದು ರೀತಿಯ ಆವಿಷ್ಕಾರಕ್ಕಾಗಿ, ಅಂತರಂಗದಲ್ಲಿಯೇ ನಮ್ಮನ್ನು ನಾವು ಕೇಂದ್ರೀಕರಿಸಿಕೊಳ್ಳಲು ಮತ್ತು ಯಾವ ಪರಮ ಸತ್ಯವನ್ನು ಅರಸುತ್ತಿದ್ದೇವೆಯೋ ಅದನ್ನು ಕಾಣಲು ಸಾಧ್ಯವಾಗುತ್ತದೆ. ಇದೇ ಪ್ರಪ್ರಥಮ ಹೆಜ್ಜೆಯಾಗಿದೆ....

ಈ ಹಂತವನ್ನು ಒಂದೇ ಸಾರಿಗೆ ಜಿಗಿದು ಮುಂದೆ ಸಾಗುತ್ತೇನೆ ಎಂದರೆ ಯಾರಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬನೂ ಮೊಟ್ಟ ಮೊದಲಿಗೆ 'ಅವನದೇ ಆತ್ಮ'ದ ಕುರಿತು ಅರಿತುಕೊಳ್ಳಬೇಕಿದೆ. ಇದು ಸಂಪೂರ್ಣವಾಗಿಯೇ ಅಪರಿಹಾರ್ಯದ ಸಂಗತಿಯಾಗಿದ್ದು, ಅದರೊಡನೆ ತಾದಾತ್ಮ್ಯಗೊಳಿಸಿಕೊಳ್ಳುವದಾಗಿದೆ. ಇದಾದ ಮೇಲೆಯೇ ಅಂತಿಮವಾಗಿ ಮಾತ್ರ, ಯಾರೇ ಆಗಲಿ, ರೂಪಾಂತರಣವು ಆಗಮಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/354–55**

## ಕೆಲವು ಸಲಹಾತ್ಮಕ ಮಾತುಗಳು

ಯಾರು ತಮ್ಮ ಅಂತರಂಗದಲ್ಲಿಯೇ ಈ ದೈವತ್ವವನ್ನು ಆವಿಷ್ಕಾರ ಮಾಡಿಕೊಳ್ಳುತ್ತಾರೆಯೋ, ಮತ್ತು ಅದಕ್ಕಾಗಿ ನಿರ್ಧಾರಪೂರ್ವಕವಾಗಿ ತೊಡಗಿಕೊಳ್ಳುತ್ತಾರೆಯೋ, ಅವರಿಗೆ ಕೆಲವೊಂದು ಸಲಹೆಗಳು ಉಪಯೋಗಕ್ಕೆ ಬರಬಹುದು. ಪ್ರಥಮವಾಗಿ ಅದರಲ್ಲೂ ಅತಿಮುಖ್ಯವಾಗಿರುವ ಅಂಶವೆಂದರೆ, ಆಧ್ಯಾತ್ಮಿಕ ವಿಷಯಗಳನ್ನು ನಿರ್ಧರಿಸುವಲ್ಲಿ ಮನಸ್ಸು ಅಸಮರ್ಥವಾಗಿದೆ; ಈ ವಿಷಯದ ಕುರಿತು ಬರೆದಿರುವ ಇತರ ಎಲ್ಲರೂ ಹೇಳುತ್ತಿರುವದೂ ಇದನ್ನೇ ಆಗಿದೆ. ಆದರೆ ಎಲ್ಲೋ ಕೆಲವೇ ಕೆಲವರು ಮಾತ್ರ ಅದನ್ನು ಅನುಷ್ಠಾನಕ್ಕೆ ಪೂರ್ತಿ ರೂಪಿಸಿಕೊಂಡು ಅಳವಡಿಸಿಕೊಂಡಿರುತ್ತಾರೆ. ಆದಾಗ್ಯೂ, ಇದೇ ಪಥದಲ್ಲಿಯೇ ಮತ್ತೂ ಸಾಗಬೇಕಾಗಿರುವದರಿಂದ ಮತ್ತು ಪ್ರಗತಿ ಸಾಧಿಸಬೇಕಾಗಿರುವದರಿಂದ,

ಅಂತಹ ಎಲ್ಲ ಬೌದ್ಧಿಕ ಅಭಿಪ್ರಾಯ ಹಾಗೂ ಪ್ರತಿಕ್ರಿಯೆಯಿಂದ ಪೂರ್ತಿ ದೂರವಿರಬೇಕಾಗಿರುವದು ನಿಶ್ಚಿತವಾಗಿಯೂ ಪರಮಾವಶ್ಯಕವಾಗಿದೆ.

ಸುಖ, ತೃಪ್ತಿ, ಮನೋರಂಜನೆ ಅಥವಾ ಸಂತೋಷದಾಯಕವಾಗಿಯೇ ಸದಾ ಇರಬೇಕೆನ್ನುವ ಬಯಕೆಯನ್ನು, ಅದನ್ನೇ ಇಚ್ಛೆಯನ್ನಾಗಿಸಿಕೊಂಡು ಬದುಕುವ ಆಶೆಯನ್ನು ಮೊದಲು ಬಿಡಿ. ಆದರೆ ಸದಾ ಪ್ರಗತಿಗಾಗಿಯೇ ಜ್ವಲನಶೀಲವಾಗಿರುವ ಅಗ್ನಿಜ್ವಾಲೆಯಂತೆ ನಿಮ್ಮನ್ನು ಪರಿವರ್ತಿಸಿಕೊಳ್ಳಿರಿ. ನಿಮ್ಮ ದಾರಿಯಲ್ಲಿ ಏನೇ ಬಂದರೂ ಸಹಿತ, ಅವುಗಳೆಲ್ಲವನ್ನೂ ನಿಮ್ಮ ಪ್ರಗತಿಗೆ ಸಹಾಯಕವಾಗಿಯೇ ಬಂದಿರುತ್ತವೆ ಎನ್ನುವ ಭಾವದಲ್ಲಿ ಸ್ವೀಕರಿಸಿರಿ. ಇದರ ಜೊತೆಗೆ ನೀವು ಆಶಿಸುತ್ತಿರುವ ಪ್ರಗತಿಯ ಸಲುವಾಗಿಯೇ ಇರುವದರಿಂದಾಗಿ, ಅವುಗಳ ಮೂಲಕವೇ ಏನು ಸಾಧ್ಯವೋ ಆ ರೀತಿಯ ಪ್ರಗತಿ ರೂಪಿಸಿಕೊಳ್ಳಿರಿ.

ನಿಮ್ಮ ಪ್ರತಿಯೊಂದು ಕಾರ್ಯದಲ್ಲಿಯೂ ಸಂತಸವನ್ನು ಕಾಣಲು ಪ್ರಯತ್ನಿಸಿರಿ. ಆದರೆ ಎಂದಿಗೂ ಸಂತೋಷವನ್ನು ಪಡೆಯುವದರ ಸಲುವಾಗಿಯೇ ಮಾತ್ರ ಎಂದು ಕಾರ್ಯ ಮಾಡಬೇಡಿ. ಎಂದಿಗೂ ಯಾವುದೇ ಕಾರಣಕ್ಕೂ ಉದ್ವೇಗಗೊಳ್ಳದಿರಿ. ಹತಾಶರಾಗದಿರಿ,. ಅಥವಾ ವ್ಯಾಕುಲಗೊಳ್ಳದಿರಿ.ಸದಾ ಜಾಗೃತವಾಗಿದ್ದುಕೊಂಡು, ನೀವು ಇನ್ನೂ ಯಾವ ರೀತಿಯ ಪ್ರಗತಿಯನ್ನು ಸಾಧಿಸಬೇಕಾಗಿದೆಯೋ ಅದಕ್ಕಾಗಿ ಯಾವುದೇ ಕಾರಣಕ್ಕೂ ಕಾಲಹರಣ ಮಾಡದೇ, ಆ ಪ್ರಗತಿಯ ದಿಸೆಯತ್ತ ಮುನ್ನಡೆಯಿರಿ.

ಭೌತಿಕವಾಗಿ ಘಟಿಸುತ್ತಿರುವ ಘಟನೆಗಳನ್ನು ಅವುಗಳ ಮೇಲ್ನೋಟದಲ್ಲಿಯೇ ಸ್ವೀಕರಿಸಬಾರದು. ಆ ಹಂತದಲ್ಲಿ ಅವುಗಳೆಲ್ಲವೂ ಕೇವಲ ಗೊಂದಲವನ್ನು ತುಂಬಿಕೊಂಡೇ, ಏನೋ ಒಂದನ್ನು ಹೇಳಲು ಪ್ರಯತ್ನಿಸುತ್ತಿರುತ್ತವೆ. ಮೇಲ್ತೋರಿಕೆಯಲ್ಲಿಯ ದೃಶ್ಯದಲ್ಲಿಯೇ ಅರ್ಥೈಸಿಕೊಳ್ಳಲು ಯತ್ನಿಸುತ್ತಿರುವ ನಮ್ಮ ಈ ರೀತಿಯ ಮನೋಭಾವದಿಂದಾಗಿ, ನಿಜವಾದ ಸಂಗತಿಯು ಕಾಣದೇ, ದೊರಕದೇ ನುಣುಚಿಕೊಂಡು ಹೋಗುತ್ತದೆ ಯಾವುದೇ ಸಂದರ್ಭದಲ್ಲಾಗಲಿ ಬೇರೆಯವರ ನಡವಳಿಕೆಗಳ ಬಗೆಗೆ ಆಪಾದನೆ ಮಾಡಬೇಡ, ಅವನು ಆ ರೀತಿಯಲ್ಲಿ, ಅವನದೇ ದಾರಿಯಲ್ಲಿ ಕಾರ್ಯ ಮಾಡುತ್ತಿರುವದಕ್ಕೆ, ಮತ್ತೆ ಅದಕ್ಕೆ ಕಾರಣವಾಗಿರುವ ಅವನ ಸ್ವಭಾವವನ್ನು ಪರಿವರ್ತಿಸಲು ನಿನಗೆ ಎಲ್ಲಿಯವರೆಗೂ ಸಾಧ್ಯವಿಲ್ಲವೋ, ನೀನು ಯಾವುದೇ ಸಮಯದಲ್ಲೂ ಬೇರೆಯವರ ನಡವಳಿಕೆಗಳನ್ನು

ಆಪಾದಿಸಬೇಡ; ಒಂದು ವೇಳೆ ನಿನಗೆ ಆ ಸಾಮರ್ಥ್ಯ ಇದ್ದಲ್ಲಿ ಆಗಲೂ ಸಹಿತ ಅವನನ್ನು ಆಪಾದಿಸುವದಕ್ಕಿಂತ ಪರಿವರ್ತಿಸಲು ಪ್ರಯತ್ನಿಸು.

ನೀನು ಯಾವುದೇ ಕಾರ್ಯದಲ್ಲಿ ತೊಡಗಿಕೊಂಡಿದ್ದರೂ, ನೀನು ನಿನಗಾಗಿ ನಿಗದಿಗೊಳಿಸಿಕೊಂಡಿರುವ ನಿನ್ನದೇ ಗುರಿಯನ್ನು ಮಾತ್ರ ಎಂದಿಗೂ ಮರೆಯಬೇಡ. ಒಮ್ಮೆ ನೀನು ಈ ಮಹತ್ತರವಾಗಿರುವ ಆವಿಷ್ಕಾರವನ್ನು ನಿಗದಿಪಡಿಸಿಕೊಂಡೆ ಎಂದಾದರೆ, ಉಳಿದಂತೆ ಬೇರೆ ಯಾವುದೂ ಇದಕ್ಕಿಂತ ದೊಡ್ಡದು ಅಥವಾ ಸಣ್ಣದು ಎಂದು ಉಳಿಯುವದಿಲ್ಲ. ಸರ್ವ ವಸ್ತುಗಳೂ ಸಮನಾಗಿಯೇ ಮಹತ್ವವನ್ನು ಹೊಂದಿದಂತೆಯೇ ಇರುತ್ತವೆ. ಹೀಗಾಗಿ ಇಲ್ಲಿ ಯಾರನ್ನೂ ಯಾವುದನ್ನೂ ತಿರಸ್ಕರಿಸುವಂತಿಲ್ಲ, ಅದರ ಯಶಸ್ಸನ್ನೂ ತಡೆಯುವಂತಿರುವದಿಲ್ಲ.

ನೀನು ಆಹಾರವನ್ನು ಸೇವಿಸುವ ಮುನ್ನ, ನೀನು ತೆಗೆದುಕೊಳ್ಳುತ್ತಿರುವ ಆಹಾರವು ನಿನ್ನ ದೇಹವು ಬಯಸುತ್ತಿರುವ ಪೋಷಕಾಂಶಗಳನ್ನು ಒದಗಿಸುತ್ತ, ನಿನಗೊಂದು ಭದ್ರವಾದ ಆಧಾರವನ್ನು ಒದಗಿಸಿ ಕೊಡುವದು. ಆ ಮೂಲಕ ಈ ಮಹತ್ತರವಾಗಿರುವ ಆವಿಷ್ಕಾರದ ಕಡೆಗೆ ಸಾಗುವ ನಿನ್ನ ಅಭೀಪ್ಸೆಯಲ್ಲಿಯೇ, ಆಹಾರವನ್ನು ತೆಗೆದುಕೊಳ್ಳುವ ಮುಂಚೆ ಕೆಲವು ಕ್ಷಣಗಳಲ್ಲಿ ಧ್ಯಾನ ಮಾಡು. ಜೊತೆಗೆ ಸದಾ ಪ್ರಯತ್ನಶೀಲತೆಯನ್ನು ಸುಸ್ಥಿತವಾಗಿಡಲು ಹಾಗೂ ಪಟ್ಟುಹಿಡಿದು ಇದನ್ನು ಸಾಧಿಸುವ ಸಲುವಾಗಿ ಧ್ಯಾನಿಸು. ನೀನು ನಿದ್ರೆಯನ್ನು ಮಾಡುವ ಮೊದಲು, ಈ ನಿದ್ರೆಯು ನಿನ್ನ ದಣಿದ ದೇಹಕ್ಕೆ, ನರ–ನಾಡಿಗಳಿಗೆ ಚೇತನವನ್ನು ಮರಳಿ ತುಂಬುವ ಸಲುವಾಗಿ ಮತ್ತು ನಿನ್ನ ಕಾರ್ಯದ ಒತ್ತಡದಲ್ಲಿ ಸಹಕರಿಸಿದ ಮೆದುಳಿಗೆ ಪ್ರಶಾಂತತೆಯನ್ನು ಹಾಗೂ ಸಮಾಧಾನವನ್ನು ತರುವ ಸಲುವಾಗಿ ಇರುತ್ತದೆ. ಇದು ನಿನ್ನ ತೇಜಸ್ಸನ್ನು ಪುನಃಶ್ಚೇತನಗೊಳಿಸುವ ಸಲುವಾಗಿ ಈ ನಿದ್ರೆಯನ್ನೂ ನಿನ್ನ ಅಭೀಪ್ಸಾ ಹಂತದಲ್ಲಿಯೇ ಒಂದೆರಡು ನಿಮಿಷ ಧ್ಯಾನಿಸು.

ನೀನು ಯಾವುದೇ ಕಾರ್ಯವನ್ನು ಪ್ರಾರಂಭ ಮಾಡುವ ಮುನ್ನ, ನಿನ್ನ ಇಚ್ಛೆಯಲ್ಲಿ ನಿನ್ನನ್ನು ಕೇಂದ್ರೀಕರಿಸಿಕೊಳ್ಳಬೇಕು. ಅಂದರೆ ಮಾತ್ರ ನಿನ್ನ ಕಾರ್ಯವು ನಿನ್ನ ಗುರಿಯೆಡೆಗೆ ಸಹಕಾರಿಯಾಗುತ್ತದೆ. ಅಥವಾ ಬೇರೆ ಯಾವುದೇ ರೀತಿಯಿಂದಲಾದರೂ ಸರಿ, ಆ ನಿನ್ನ ಮಹತ್ ಗುರಿಯ ಎಡೆಗೆ ನಿನ್ನ ಪಯಣಕ್ಕೆ ಎಲ್ಲಿಯೂ ತೊಂದರೆ ಆಗುವದಿಲ್ಲ. ನೀನು ಮಾತನಾಡುವಾಗಲೆಲ್ಲ, ಅಂದರೆ

ನಿನ್ನಿಂದ ಶಬ್ದವು ನಿಮ್ಮ ಮುಖದಿಂದ ಹೊರಬರುವ ಮುನ್ನ, ಆ ಶಬ್ದಗಳ ಕುರಿತು ಸಂಪೂರ್ಣ ಲಕ್ಷ್ಯವನ್ನು ಕೇಂದ್ರೀಕರಿಸಿಕೊಳ್ಳುವ ಮೂಲಕ ಪರೀಕ್ಷಿಸಿಕೊಳ್ಳಬೇಕು. ಇಲ್ಲಿ ಇಷ್ಟು ಶಬ್ದಗಳ ಅವಶ್ಯಕತೆ ಇದೆಯೋ ಅಷ್ಟನ್ನು ಮಾತ್ರವೇ ಹೇಳಲು ಯತ್ನಿಸಬೇಕು. ಅದರಲ್ಲೂ ಗುರಿಯ ಎಡೆಗೆ ಸಾಗುತ್ತಿರುವ ಪಯಣದ ಪ್ರಗತಿಗೆ ತೊಂದರೆದಾಯಕವಾಗಿರುವ ಯಾವುದೇ ಶಬ್ದಗಳನ್ನೂ ಉಚ್ಚರಿಸಬಾರದು.

ಒಟ್ಟಿನಲ್ಲಿ, ಪ್ರತಿಯೊಬ್ಬರೂ ತಮ್ಮ ಜೀವನದ ಗುರಿ ಹಾಗೂ ಉದ್ದೇಶವನ್ನು ಎಂದಿಗೂ ಮರೆಯಬಾರದು. ಆ ಮಹದ್–ಆವಿಷ್ಕಾರಕ್ಕೆ ಇಚ್ಛೆಯು ಸದಾ ನಿಮ್ಮಲ್ಲಿರಲಿ. ಈ ಇಚ್ಛೆಯು ನೀವು ಏನನ್ನು ಮಾಡುತ್ತಿದ್ದೀರಿ ಅಥವಾ ಏನನ್ನು ಮಾಡುತ್ತಿಲ್ಲ ಎನ್ನುವದನ್ನೂ ಮೀರಿ ಇರುತ್ತದೆ. ಒಂದು ಬೃಹದ್ ಪಕ್ಷಿಯ ಹಾಗೆ ನಿಮ್ಮ ಜೀವನದ ಎಲ್ಲ ಘಟನೆಗಳನ್ನೂ ನಿಯಂತ್ರಿಸುತ್ತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/32–35 – ಶ್ರೀಮಾತೆ**

ಚಿಂತನಾಶೀಲವಾಗಿರುವ ಹಾಗೂ ಜೀವನವನ್ನು ಹೊಂದಿರುವ ಪ್ರತಿ ಜೀವಿಯ ಹೃದಯದಲ್ಲಿ ಈ ಪರಮೋಚ್ಚ ಶಾಸ್ತ್ರವಾಗಿರುವ ಪೂರ್ಣ ಯೋಗವು ಶಾಶ್ವತವಾಗಿಯೇ ವೇದದ ರಹಸ್ಯವಾಗಿ ಸ್ಥಿತಗೊಂಡಿದೆ. ಈ ಶಾಶ್ವತದ ಜ್ಞಾನದ ಕಮಲವು ಮತ್ತು ಶಾಶ್ವತದ ಪರಿಪೂರ್ಣತೆಯ ಮೊಗ್ಗು ಇನ್ನೂ ಪಕಳೆಗಳನ್ನು ಮುಚ್ಚಿಕೊಂಡೇ ನಮ್ಮಂತರಂಗದಲ್ಲಿ ಸ್ಥಿತಗೊಂಡಿದೆ. ಇದು ತೀವ್ರವಾಗಿ ಅಥವಾ ನಿಧಾನವಾಗಿಯೇ ಪಕಳೆಗಳನ್ನು ವಿಕಸಿಸುತ್ತಾ, ಯಶಸ್ವಿಯಾಗಿರುವ ಸಾಕ್ಷಾತ್ಕಾರಗಳ ಮೂಲಕ, ಯಾವಾಗ ಮಾನವನ ಮನಸ್ಸು ಶಾಶ್ವತದ ಎಡೆಗೆ ಪಯಣವನ್ನು ಪ್ರಾರಂಭಿಸುತ್ತದೆಯೋ, ಯಾವಾಗ ಅವನ ಹೃದಯವು ಮತ್ತೂ ಮತ್ತೂ ದೀರ್ಘಾವಧಿಯವರೆಗೂ ಶಾಶ್ವತವಲ್ಲದ ಪರಿದೃಶ್ಯಗಳಿಗೆ ಅಂಟಿಕೊಂಡು ನಿಲ್ಲುವದಿಲ್ಲವೋ, ಆಗ ಅದು ಅಸಾಧಾರಣವಾಗಿ, ಯಾವುದೇ ಪರಿಮಾಣದಲ್ಲಾದರೂ ಸರಿ, ಅದು ಆ ಅನಂತತೆಯೇ ಆಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/53** (SABCL **20/47**)
**– ಶ್ರೀ ಅರವಿಂದರು**



ಎಚ್ಚೆತ್ತೆನ್ನೆರ್ದೆಯಾಶಯಕೆ ತಿಳಿದಿಹೆನ್ ಯಾ ಪುಡುಕಿದಪೆನ್
ಏಕತೆ ಮೇಣ್ ಪ್ರೇಮಾನುಭವಂ ಜೀವನವಿದುವೆ ಧ್ಯೇಯಂ
ಯೆಮ್ಮ ಸ್ವರ್ಣ ಪರಿವರ್ತನದ ಸಲೆ ಪವಾಡವಿದುವೆ ವಲಂ
... ಓ ಋಷಿ! ಕೇಳ್, ಇದುವೆ ಸಕಲ ಸತ್ಯದ ಸಾರಮೆಂಬುದನ್ ನಾನ್

**(ಶ್ರೀ ಅರವಿಂದರ 'ಸಾವಿತ್ರಿ; ಪರ್ವ 12 ಉಪಸಂಹಾರ ಪುಟ 724)**
**ಅನು: ಮಂದರ್ಕೆ ಮಾಧವ ಪೈ**



ಯಾವಾಗ ನಾವು "ವೈಯಕ್ತಿಕಗೊಳ್ಳುತ್ತಿರುವ" ಹಂತದ ಆಚೆಗೆ ಸಾಗುತ್ತೇವೆಯೋ, ಆಗ ನಾವು ನಿಜವಾಗಿಯೂ ವ್ಯಕ್ತಿಗಳಾಗಿರುತ್ತೇವೆ. 'ಅಹಂ'–ಭಾವವಿತ್ತದೋ ಪೂರಕ; 'ಅಹಂ'–ಕಾರವಾಗಲೆನೆ ಅದು ಮಾರಕ...

ವ್ಯಷ್ಟಿಯಲ್ಲಿ ವಿಭಜನೆಗೊಂಡ ವೈಯಕ್ತಿಕತೆಯನ್ನು ಪರಿವರ್ತಿಸಿ ಜಾಗತಿಕ–ವ್ಯಕ್ತಿತ್ವವನ್ನಾಗಿಸಿಕೊಳ್ಳುವಲ್ಲಿ ರೂಪಾಂತರಗೊಳ್ಳಲು, ನಿನ್ನದೆಲ್ಲವೂ ಆ ದಿವ್ಯತೆಯೇ ಆಗಿರಲಿ. ಇದೇ ನಿನ್ನ ಗುರಿಯಾಗಿರಲಿ; ಗಮ್ಯವೂ ಆಗಿರಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/199** (SABCL **16/377)**
**– ಶ್ರೀ ಅರವಿಂದರು**

## ಸಮರ್ಪಣೆಯ ಮೂಲಕವೇ ಯೋಗದ ಸರ್ವ ಪ್ರಕ್ರಿಯೆ..

**– ಅನುವಾದ: ಪುಟ್ಟು ಕುಲಕರ್ಣಿ**

ಸಮರ್ಪಣೆ ಎಂದರೆ ನಿಮ್ಮ ಜೀವನದ ಪೂರ್ಣ ಹೊಣೆಗಾರಿಕೆಯನ್ನು ಆ ದೈವತ್ವಕ್ಕೇ ಒಪ್ಪಿಸುವದಾಗಿರುತ್ತದೆ. ಈ ರೀತಿಯ ನಿರ್ಧಾರವಿಲ್ಲದೇ ಏನನ್ನೂ ಸಾಧಿಸಲು ಸಾಧ್ಯವಾಗುವದಿಲ್ಲ; ಒಂದು ವೇಳೆ ನೀವು ಸಮರ್ಪಣೆಗೆ ಸಿದ್ಧರಾಗದಿದ್ದಲ್ಲಿ, ಆಗ ಯೋಗದ ಕುರಿತು ಯಾವುದೇ ಪ್ರಶ್ನೆಯೇ ಉದ್ಭವಿಸುವದಿಲ್ಲ. ನೀವು ಸಮರ್ಪಣೆಗೊಂಡಾದ ಮೇಲೆಯೇ ಸರ್ವಸ್ವವೂ ನಿಸರ್ಗಸಹಜವಾಗಿಯೇ ಆಗಮಿಸುತ್ತವೆ. ಹೀಗಾಗಿ ಈ ಎಲ್ಲ ಪ್ರಕ್ರಿಯೆಗಳೂ ಸಮರ್ಪಣೆಯ ನಂತರವಷ್ಟೇ ಘಟಿಸುತ್ತವೆ. ನೀವು ಇಲ್ಲಿ ಜ್ಞಾನದ ಮೂಲಕವಾದರೂ ಅಥವಾ ಭಕ್ತಿಯ ಮಾರ್ಗದಲ್ಲಾದರೂ ಸರಿ, ಒಟ್ಟಿನಲ್ಲಿ ಸಮರ್ಪಣೆಗೆ ಸಿದ್ಧರಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/126**

ಯೋಗ ಸಾಧನೆಗೆ ಎರಡು ಪಥಗಳಿವೆ. ಒಂದು ತಪಸ್ಸು ಮತ್ತೊಂದು ಸಮರ್ಪಣೆ. ಇವುಗಳಲ್ಲಿ ಈ ತಪಸ್ಸಿನ ಮಾರ್ಗವು ಕಠೋರವಾಗಿರುವ ನಿಯಮಾನುಷ್ಠಾನದಿಂದ ಕೂಡಿದೆ. ಇಲ್ಲಿ ಸಂಪೂರ್ಣವಾಗಿ ನೀವು ನಿಮ್ಮನ್ನೇ (ನಿಮ್ಮ ಪ್ರಯತ್ನವನ್ನೇ) ಅವಲಂಬಿಸಿರಬೇಕಾಗುತ್ತದೆ. ನಿಮ್ಮ ಸ್ವಂತ ಸಾಮರ್ಥ್ಯದ ಮೇಲೆಯೇ ಪ್ರಗತಿಯನ್ನು ಸಾಧಿಸಿಕೊಳ್ಳಬೇಕಾಗಿರುತ್ತದೆ. ನಿಮ್ಮ ಈ ಬಲವನ್ನು ಆಧರಿಸಿಯೇ ನಿಮ್ಮ ಆರೋಹಣ ಮತ್ತು ಗುರಿ ತಲುಪುವಿಕೆಯು ಸಾಧ್ಯವಾಗುತ್ತದೆ. ಆದರೆ ಇಲ್ಲಿ ಪತನಗೊಳ್ಳುವ ಅಪಾಯವಂತೂ ಖಚಿತವಾಗಿಯೇ ಇದ್ದೇ ಇರುತ್ತದೆ. ಒಂದೊಮ್ಮೆ ನೀವು ಪತನಗೊಂಡಿದ್ದೇ ಆದಲ್ಲಿ, ಆಗ ನೀವು ಆಳವಾದ ಕಂದಕಕ್ಕೇ ಬಿದ್ದಿರುತ್ತೀರಿ. ಆಗ ಅಲ್ಲಿ ಪರಿಹಾರ ಸಿಗುತ್ತದೆ ಎನ್ನುವದು ಬಲು ಕಠಿಣವಾಗುತ್ತದೆ.

ಇನ್ನೊಂದು ಪಥವಾಗಿರುವ 'ಸಮರ್ಪಣಾ ಪಥ'ವು ಸುರಕ್ಷಿತ ಹಾಗೂ ಖಚಿತತೆಯಿಂದ ಕೂಡಿದೆ. ಈ ಪಥವು ಇಲ್ಲಿ(ಭಾರತದಲ್ಲಿ) ಇದೆ. ಆದರೆ ಪಾಶ್ಚಿಮಾತ್ಯರು ಮಾತ್ರ ಈ ಪಥದಲ್ಲಿ ಸಾಗಲು ತೊಂದರೆ ಅನುಭವಿಸುತ್ತಾರೆ. ವೈಯಕ್ತಿಕ ಸ್ವಾತಂತ್ರ್ಯಕ್ಕೆ ಬರಬಹುದಾದ ಅಪಾಯಗಳೆಲ್ಲಕ್ಕೂ ಅವರು ಹೆರುವಂತೆಯೇ ಮತ್ತು ಅಂತಹ ಸಂಗತಿಗಳನ್ನು ದೂರವಿಟ್ಟುಕೊಳ್ಳುವ ರೀತಿಯಲ್ಲಿಯೇ ಅವರು ಕಲಿಸಲ್ಪಟ್ಟಿದ್ದಾರೆ. ಈ ರೀತಿಯ ವೈಯಕ್ತಿಕ ಮನೋಭಾವವು ಅವರಿಗೆ ಜನ್ಮದತ್ತವಾಗಿಯೇ ಅಂದರೆ ತಾಯಿಯ ಎದೆಹಾಲಿನ ಮುಖಾಂತರವೇ ಬಂದಿರುತ್ತದೆ. ಆದರೆ ಸಮರ್ಪಣೆ ಎಂದರೆ ಸರ್ವಸ್ವವನ್ನೂ ಸಮರ್ಪಿಸುವದು ಎಂದೇ ಆಗಿದೆ. ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವದಾದಲ್ಲಿ, ಶ್ರೀ ರಾಮಕೃಷ್ಣ ಪರಮಹಂಸರು ಹೇಳಿರುವ ರೀತಿಯಲ್ಲಿಯೇ ನಾವು ಈ ವಿಷಯವನ್ನು ಗಮನಿಸಿದರೂ, ಅದು ಬೆಕ್ಕಿನ ಮರಿ ಅಥವಾ ಮಂಗನ ಮರಿಯ ದೃಷ್ಟಾಂತದಂತೆ ಇರುತ್ತದೆ. ಇಲ್ಲಿ ಮಂಗನ ಮರಿಯು ಮಾತ್ರ ತಾಯಿಯನ್ನು ಬಿಗಿಯಾಗಿಯೇ ಹಿಡಿದುಕೊಂಡಿರುತ್ತದೆ. ಹೀಗಾಗಿ ಅದರ ತಾಯಿಗೆ ಅದನ್ನು ಕರೆದುಕೊಂಡು ಹೋಗುವಾಗ, ಸಂಪೂರ್ಣವಾಗಿ ಆ ಮರಿಯು ತಾಯಿಗೇ ಅಂಟಿಕೊಂಡೇ ಇರುವದರಿಂದ, ತಾಯಿಗೆ ಅದು ಬೀಳುವ ಹೆದರಿಕೆ ಬರುವದೇ ಇಲ್ಲ. ಆದರೆ ಬೆಕ್ಕಿನ ಮರಿಯ ವಿಷಯವನ್ನು ಗಮನಿಸಿದರೆ, ಇಲ್ಲಿ ಬೆಕ್ಕಿನ ಮರಿ ತಾಯಿಯನ್ನು ಹಿಡಿದುಕೊಂಡಿರುವದಿಲ್ಲ. ಆದರೆ ತಾಯಿಯೇ ಅದನ್ನು ಮೆದುವಾಗಿ ಕಚ್ಚಿಕೊಂಡು ಒಯ್ಯುತ್ತದೆ. ಹೀಗಾಗಿ ಮರಿಗೆ ಇಲ್ಲಿ ಹೆದರಿಕೆಯೇ ಇಲ್ಲ ಮತ್ತು ಹೊಣೆಗಾರಿಕೆಯೂ ಇಲ್ಲ. ಇದಕ್ಕಿಂತ ಬೆಕ್ಕಿನ ಮರಿ ಹೆಚ್ಚಿನದೇನನ್ನೂ ಮಾಡಲಾರದು. ತನ್ನನ್ನು ಹಿಡಿದುಕೊಂಡೇ ಇರು ಎಂದು, ಅಮ್ಮಾ ಅಮ್ಮಾ ಎಂದು ಆಕ್ರಂದ ಮಾಡುವದಷ್ಟೇ ಆಗಿರುತ್ತದೆ.

ಒಂದು ವೇಳೆ ನೀವು ಈ ಪಥವನ್ನು ಒಪ್ಪಿಕೊಂಡಲ್ಲಿ, ಪ್ರಾಮಾಣಿಕವಾಗಿ, ಸಂಪೂರ್ಣವಾಗಿ ನಿಮ್ಮನ್ನು ನೀವು ಸಮರ್ಪಿಸಿಕೊಳ್ಳಿರಿ. ಇಲ್ಲಿ ಮತ್ತಿನ್ಯಾವ ಅಪಾಯವೂ ಇಲ್ಲ. ತೀವ್ರತೆರನಾದ ತೊಂದರೆಗಳೂ ಬರುವದಿಲ್ಲ. ಆದರೆ ಇಲ್ಲಿ ಮುಖ್ಯವಾಗಿ ಬೇಕಾಗಿರುವದು ಪ್ರಾಮಾಣಿಕತೆ. ಒಂದು ವೇಳೆ ನೀವು ಪ್ರಾಮಾಣಿಕರಾಗಿರದೇ ಇದ್ದಲ್ಲಿ, ಯೋಗವನ್ನು ಪ್ರಾರಂಭಿಸಲೇಬೇಡಿ. ಒಂದು ವೇಳೆ ನೀವು ಲೌಕಿಕ–ಬದುಕಿನ ಮಾನವ ಸಂಬಂಧಗಳ ಸಂಗಡ ವ್ಯವಹರಿಸುತ್ತಿದ್ದಲ್ಲಿ, ಆಗ ನೀವು ಮೊದಲು ವಿನಯಕ್ಕೆ ಶರಣಾಗಿರಿ. ದೈವತ್ವದ ಸಂಗಡ ಸಂಪರ್ಕ

ಸಾಧನೆಗೆ ಪ್ರಯತ್ನಿಸುತ್ತಿದ್ದಲ್ಲಿ ಆಗ ನೀನು ಪರಿಶುದ್ಧನಾಗಿದ್ದಲ್ಲಿ ಸುಲಭವಾಗಿ ಸುರಕ್ಷಿತವಾಗಿ ಮುಂದೆ ಸಾಗಬಹುದು. ಈ ರೀತಿಯ ಪರಿಶುದ್ಧತೆಯನ್ನು ನಿಮ್ಮ ಅಂತರಾಳದಲ್ಲಿ ರೂಪಿಸಿಕೊಳ್ಳಿ. ದೈವೀ ಕೃಪೆಯಿಂದಲೇ ದಿವ್ಯತ್ವದತ್ತ ನಿಮ್ಮನ್ನು ಇದು ತಲುಪಿಸುತ್ತದೆ ಎನ್ನುವದು ನಿಮಗೇ ಅರಿವಿಗೆ ಬರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/4–5**

ಅತ್ಯಂತ ಪ್ರಮುಖವಾಗಿರುವ ಸಮರ್ಪಣೆ ಎಂದರೆ ನಿಮ್ಮ ಸ್ವಭಾವದಲ್ಲಿ ನಿರೂಪಿತಗೊಂಡಿರುವ ನಿಮ್ಮ ಜೀವನವನ್ನೇ ಸಮರ್ಪಿಸುವದಾಗಿದೆ. ಇದೇ ಪರಿವರ್ತನೆಯನ್ನು ತರಬಲ್ಲುದು. ಒಂದು ವೇಳೆ ನಿಮ್ಮ "ಸ್ವ"–ಭಾವವನ್ನು ಸಮರ್ಪಣೆ ಮಾಡದಿದ್ದಲ್ಲಿ, ಆಗ ಎಂದಿಗೂ ಈ ಸ್ವಭಾವವು ಪರಿವರ್ತಗೊಳ್ಳಲಾರದು. ಇದರಿಂದಾಗಿಯೇ ಇದು ಅತ್ಯಂತ ಮುಖ್ಯವಾಗಿರುವ ಸಮರ್ಪಣೆಯಾಗಿದೆ. ಇಲ್ಲಿ ನೀವು ಅರಿತುಕೊಳ್ಳಬೇಕಾದ ಕೆಲವು ದಾರಿಗಳಿವೆ. ಪ್ರತಿಕ್ರಿಯಿಸಬೇಕಾದ ಕೆಲವು ವಿಧಾನಗಳಿವೆ. ಇವೆಲ್ಲದರ ಜೊತೆಗೆ, ಜೀವನದ ಕುರಿತೇ ಕಾಣುವ ಒಂದು ವಿಶೇಷ ಪಥವೂ ಇಲ್ಲಿದೆ. ಅದರ ಮೂಲಕವೇ ಪರಿವರ್ತನೆಯನ್ನು ಕಾಣುವ ಪಥವೇ ಇದಾಗಿದೆ. ಸರಿ...., ಒಟ್ಟಿನಲ್ಲಿ ನೀವು ಮೊದಲು ಸಮರ್ಪಣೆಯನ್ನು ಕಡ್ಡಾಯವಾಗಿ ರೂಪಿಸಿಕೊಳ್ಳಿ. ನೀವು ನಿಜವಾಗಿಯೂ ಆ ದೈವೀ ಪ್ರಕಾಶವನ್ನು, ಕೃಪೆಯನ್ನು ಪಡೆಯಬಯಸುತ್ತಿದ್ದಲ್ಲಿ ಹಾಗು ನಿಮ್ಮನ್ನು ನೀವು ರೂಪಾಂತರಣಗೊಳಿಸಿಕೊಳ್ಳಲು ಇಚ್ಛಿಸುತ್ತಿದ್ದಲ್ಲಿ, ಇದೇ ನಿಮ್ಮ ಜೀವನದ ಪೂರ್ಣಪಥವಾಗಿದ್ದು, ಇದನ್ನೇ ನೀವು ಅಪೇಕ್ಷಿಸಿ – ಅದನ್ನು ಸ್ವೀಕರಿಸುವ ಸಲುವಾಗಿ – ಪ್ರಾರ್ಥಿಸಿರಿ. ಎಷ್ಟು ಬೇಗನೇ ಇದು ಸಾಧ್ಯವಾಗುತ್ತದೆಯೋ ಅಷ್ಟು ಬೇಗ ಇದನ್ನು ಗ್ರಹಿಸಿಕೊಳ್ಳಿ. ಆಗ ಮಾತ್ರ ಆ ದಿವ್ಯ–ಚೇತನಕ್ಕೆ ನೀವು ಎಷ್ಟೊಂದು ಬದ್ಧರಾಗಿದ್ದೀರೆಂದು ತಿಳಿಯುತ್ತದೆ. ಆಗ ಅದರ ನೇರವಾಗಿಯೇ ಕ್ರಿಯೆಗೆ ತೊಡಗಿ, ಎಲ್ಲ ಚಲನವಲನಗಳನ್ನೂ ನಿಜವಾದ ಚಲನವಲನಗಳನ್ನಾಗಿಸಿ, ಸತ್ಯದ ಎಡೆಗೆ ಕರೆದೊಯುತ್ತದೆ. ಜೊತೆಗೆ ನೀವು ವಿಶ್ವಾಸ ಹೊಂದಿರುವ ಸತ್ಯದ ಜೊತೆಗೆ ನಿಮ್ಮನ್ನು ಗಟ್ಟಿಗೊಳಿಸುತ್ತದೆ. ಸಮರ್ಪಣೆಗೈಯುವ ಓರ್ವನಿಗೆ ಅನಂತಾನಂತವಾಗಿ ಇದು ಮುಖ್ಯವಾಗುತ್ತದೆ. ಇದು ಯಾರು ಮಾಡುತ್ತಾರೆ ಎನ್ನುವದನ್ನು ಅವಲಂಬಿಸಿಲ್ಲ, ಅವನು ಏನು ಮಾಡುತ್ತಾನೆ ಎನ್ನುವದನ್ನೂ ಅವಲಂಬಿಸಿಲ್ಲ, ಏಕೆಂದರೆ ಅವನು ಏನು ಮಾಡುತ್ತಿದ್ದಾನೆ ಎನ್ನುವದು ಕೇವಲ ಸಾಕ್ಷ್ಯ

ಮಾತ್ರವಾಗಿದೆ. ಇಲ್ಲಿ ಇದೇ ಅತ್ಯಂತ ಮುಖ್ಯ ಸಂಗತಿಯೂ ಹೌದು. ಯಾವುದೇ ಚಟುವಟಿಕೆ ಇರಲಿ, ಅದು ಹೇಗೇ ಮಾಡಲ್ಪಡುತ್ತಿರಲಿ, ಅದು ಪ್ರಜ್ಞೆಯ ಯಾವ ಸ್ತರದಲ್ಲಿ ಮಾಡಲ್ಪಡುತ್ತದೆ ಎನ್ನುವದನ್ನು ಅವಲಂಬಿಸಿರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/373 – ಶ್ರೀಮಾತೆ**

## ಪರಿಪೂರ್ಣ ಸ್ವರೂಪದ ಸಾಧನೆಯ ರಹಸ್ಯ

**– ಅನುವಾದ: ಪುಟ್ಟು ಕುಲಕರ್ಣಿ**

ಬಯಸಿದ್ದನ್ನೆಲ್ಲಾ ಒದಗಿಸುವ 'ಚಿಂತಾಮಣಿ' ಒಂದಿದೆ. ಆದರೆ ಅದು ಒಂದೇ ಒಂದು.... .. ಇಲ್ಲಿ ನಿರ್ಭರತೆಯ ದೃಷ್ಟಿಕೋನದಲ್ಲಿ ಪರಿಪೂರ್ಣವಾಗಿರುವದೇ ಇಲ್ಲಿರುವ ಪರಮ ರಹಸ್ಯವಾಗಿದೆ. ಇದೇ ಪರಿಪೂರ್ಣ ಸಾಧನೆಯ ವಿಧಾನವೂ ಹೌದು...

'ನಿರ್ಭರತೆ' ಎಂದರೆ, ಯಾವುದೇ ಅಡೆ–ತಡೆಗಳಿರಲಿ ಅಥವಾ ಯಾವುದೇ ಸ್ಥಿತಿ ಇರಲಿ, ಅನುಕ್ಷಣವೂ ಆ ದೈವದ ಮೇಲೆ ವಿಶ್ವಾಸವನ್ನು ಹೊಂದಿಕೊಂಡಿರಬೇಕಾಗಿದೆ. ಯಾವಾಗ ಎಲ್ಲವೂ ಶುಭಕರವಾಗಿಯೇ ಘಟಿಸುತ್ತಿರುವವೋ, ಅದಕ್ಕಿಂತ ಹೆಚ್ಚಿನದೇನೂ ಇರುವದಿಲ್ಲ. ಇದೊಂದು ಸಂತುಲನ(ಸಮತೋಲನ)ವಾಗಿದ್ದು, ಅದನ್ನು ಅನುಷ್ಠಾನಿಸಿಕೊಂಡು ಅದರಲ್ಲಿಯೇ ಸಂಲಗ್ನರಾಗಿ ಪ್ರಗತಿ ಹೊಂದಬೇಕು.

**– ಶ್ರೀ ಅರವಿಂದರು**

**ನಿರೋದಬರನ್ ಜೊತೆ ಪತ್ರ ವ್ಯವಹಾರ; ಸಂಪುಟ 2, (1984 ಸಂ)ಪುಟ 650–57**

ಒಂದೊಮ್ಮೆ ಓರ್ವ ವ್ಯಕ್ತಿಯು ಅವನಂತರಂಗದಲ್ಲಿಯೇ ದಿವ್ಯ ಕೃಪೆಗಾಗಿ ವಿಶ್ವಾಸವನ್ನು ಹೊಂದಿದ್ದಲ್ಲಿ, ಆಗ ಆ ದೈವೀ ಕೃಪೆಯು ಸದಾ ಅವನನ್ನು ದೃಷ್ಟಿಸುತ್ತಲೇ ಇರುತ್ತದೆ. ಹೀಗಾಗಿ ಆ ದೈವೀ ಕೃಪೆ ಇರುವದರಿಂದ ಅಲ್ಲಿ ಬೇರೆ ಯಾವುದೇ ಘಟನೆಗಳು ಇರಲು ಸಾಧ್ಯವಿಲ್ಲ. ಅದು ಅವನನ್ನು ಸದಾ ತನ್ನ ರಕ್ಷೆಯಲ್ಲಿಯೇ ಕಾಯುತ್ತಿರುವದರಿಂದ ಅವನು ಈ ರೀತಿಯ ಮನೋಭಾವದಲ್ಲಿಯೇ ಇರುವದರಿಂದಾಗಿ, ಬರಬಹುದಾದ ಎಲ್ಲ ತೊಂದರೆಗಳಿಂದ, ಅಪಾಯಗಳಿಂದ ಪಾರಾಗಲು ಶಕ್ತನಾಗುತ್ತಾನೆ. ಎಲ್ಲವನ್ನೂ ಸಮರ್ಥವಾಗಿ ಎದುರಿಸಲು ಸಜ್ಜುಗೊಳ್ಳುತ್ತಾನೆ.

ಹೀಗಿದ್ದಾಗ ಬೇರಿನ್ನಾವದೂ ಅವನನ್ನು ಅಲ್ಲೋಲ–ಕಲ್ಲೋಲಗೊಳಿಸಲು ಸಾಧ್ಯವಾಗುವದಿಲ್ಲ. ನಿನಗೆ ಈ ವಿಶ್ವಾಸವಿದ್ದಲ್ಲಿ, ಆಗ ಈ ದೈವೀ ಕೃಪೆಯು ನಿನ್ನೊಡನೇ ಇರುವದು. ಇದು ಅನಂತಾನಂತವಾಗಿಯೇ ಸಾಮರ್ಥ್ಯಶೀಲವಾಗಿದ್ದು, ಅಧಿಕಾಧಿಕವಾಗಿಯೇ ಜಾಗರೂಕತೆಯಿಂದ ಕೂಡಿರುತ್ತದೆ. ನಿನ್ನ ಭೌತಿಕ–ಶರೀರದ ಸಂಗತಿಗಳನ್ನು ಅವಲಂಬಿಸದೇ ಅಲ್ಲಿ ಆ ಸ್ಥಾಯೀಬಲವು ಅಧಿಕಾಧಿಕವಾಗಿ ನೆಲೆಸುತ್ತದೆ. ಅಲ್ಲಿ ಆ ಏಕಮಾತ್ರ ದೈವೀ ಕೃಪೆಯನ್ನು ಹೊರತುಪಡಿಸಿ ಮತ್ತೆ ಬೇರೆ ಏನನ್ನೂ ಆಶ್ರಯಿಸುವ ಅವಶ್ಯಕತೆ ಬರುವದಿಲ್ಲ. ಹೀಗಾಗಿ ಇದು ಋತದ ಆಧಾರದಲ್ಲಿದೆ. ಯಾವುದೂ ಇದನ್ನು ವಿಚಲಿತಗೊಳಿಸಲು ಸಾಧ್ಯವೇ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/297**

ಇಲ್ಲಿ ಅತ್ಯಂತ ಮುಖ್ಯ ಸಂಗತಿ ಎಂದರೆ, ಮುಗ್ಧಶಿಶುವಿನ ರೀತಿಯಲ್ಲಿ ವಿಶ್ವಾಸವನ್ನು ಹೊಂದಬೇಕಾಗಿದೆ. ಈ ಶಿಶುವಿನ ನಿಷ್ಕಪಟ ವಿಶ್ವಾಸವು ಇದ್ದಲ್ಲಿ ಅದು - ದೈವೀ ಕೃಪೆಯು - ಖಂಡಿತವಾಗಿಯೂ ಆಗಮಿಸುತ್ತದೆ. ಇದು ಬೇಕೆಂದು ಯಾರೊಬ್ಬರು ಬಯಸದೇ ಇದ್ದರೂ ಸಹಿತ ಬಂದೇ ಬರುತ್ತದೆ. ಆ ಕೃಪೆಯು ಬೇಕು ಎಂದು ಯಾವಾಗ ಅದರ ಅವಶ್ಯಕತೆಯಾಗುತ್ತದೆಯೋ, ಆಗ ಅವನಿಗೆ ಖಚಿತಗೊಳ್ಳುವ ಹಾಗೆಯೇ ಆಗಮಿಸುತ್ತದೆ. ಇದೇ ಇಂದು ಅತ್ಯಾವಶ್ಯವಾಗಿ (ಎಲ್ಲರಲ್ಲೂ) ಇರಲೇಬೇಕಾದ ಸಂಗತಿಯಾಗಿದೆ.

ಇದೆಲ್ಲ ಸರಿ, ಮತ್ತೆ ಓರ್ವ ವ್ಯಕ್ತಿಯು ಹೆಚ್ಚಿನ ಬಲಕ್ಕಾಗಿ ಅಭೀಪ್ಸೆಯನ್ನು ಹೊಂದಿದ್ದಲ್ಲಿ, ಯಾವಾಗ ಈ ದೈವೀ ಕೃಪೆಯ ಸಹಾಯ ಬಯಸಿ ಕೇಳುತ್ತಾನೆಯೋ, ಯಾವಾಗ ಯಾವ ಕಾರಣಕ್ಕೂ ವಿಚಲನೆ ಹೊಂದದ ನಿಶ್ಚಲತೆಯಿಂದ ಕೂಡಿ ಪ್ರಾರ್ಥಿಸುತ್ತಾನೆಯೋ, ಆಗ ಅದು ಖಚಿತವಾಗಿಯೂ ಆಗಮಿಸುತ್ತದೆ. ಇಂತಹ ಸಂದರ್ಭದಲ್ಲಿ ಅದು ಯಾವುದೇ ಕಾರಣಕ್ಕೂ ಬಾರದೇ ಉಳಿಯುವ ಸಂದರ್ಭವೇ ಉದ್ಭವಿಸುವದಿಲ್ಲ. ಹೀಗಾಗಿ ಇದರ ಆಗಮನ ಖಚಿತವಾಗಿದೆ. ಇದರ ವಿಧಾನವೇ ಈ ರೀತಿಯಲ್ಲಿರುತ್ತದೆ. ಇದು ನಿಜವಾಗಿಯೂ ಆಂತರ್ಯವನ್ನು ಬೆಳಗಿಸುತ್ತದೆ. ಈ ವಿಶ್ವಾಸವಿಲ್ಲದೇ ಅದು ಸಾಧ್ಯವೇ ಅಗುವದಿಲ್ಲ. ಕೆಲವು ವ್ಯಕ್ತಿಗಳು ಮಾತ್ರ ಸದಾ ಈ ರೀತಿಯ ವಿಶ್ವಾಸದ ಹಂತದಲ್ಲಿಯೇ ಇರುತ್ತಾರೆ. ಅಲ್ಲಿ ಏನೇನು ಲಭ್ಯತೆಗೆ ದೊರೆಯುವದೋ ಅದೆಲ್ಲವನ್ನೂ ಸ್ವೀಕರಿಸಲು ಸದಾ ಸಿದ್ಧರಿರುತ್ತಾರೆ...

ಒಂದೊಮ್ಮೆ ಈ ವಿಶ್ವಾಸವು ಇದ್ದಲ್ಲಿ, ಅದು ಅಂತಃಪ್ರೇರಣೆಯಿಂದ ಕೂಡಿರುವಲ್ಲಿ, ಸುಸ್ಪಷ್ಟವಾಗಿಯೇ ಪ್ರಶ್ನೆಗಳಿಂದ ಮುಕ್ತವಾಗಿರುವಲ್ಲಿ, ಆಗ ಅದು ಅತ್ಯುತ್ತಮವಾಗಿಯೇ ಇರುತ್ತದೆ, ಮತ್ತು ಬೇರೆ ಯಾವುದಕ್ಕೂ ಹೋಲಿಸಲಿಕ್ಕೂ ಬಾರದ ಹಾಗೆ ಇರುತ್ತದೆ. ವಿರೋಧಾಭಾಸಗಳಿಂದ ಅಥವಾ ಸಂಶಯದಿಂದ ತುಂಬಿರುವ ಮನಸ್ಸಿದ್ದಲ್ಲಿ, ಅದು ಎಲ್ಲವನ್ನೂ ನಾಶಗೊಳಿಸುತ್ತದೆ. ಯಾರು ತೊಂದರೆಯಲ್ಲಿ ಇರುತ್ತಾರೆಯೋ ಅವರೆಲ್ಲರೂ ಈ ರೀತಿಯ ಮನೋಭಾವದಲ್ಲಿರುವವರೇ ಆಗಿದ್ದಾರೆ. ಅವರು ಹೇಳುತ್ತಿರುವದಾದರೂ ಏನನ್ನು? ಇದು ಬಹಳ ಕಠಿಣವಾಗಿದೆ, ಅಸಾಧ್ಯವೆಂದೇ ತೋರುತ್ತಿದೆ, ನಾನು ಇದನ್ನು ನಿಭಾಯಿಸುವ ಶಕ್ತಿಯನ್ನು ಹೊಂದಿಲ್ಲ ಎನ್ನುವ ವಿಚಾರವೇ ಆಗಿದೆ. ಜೊತೆಗೆ ಈ ಪ್ರವೃತ್ತಿಯೇ ಪ್ರವೃದ್ಧಿಯಾಗುತ್ತ ಹೋದಲ್ಲಿ, 'ಇಂತಹ ಸ್ಥಿತಿಯಲ್ಲಿ ನಾನು ಸಿಲುಕಿಕೊಂಡಿದ್ದೇನೆ, ನಾನು ಇದನ್ನು ಬಯಸಿರಲಿಲ್ಲ' ಎಂದುಕೊಳ್ಳುತ್ತ ಉಳಿದಲ್ಲಿ, ಆಗ ಆ ಸ್ಥಿತಿಯು ಮತ್ತೂ ಮತ್ತೂ ದಟ್ಟೈಸುತ್ತದೆ; ಭೀಕರತೆಯಿಂದ ಕೂಡಿರುತ್ತದೆ; ಇದೇ ಅಂಜಿಕೆಯಲ್ಲಿಯೇ ಕುಸಿಯುತ್ತ ಕೆಳಗೆ ಕೆಳಗೆ ಜಾರುತ್ತದೆ ಎನ್ನುವ ಯೋಚನೆಯಲ್ಲಿಯೇ ಇರುತ್ತಾರೆ. ಇಂತಹ ಸಂದರ್ಭದಲ್ಲಿ ಅವನು ಆಗಮಿಸಬಯಸುವ ಶಕ್ತಿ ಹಾಗೂ ತನ್ನ ಮಧ್ಯದಲ್ಲಿ ಒಂದು ಗೋಡೆಯನ್ನು ನಿರ್ಮಿಸಿಕೊಂಡಿರುತ್ತಾನೆ. ಹಾಗಿದ್ದಾಗ್ಯೂ ತನಗೆ ಬಲವು ಸಿಗಲಿ ಎಂದು ಆಶಿಸುತ್ತ ಇರುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/403–04**

ಯೋಗವನ್ನು ನೀನು ಆಯ್ಕೆ ಮಾಡಿಕೊಳ್ಳುವ ಸಮಯದಲ್ಲಿ, ನಿನ್ನ ಮಾನಸಿಕ ಸಂರಚನೆಗಳೆಲ್ಲವನ್ನೂ ಮತ್ತು ನಿನ್ನ ಪ್ರಾಣಿಕ ಬಂಧನದ ಪಾತ್ರಗಳನ್ನೂ ಸಂಪೂರ್ಣವಾಗಿ ಹುಡಿಗುಟ್ಟಿಸಿಕೊಳ್ಳಬೇಕು. ನಿನ್ನ ವಿಶ್ವಾಸವೊಂದನ್ನು ಹೊರತುಪಡಿಸಿ ಬೇರೆ ಏನನ್ನೂ ಆಶ್ರಯಿಸದೇ ಇರುವ ಹಾಗೆ, ನಿನ್ನನ್ನೇ ನೀನು 'ನೆಲಕ್ಕಂಟಿಕೊಳ್ಳದೇ ಸದಾ ಮೇಲಿನಿಂದಲೇ ಬರುವ ಸುರಕ್ಷೆಯ ಭರವಸೆಯಲ್ಲಿ' ಇರುವಂತೆ ಕಡ್ಡಾಯವಾಗಿ ಸಿದ್ಧಪಡಿಸಿಕೊಳ್ಳಬೇಕು. ನಿನ್ನ ಗತವನ್ನು ಸಂಪೂರ್ಣವಾಗಿಯೇ ಮರೆತು ಬಿಡಬೇಕು. ಸದಾ ಅದಕ್ಕೇ ಅಂಟಿಕೊಳ್ಳುವದನ್ನೂ ಬಿಡಬೇಕು. ನಿನ್ನ ಗತವನ್ನು ನಿನ್ನ ಪ್ರಜ್ಞೆಯಿಂದಲೇ ಕಿತ್ತು ಹಾಕಿ ನವೀನ ಭಾವದಲ್ಲಿಯೇ ರೂಪುಗೊಳ್ಳಲು ಸಿದ್ಧನಿರಬೇಕು. ಯಾವುದೇ

ಬಂಧನಗಳು ಇರದೇ ಸಾಗಲು ಮುಕ್ತನಾಗಿರಬೇಕು. ನೀನು ಏನಾಗಿದ್ದೆ ಎನ್ನುವದರ ಬಗೆಗೆ ಎಂದಿಗೂ ಚಿಂತಿಸಬೇಡ. ಆದರೆ ಯಾವುದಕ್ಕೆ ಅಭೀಪ್ಸೆಯನ್ನು ಹೊಂದಿರುವೆಯೋ ಅದರ ಜೊತೆಗೆ ಸದಾ ಇರು; ನಿನ್ನನ್ನು ನೀನು ಅರಿತುಕೊಳ್ಳಲು ಬಯಸುತ್ತಿರುವೆಯೋ ಸದಾ ಅದನ್ನೇ ಸಂಪರ್ಕದಲ್ಲಿಟ್ಟುಕೋ. ಮೃತಸದೃಶವಾಗಿರುವ ನಿನ್ನ ಗತವನ್ನು ತೊರೆದು ಇತ್ತ ಬಾ, ಮತ್ತೆ ನೇರವಾಗಿ ಭವಿಷ್ಯದತ್ತ ದೃಷ್ಟಿಸುವದನ್ನು ಪ್ರಾರಂಭಿಸು. ನಿನ್ನ ಮತ, ರಾಷ್ಟ್ರ, ಕುಟುಂಬ ಅಲ್ಲದೇ ಅದೇ ಆ ದಿವ್ಯತ್ವವೂ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/83–84**

ಯಾವ ಘಳಿಗೆಯಲ್ಲಿ ಅಹಿತಕಾರಿಯಾದದ್ದು ಅಧಿಕಾಧಿಕವಾಗಿ ಕಡುಕಷ್ಟಕರವಾಗಿ ರೂಪುಗೊಳ್ಳುತ್ತ ಸಾಗುತ್ತದೆಯೋ, ಆಗಲೇ ಆ ಪರಮಶಕ್ತಿಯ ಕ್ರಿಯೆಯೂ ಪ್ರಾರಂಭಗೊಳ್ಳುವಂತೆ ಮತ್ತು ಅದು ಖಚಿತವಾಗಿಯೂ ಘಟಿಸುವಂತೆ ಇರುತ್ತದೆ. ಅದರಲ್ಲೂ ಅದು ನಮ್ಮ ವಿಶ್ವಾಸದ ಕ್ರಿಯೆಯಲ್ಲಿಯೇ ಘಟಿಸುವಂತೆ ರೂಪುಗೊಂಡಿರುತ್ತದೆ. ಆ ಕೃಪೆಯು ಎಂದೆಂದಿಗೂ ನಮ್ಮನ್ನು ಪತನಗೊಳಿಸುವದಿಲ್ಲ ಎನ್ನುವದು ತಿಳಿದಿರಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/169 – ಶ್ರೀಮಾತೆ**

## ಮೂಲಭೂತ ಅವಶ್ಯಕತೆ; ಸ್ವಯಂ–ಏಕಾಗ್ರತೆ

**– ಅನುವಾದ: ಪುಟ್ಟು ಕುಲಕರ್ಣಿ**

ಇಲ್ಲಿ ಮುಖ್ಯವಾಗಿ ನಾವು ಅರಿತುಕೊಳ್ಳಬೇಕಾಗಿರುವ ಸಂಗತಿ ಎಂದರೆ, ನಾವು ಹೇಗೆ ಏಕಾಗ್ರತೆಯನ್ನು ಸಾಧಿಸಿಕೊಳ್ಳಬೇಕು? ನಮ್ಮ ಜೀವನದ ಜೀವಾಳವಾಗಿರುವಂತೆಯೇ ಈ ಏಕಾಗ್ರತೆಯನ್ನು ಸಾಧಿಸಿಕೊಳ್ಳದ ವಿನಾ ಮತ್ತು ಅದನ್ನು ಸಾಧಿಸಿಕೊಳ್ಳುವ ವಿಧಾನವನ್ನೂ ಅರಿಯದ ಮುನ್ನ ಆ ದಿವ್ಯತ್ವವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ಈ ಏಕಾಗ್ರತೆಯು ಒಂದು ಜೀವಂತಿಕೆಯ ಸಾಕ್ಷಾತ್ಕಾರದ ಸಮಾಪನದಲ್ಲಿಯೇ ಪರಿಣಾಮವನ್ನು ಒದಗಿಸುತ್ತದೆ. ಜೊತೆಗೆ "ಆ ಏಕ"ತ್ವವು ಸದಾ ನಮ್ಮಲ್ಲಿಯೇ ಅಸ್ತಿತ್ವದಲ್ಲಿರುವದರ ಕುರಿತು ಶಾಶ್ವತವಾಗಿರುವ ಅನುಭವವನ್ನು ಕೊಡುತ್ತದೆ. ಜೊತೆಗೆ ನಾವು ಯಾವ ಯಾವ ವಿಷಯಗಳಲ್ಲಿ

ಜಾಗೃತರಾಗಿರುತ್ತೇವೆಯೋ ಅಲ್ಲೆಲ್ಲವೂ ಈ "ಏಕ"ತ್ವವೂ ಇರುವದು. ಇದೆಲ್ಲವೂ ಯೋಗದ ಮೂಲಕ ಜ್ಞಾನ ಸಂಪಾದನೆ ಮತ್ತು ಜ್ಞಾನಪ್ರಾಪ್ತಿಯಾದ ನಂತರದ ಪರಿಣಾಮವಾಗಿರುತ್ತದೆ. ಕೇವಲ ಧಾರ್ಮಿಕ ಗ್ರಂಥಗಳನ್ನು ಓದುವದರ ಸಲುವಾಗಿಯೇ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಂಡಲ್ಲಿ, ಅಥವಾ ಆ ದಿವ್ಯತ್ವದ ಕುರಿತು ಅರಿವು ಹೊಂದುವಲ್ಲಿ ಕೇವಲ ಬೌದ್ಧಿಕ ತಾರ್ಕಿಕ ತತ್ತ್ವಜ್ಞಾನದ ಒತ್ತಡದಲ್ಲಿ ಇರುವದು ಯಾವ ಕಾರಣಕ್ಕೂ ಸಾಕಾಗುವದಿಲ್ಲ. ನಮ್ಮ ಸುದೀರ್ಘ ಬೌದ್ಧಿಕ ಮಾನಸಿಕ ಶ್ರಮದ ನಂತರದಲ್ಲಿ ಆ ಶಾಶ್ವತತೆಯ ಕುರಿತು ಹೇಳುವದನ್ನು ಕೇಳಿದ ನಂತರ, ಅನಂತತೆಯ ಕುರಿತು ರೂಪಿಸಲ್ಪಟ್ಟಿರುವ ಚಿಂತದ ಕುರಿತು ಬೇಕಷ್ಟು ವಿಚಾರದ ನಂತರದಲ್ಲೂ ನಾವು "ಅವನ ಕುರಿತು" ಏನೇನೂ ತಿಳಿದುಕೊಂಡಂತೆ ಇರುವದಿಲ್ಲ. ಏನೇ ಆದರೂ ಈ ಪ್ರಜ್ಞಾಪೂರ್ಣ ಸಿದ್ಧತೆಯು ಈ ಶಕ್ತಿಪೂರ್ಣ ಯೋಗದ ಸಂದರ್ಭದಲ್ಲಿ, ಈ ಸಮರ್ಥ ಯೋಗದ ಪ್ರಪ್ರಥಮ ಹಂತವಾಗಿರುತ್ತದೆ. ಹಾಗೆಯೇ ಇದು ಕೇವಲ ಅಪರಿಹಾರ್ಯವೇನೂ ಅಲ್ಲ. ಇದು ಎಲ್ಲರೂ ಅಪೇಕ್ಷಿಸುತ್ತಿರುವ ಅಥವಾ ಆ ರೀತಿಯಲ್ಲಿ ನಿರ್ಧರಿಸಲಿರುವ ಹೆಜ್ಜೆಯೂ ಆಗಿರುವದಿಲ್ಲ. ಕೇವಲ ಕೆಲವೇ ಕೆಲವರನ್ನು ಹೊರತುಪಡಿಸಿ ಯೋಗವು ಅಸಾಧ್ಯವೇ ಆಗಿರುತ್ತದೆ. ಯಾರಿಗೆ ಜ್ಞಾನವು ಪ್ರಜ್ಞಾಪೂರ್ವಕವಾಗಿಯೇ ಸಾಕಾರವಾಗಿ ಅದೂ ವಿಚಾರಧ್ಯಾನಶೀಲತೆಯಿಂದ ಅದನ್ನು ದೃಷ್ಟಿಸಿರುತ್ತಾರೆಯೋ, ಮತ್ತು ತರ್ಕಸಮ್ಮತಿಯ ಸಮಾಹಿತ ಅವಸ್ಥೆಯಲ್ಲಿ ಇರುವದನ್ನು ಅನುಭವಿಸಿರುತ್ತಾರೆ, ಏಕೆಂದರೆ ಅದು ಈ ರೀತಿಯಲ್ಲಿ ಇರುವದೇ ಅವಶ್ಯವೂ, ನಿಯಮವೂ ಆಗಿದೆ. ಅಥವಾ ಪ್ರಾಥಮಿಕವಾಗಿಯೇ ಇದು ಈ ರೀತಿಯಲ್ಲಿಯೇ ಬಂಧಗೊಂಡಿದೆ.

ಆ ಊರ್ಧ್ವದಲ್ಲಿ ಇರುವ "ಆ ಪ್ರಕಾಶ'ವು ನಮ್ಮನ್ನು ಕೇಳುತ್ತಿರುವದು ಏನೆಂದರೆ, ಅದು ತನ್ನ ಕಾರ್ಯವನ್ನು ಪ್ರಾರಂಭಿಸಲು ಆತ್ಮಪೂರ್ವಕವಾದ ಕರೆಯೊಂದನ್ನು ನಮ್ಮಿಂದ ಅಪೇಕ್ಷಿಸುತ್ತದೆ. ಜೊತೆಗೆ ಇದಕ್ಕೆ ಸಮರ್ಥವಾಗಿಯೇ ಬೆಂಬಲಿಸುತ್ತಿರುವ ಮನಸ್ಥಿತಿಯೂ ಆಗಿದೆ. ಈ ರೀತಿಯ ಸಹಕಾರವು (ಬೆಂಬಲವು) ಸಹಿತ ಆ ದೈವೀ ಚಿಂತನದ ಆಗ್ರಹಪೂರ್ವಕವಾಗಿರುವ ಅವಧಾರಣದ ಮೂಲಕ ತಲುಪುತ್ತದೆ. ಈ ಕ್ರಿಯಾಶೀಲ ಅಂಶಗಳೊಂದಿಗೆ ಅನುರೂಪುಗೊಳ್ಳುದು (ಸಂವಾದಿಗೊಳ್ಳುವದು), ಒಂದು ಅಭೀಪ್ಸೆಯಾಗಿ, ಒಂದು ವಿಶ್ವಾಸವಾಗಿ ಅದು ಹೃದಯಪೂರ್ವಕವಾಗಿ ಇರುವ ಆಶಯವೇ ಆಗಿರುತ್ತದೆ. ಒಂದು ವೇಳೆ ಇವೆಲ್ಲವೂ ಏಕತ್ರವಾಗಿ ಅಥವಾ ಸಮಾನ ನಾದ ತರಂಗದಲ್ಲಿ ಚಲಿಸದೇ ಇರುವ

ಸಂದರ್ಭವಿದ್ದಾಗಲೂ ಸಹಿತ, ಇವುಗಳಲ್ಲಿ ಯಾವುದೇ ಒಂದು ಅಂಶವು ಇದ್ದರೂ ಅದು ಪ್ರಬಲವಾಗಿಯೇ ಮುನ್ನಡೆಯನ್ನು ಸಾಧಿಸುತ್ತದೆ.

ಒಟ್ಟಿನಲ್ಲಿ ಈ ಚಿಂತನವು ಪ್ರಾರಂಭದ ಹಂತದಲ್ಲಿಯೇ ಅದೂ ಅಪರ್ಯಾಪ್ತವಾಗಿಯೇ ಇರಬಹುದು; ಅಭೀಪ್ಸೆಯೂ ಸಹಿತ ಅಪರಿ–ಪೂರ್ಣತೆಯಿಂದ ಇರಬಹುದು ಅಥವಾ ಸಂಕುಚಿತವಾಗಿಯೂ ಇರಬಹುದು, ವಿಶ್ವಾಸವೂ ಸಹಿತ ಪೂರ್ಣ ಪ್ರಮಾಣದಲ್ಲಿ ಪ್ರಕಾಶಮಾನವಾಗದೇ ಇರಬಹುದು, ಇಲ್ಲವೇ ಜ್ಞಾನವನ್ನೇ ಆಧರಿಸಕೊಂಡಿರದ ಸ್ಥಿತಿಯಲ್ಲಿಯೂ ಇರಬಹುದು, ಚಂಚಲತೆಯಿಂದ ಕೂಡಿರಬಹುದು, ಅನಿಶ್ಚಿತತೆಯಿಂದ ಬಳಲುತ್ತಿರಬಹುದು. ಒಂದು ವೇಳೆ ಅದು ಪೂರ್ತಿಯಾಗಿ ನಂದಿ ಹೋಗುವಂತೆಯೇ ಇದ್ದರೂ, ಮತ್ತು ಕತ್ತಲಲ್ಲಿ ಸಾಗುವಾಗ ಬಿರುಗಾಳಿಗೆ ಸಿಕ್ಕ ದೀವಟಿಗೆಯನ್ನು ಆರಿಹೋಗದಂತೆ ನೋಡಿಕೊಳ್ಳುವಂತೆ ಕಷ್ಟ ಪಡಬೇಕಾಗುತ್ತದೆ.

ಆದರೆ ಯಾವಾಗ ಈ ಸ್ವಯಂ–ಏಕಾಗ್ರತೆಯನ್ನು ಅಂತರಾಳದಲ್ಲಿಯೇ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆಯೋ, ಒಂದು ವೇಳೆ ಆ "ಆತ್ಮದ ಕರೆಗೆ" ನಮ್ಮಲ್ಲಿ ಜಾಗೃತಿಯು ಉದಿಸುತ್ತದೆಯೋ, ಇವೆಲ್ಲವೂ ಆ ದೈವೀ ಉದ್ದೇಶಕ್ಕೆ ಸಮರ್ಥನೀಯವಾದ ಉಪಕರಣಗಳಾಗಿರುತ್ತವೆ. ಆದ್ದರಿಂದ, ಪ್ರಜ್ಞಾವಂತನಾದವನು ಎಂದಿಗೂ ದೇವರ ನೆಲೆಗಾಗಿ ಇರುವ ವಿಶಾಲವಾದ ಮಾರ್ಗಗಳನ್ನು ಸೀಮಿತಗೊಳಿಸಿಕೊಳ್ಳಲು ಇಚ್ಛಿಸುವದಿಲ್ಲ. ಆ ದೇವನ ಆಗಮನಕ್ಕಾಗಿ ಅತ್ಯಂತ ಕಿರಿದಾದ ದ್ವಾರವಿರುವ ಸಂದರ್ಭವಿದ್ದರೂ ಸಹಿತ ಅದನ್ನು ಮುಚ್ಚುವದಿಲ್ಲ. ಅತ್ಯಂತ ಆಳವಾದ ಘನದ ಕತ್ತಲೆಯ ಗುಹೆಯಲ್ಲಿ ಇದ್ದರೂ, ಅಲ್ಲಿ ಅತ್ಯಂತ ಚಿಕ್ಕದಾದ ಕಿಂಡಿಯದ್ದರೂ ಸಹಿತ ಅದನ್ನೂ ಮುಚ್ಚದೇ ಎಚ್ಚರದಿಂದ ಕಾಯುತ್ತಾನೆ. ಯಾವುದೇ ಹೆಸರಿನಲ್ಲಿ, ಯಾವುದೇ ಆಕಾರದಲ್ಲಿ, ಯಾವುದೇ ಸಂಕೇತದಲ್ಲಿ ಅವನು ಬರಬಹುದು. ಒಟ್ಟಿನಲ್ಲಿ, ಆ ಸಮರ್ಪಣೆಯಲ್ಲಿ ಬೇಡಿಕೆಯಲ್ಲಿ ಪರಿಪೂರ್ಣವಾಗಿರುವ ಏಕಾಗ್ರತೆಯಲ್ಲಿ ಸಲ್ಲಿಸಲ್ಪಟ್ಟಿದ್ದರೆ ಅದು ಯಥೇಷ್ಟವಾಗಿರುತ್ತದೆ. ಯಾರಿಗೆ ಹೃದಯದಲ್ಲಿಯೇ ದೈವತ್ವವು ತನಗೆ ತಾನೇ ಅರಿವಾಗಿದೆಯೋ ಅದನ್ನು ಬಯಸುವವನ ಹೃದಯದಲ್ಲಿ ಸ್ಥಿತವಾಗಿರುವ ದಿವ್ಯತ್ವವು ಅವನ ತ್ಯಾಗವನ್ನು, ಸಮರ್ಪಣೆಯನ್ನು ಸ್ವೀಕರಿಸುತ್ತ ಇರುತ್ತದೆ,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/81–82** (SABCL **20/74–75)**

**– ಶ್ರೀ ಅರವಿಂದರು**

ನೀವು ಎಷ್ಟು ಎಷ್ಟು ಹೆಚ್ಚು ನಿಮ್ಮಂತರಂಗಕ್ಕೆ – ಅಲ್ಲಿರುವ ದಿವ್ಯತ್ವಕ್ಕೆ – ನೀಡುತ್ತ ಹೋಗುತ್ತೀರೋ ಅಷ್ಟಷ್ಟು ನೀವು ಅದರ ಸಮೀಪವಾಗುತ್ತೀರಿ. ಅಂದರೆ ದಿವ್ಯತ್ವವು ನಿಮ್ಮಲ್ಲಿ ಬರುತ್ತದೆ. ಅಂದರೆ ಪ್ರತಿಕ್ಷಣವೂ ನಿಮ್ಮ ಎಲ್ಲ ಚಿಂತನಗಳಲ್ಲಿ, ಬೇಡಿಕೆಗಳಲ್ಲಿ, ಮತ್ತು ತತ್–ಕ್ಷಣಕ್ಕೇ ಪರಿಹಾರ ದೊರಕಿಯೇ ಬಿಡುತ್ತದೆ ಎನ್ನುವ ಅಭೀಪ್ಸೆಯು ಇರದ ಸ್ಥಿತಿಯಲ್ಲಿ, ಅದು ನಿಮ್ಮಂತರಂಗದಲ್ಲಿಯೇ ಸ್ಥಿತವಾಗುತ್ತದೆ. ಸದಾ ಶಾಶ್ವತವಾಗಿರುವ ಆತ್ಮೀಯತೆಯನ್ನು, ಸಂಪೂರ್ಣವಾಗಿ ನಿಮ್ಮಲ್ಲಿ ಇರುವ ದಿವ್ಯತ್ವದ ಸಾಮಿಪ್ಯದ ಮೂಲಕ ನೀವು ಪೂರ್ಣತೆಯ ಅನುಭವವನ್ನು ಪಡೆಯುತ್ತೀರಿ. ಇದನ್ನೇ ನೀವು ಮುಂದುವರೆಸಿಕೊಂಡು ಹೋಗುವ ಹಾಗೆ ರೂಪುಗೊಳ್ಳುತ್ತದೆ. ಆಗ ಸದಾ ನಿಮ್ಮೊಡನೆ ಇದ್ದೇ ಇರುತ್ತದೆ. ನೀವು ನಡೆದಾಡುತ್ತಿದ್ದರೆ ಅದೂ ನಡೆದಾಡುತ್ತದೆ; ನೀವು ನಿದ್ರಿಸಿದರೆ ಅದೂ ಸಹಿತ ನಿದ್ರಿಸುತ್ತದೆ; ನೀವು ಆಹಾರ ಸೇವಿಸಿದರೆ ಅದೂ ಆಹಾರ ಸೇವಿಸುತ್ತದೆ; ನೀವು ಪ್ರೇಮಿಸುತ್ತಿರುವ ಆ ದಿವ್ಯತ್ವವೇ ನಿಮ್ಮಲ್ಲಿ ಪ್ರೇಮವಾಗಿರುತ್ತದೆ. ಆದರೆ ಇದಕ್ಕಾಗಿ ಪ್ರತಿಯೊಬ್ಬನೂ ತನ್ನನ್ನು ಸಂಪೂರ್ಣವಾಗಿ, ಸಮಗ್ರವಾಗಿ, ಅನನ್ಯತಾ ಭಾವದಲ್ಲಿ, ಬೇರೆ ಯಾವುದೇ ಸಂಶಯದ ಎಳೆಯೂ ಇಲ್ಲದ ಹಾಗೆ, ತನ್ನ ಸಲುವಾಗಿ ಎಂದು ಏನನ್ನೂ ಉಳಿಸಿಕೊಳ್ಳದ ಹಾಗೆ ಮತ್ತೆ ತನ್ನ ಭವಿಷ್ಯಕ್ಕಾಗಿ ಎಂದಾದರೂ ಏನನ್ನೂ ಸಂಗ್ರಹಿಸಿಟ್ಟುಕೊಳ್ಳದೇ, ಏನನ್ನೂ ತಿರಸ್ಕರಿಸದೇ, ಅಸ್ತವ್ಯಸ್ತಗೊಳಿಸದೇ ಇರಬೇಕಾಗುತ್ತದೆ.

ನಿಮ್ಮಲ್ಲಿರುವ ಅತ್ಯಂತ ಚಿಕ್ಕ ವಸ್ತುವನ್ನಾದರೂ ಸರಿ, ಅದನ್ನು ಆ ದಿವ್ಯತ್ವಕ್ಕೆ ಬಿಟ್ಟು ಕೊಡದಿದ್ದಲ್ಲಿ ಇದೆಲ್ಲವೂ ವ್ಯರ್ಥವಾದ ಕ್ರಿಯೆಯಾಗಿರುತ್ತದೆ. ಇದು ನಿಮ್ಮ ತೋಷವನ್ನು ಹಾಳು ಮಾಡುತ್ತದೆ. ನಿಮ್ಮ ಸಂತೋಷವನ್ನು ಆ ಪ್ರಮಾಣದಲ್ಲಿ ಅದು ಕುಂಠಿತಗೊಳಿಸುತ್ತದೆ. ಒಟ್ಟಿನಲ್ಲಿ, ಯಾವುಯಾವುದನ್ನು ನೀವು ಆ ದಿವ್ಯತ್ವಕ್ಕೆ ಕೊಡುವದಿಲ್ಲವೋ ಅದು ನಿಮ್ಮದೇ ಸ್ವತ್ತಿನಂತಿದ್ದರೂ, ಅದೂ ಸಹಿತ ಆ ದಿವ್ಯತ್ವವೇ "ತನ್ನ ಸಲುವಾಗಿ ಎಂದು ನಿನಗೆ ಕರುಣಿಸಿ ಕೊಟ್ಟಿರುವ" ಸಂಗತಿಯಾಗಿದೆ. ನೀನು ಆ ದಿವ್ಯತ್ವಕ್ಕೆ ಸಮೀಪವಾಗಿದ್ದೇನೆಂದು ಮತ್ತು ಅದು ಸದಾ ನಿನ್ನ ಬಳಿಯೇ ಇರುವದೆಂದು ಕಲ್ಪಿಸಿಕೊಳ್ಳಬೇಡ. ಏಕೆಂದರೆ ನೀವು ಇತರೇ ನೂರಾರು ವಸ್ತು–ವಿಷಯಗಳ ಹಾಗೂ ಇತರರ ಸಂಪರ್ಕದಲ್ಲಿದ್ದು ಅವುಗಳಿಗೇ ಅಂಟಿಕೊಂಡಿರುತ್ತೀರಿ. ನಿಮ್ಮ ಚಿಂತನಗಳಲ್ಲಿ, ಕ್ರಿಯೆಗಳಲ್ಲಿ ಭಾವನೆಗಳಲ್ಲಿ, ಆವೇಗಗಳಲ್ಲಿ ಇಂತಹ ಲಕ್ಷಾಂತರ ವಿಷಯಗಳಲ್ಲಿ ಸಿಲುಕಿಕೊಂಡು, ಆ ದಿವ್ಯತ್ವಕ್ಕೆ

ನಿಮ್ಮನ್ನು ಪೂರ್ತಿಯಾಗಿ ಸಮರ್ಪಣೆಯನ್ನೇ ಮಾಡಿಕೊಂಡಿಲ್ಲ. ಇದರಿಂದಾಗಿಯೇ ನೀವು ದಿವ್ಯತ್ವದ ಸಂಪರ್ಕದಲ್ಲಿ ಇದ್ದೇವೆಂದು ಭಾವಿಸುವಂತಿರುವದಿಲ್ಲ. ಇದಕ್ಕೆ ಮೂಲ ಕಾರಣವೆಂದರೆ, ಈ ಎಲ್ಲ ವಿಷಯಗಳೂ ನಿಮ್ಮ ಮತ್ತು ದೈವತ್ವದ ಮಧ್ಯದಲ್ಲಿ ಕಟ್ಟಲ್ಪಟ್ಟಿರುವ ಗೋಡೆಗಳಾಗಿವೆ. ಹಲವಾರು ಪರದೆಗಳಾಗಿವೆ. ಒಂದು ವೇಳೆ ನೀವು ನಿಮ್ಮ ಸರ್ವಸ್ವವನ್ನೂ ಆ ದಿವ್ಯತ್ವಕ್ಕೆ ಸಮರ್ಪಿಸಿದಲ್ಲಿ, ನಿಮ್ಮ ಸಲುವಾಗಿ ಏನನ್ನೂ ಉಳಿಸಿಕೊಳ್ಳದೇ ಇರುವಲ್ಲಿ ಮತ್ತು ಅಂತಹ ಭಾವನೆಯನ್ನೂ ತಂದುಕೊಳ್ಳದೇ ಸಮರ್ಪಿಸಿಕೊಳ್ಳಬೇಕಾಗಿರುತ್ತದೆ. ಇಲ್ಲಿ ಉಳಿಸಿಕೊಳ್ಳುವ ಚಿಕ್ಕ ವಸ್ತುವೂ ಒಂದು ಗೋಡೆಯಾಗಿಯೇ ರೂಪುಗೊಳ್ಳುತ್ತದೆ. ಇಷ್ಟೆಲ್ಲಾ ಇದ್ದುಕೊಂಡೂ ನೀವು ಆಪಾದಿಸುತ್ತಿರುವದು, "ದಿವ್ಯತ್ವವನ್ನು ಅನುಭವಿಸಲೇ ಇಲ್ಲ!" ಎನ್ನುವದಾಗಿದೆ. ಇಂತಹ ಸ್ಥಿತಿಯಲ್ಲಿ ದಿವ್ಯತ್ವದೊಡನೆ ಸ್ಪಂದಗೊಳ್ಳುವದು ಎಂದರೆ ಅಚ್ಚರಿಯ ಮಾತಾದೀತು ಅಷ್ಟೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/243 – ಶ್ರೀಮಾತೆ**

## ಸಾಧನೆಯ ಮೂರು ಆಯಾಮಗಳ ಮಾರ್ಗದರ್ಶನ

**– ಅನುವಾದ: ಶ್ರೀ ಎಂ.ಎಸ್. ನಾಗರವಳ್ಳಿ**

ಮಾನವನಲ್ಲಿ ಸಾಗಿರುವ ಪ್ರಕೃತಿಯ ಆತ್ಮ ಪ್ರಕಟಣೇಯ ಬೆಳವಣಿಗೆಯೇ ವಿಕಾಸ ಕ್ರಮವಾಗಿದೆ. ಈ ವಿಕಾಸ ಕ್ರಮವು ಮೂರು ಕ್ರಮಾಗತ ಅಂಶಗಳನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಗುವದು. **ಈಗಾಗಲೇ ವಿಕಸಿತವಾಗಿರುವದು, ಸತತವಾಗಿ ಶಕ್ತಿಯುತವಾಗಿ ವಿಕಾಸಿಸುತ್ತಲೇ ಇರುವದು ಮತ್ತು ಇನ್ನು ಮುಂದೆ ವಿಕಾಸಗೊಳ್ಳಲಿರುವದು, ಇವೇ ಆ ಮೂರು ಅಂಶಗಳಾಗಿವೆ.** ಇನ್ನು ಮುಂದೆ ವಿಕಸಿತವಾಗಲಿರುವದು ಆಗಾಗ್ಗೆ ಮಿಂಚಿ ಮಾಯವಾಗಬಹುದು. ಅದರ ಸ್ಥೂಲ ಇಲ್ಲವೇ ವಿಕಸಿತ ರೂಪದ ದರ್ಶನವು ಮಾನವರಲ್ಲಿ ಕೆಲವರಿಗೆ ಆಗಬಹುದು. ಕೆಲವು ಮಹಾವ್ಯಕ್ತಿಗಳಿಗೆ ಅದರ ಪೂರ್ಣ ಸ್ವರೂಪವೂ ದರ್ಶನಕ್ಕೆ ಸಿಗಬಹುದು. ಪ್ರಕೃತಿಯ ಮುನ್ನಡೆಯು ಯಾಂತ್ರಿಕವಾದ, ನಿಯಮಿತವಾದ ಹೆಜ್ಜೆಯಾಗಿರುವದಿಲ್ಲ. ಪ್ರಕೃತಿಯು ತನಗೆ ನಿಲುಕಲಾರದ್ದನ್ನು ಮುಟ್ಟಲು ಹವಣಿಸಿ ಹಿನ್ನಡೆ ಇಡುವದು. ಅದು ಮುಂದೆ ಧುಮುಕುವದು. ಅದು ತನ್ನನ್ನೇ ತಾನು ಸ್ಫೋಟಗೊಳಿಸಿಕೊಳ್ಳುವದು, ಅದು ಮಹಾಸಿದ್ಧಿಗಳನ್ನು ಪಡೆದುಕೊಳ್ಳುವದು. ಅದು ಮುನ್ನುಗ್ಗಿ ತನ್ನ ದಾಳಿಯಿಂದ

ಸ್ವರ್ಗವನ್ನೇ ಸೂರೆಗೊಳ್ಳಲೆಳಸುವದು. ಈ ಅತ್ಯಾಕ್ರಮಣವು ಅದರಲ್ಲಿರುವ ದಿವ್ಯತ್ವ ಇಲ್ಲವೇ ಅತೀ ಶೀಘ್ರವಾಗಿ ಗುರಿಯತ್ತ ಸಾಗುವ ಅದರ ಅಭೀಪ್ಸೆಯ ಫಲಿತವಾಗಿದೆ.

ಆಧುನಿಕ ವಿಚಾರ ಹಾಗು ಪ್ರಯತ್ನಗಳು ಪ್ರಕೃತಿಯು ಮಾನವನಲ್ಲಿ **ಸರ್ವವ್ಯಾಪಿ ಬೌದ್ಧಿಕ ಸಾಧನೆ, ಶಕ್ತಿ ಮತ್ತು ಸಾಧ್ಯತೆ**ಗಳನ್ನು ತರಲು ಯತ್ನಿಸುವದರ ದ್ಯೋತಕವಾಗಿದೆ. ಈ ಯತ್ನವು ಭೌತ ಜೀವನದಲ್ಲಿ ಸರ್ವತೋಮುಖ ಸಮೃದ್ಧಿಯನ್ನು ತರುವ ಆದರ್ಶವನ್ನು ಹೊಂದಿದೆ. ಇದರಿಂದಾಗಿ ಮಾನವನ ಮಾನಸಿಕ ಜೀವನದನ ಉನ್ನತಿಗೆ ತಳಪಾಯವನ್ನು ಹಾಕಿದಂತಾಗುವದು. ವಿಜ್ಞಾನವು ಮಾನವನಿಗೆ ಕೊಟ್ಟ **ಆರೋಗ್ಯ, ಆಯುಷ್ಯ ಮತ್ತು ದೇಹಶಕ್ತಿ** ಇವೆಲ್ಲ ಮಾನವನ ಮಾನಸಿಕ ಉನ್ನತಿಯ ಹಿನ್ನೆಲೆಯಾಗಿವೆ. ಸದ್ಯ **ಭೌತಿಕ, ಆರ್ಥಿಕ** ಆದರ್ಶಗಳ ಮೇಲುಗೈಯಾಗಿರಬಹುದು, ಆದರೆ ರಹಸ್ಯವಾಗಿರುವ ಹಿನ್ನೆಲೆಯಲ್ಲಿ **ಉಚ್ಚ ಆದರ್ಶಗ**ಳ ಸಾಧ್ಯತೆಗಾಗಿ ಕಾರ್ಯವು ನಡೆದೇ ಇದೆ.

ನಾವು ಪ್ರಕೃತಿಯಲ್ಲಿ ಮೂರು ಮೆಟ್ಟಿಲುಗಳನ್ನು ಕಾಣುತ್ತೇವೆ. ಭೌತದಲ್ಲಿ ನಮಗೆ ಆಧಾರವಾದ **ದೈಹಿಕ ಜೀವನ,** ಭೌತವನ್ನು ಹಿರಿದಾದ ಕಾರ್ಯಗಳಿಗಾಗಿ ಉಪಯೋಗಿಸಬಲ್ಲ **ಮಾನಸಿಕ ಜೀವನ** ಮತ್ತು ಇವೆರಡರ ಗುರಿಯಾಗಿರುವ, ಇವೆರಡನ್ನೂ ವಿಮೋಚನೆಗೈದು ಇವೆರಡರ ಮಹಾಸಾಧ್ಯತೆಯನ್ನು ಒದಗಿಸಬಲ್ಲ **ದಿವ್ಯ ಅಸ್ತಿತ್ವ ಇವೇ ಆ ಮೂರು ಮೆಟ್ಟಿಲುಗಳು**. ಇವುಗಳಲ್ಲಿ ಯಾವುದೊಂದೂ ನಮಗೆ ನಿಲುಕಲಾರದು ಆಗಿದೆ ಎಂದು ಭಾವಿಸಬಾರದು. ಏಕೆಂದರೆ ವಿಮೋಚನೆ ಮತ್ತು ಸಾರ್ಥಕತೆಗಳೆರಡೂ ಯೋಗದ ಗುರಿಯ ಮುಖ್ಯ ಅಂಶಗಳಾಗಿವೆ.

**ಶ್ರೀ ಅರವಿಂದರ ಯೋಗ ಸಮನ್ವಯ, ಪುಟ; 10–19 – ಶ್ರೀ ಅರವಿಂದರು**

## ಪ್ರೇಮ ಮತ್ತು ತ್ರಿವಿಧ ಮಾರ್ಗ

**ಸಂಕಲ್ಪ, ಜ್ಞಾನ ಮತ್ತು ಪ್ರೇಮ** ಇವು ಮಾನವನ ಪ್ರಕೃತಿಯಲ್ಲಿರುವ ಮೂರು ದಿವ್ಯಶಕ್ತಿಗಳಾಗಿವೆ. ಇವು ಜೀವನು ಪರಮಾತ್ಮನತ್ತ ಸಾಗುವ ಮೂರು ಮಾರ್ಗಗಳನ್ನು ಸೂಚಿಸುತ್ತವೆ. ಈ ಮೂರೂ ಮಾರ್ಗಗಳನ್ನು ಸಮನ್ವಯಗೊಳಿಸಿ ಮೂರರಲ್ಲಿಯೂ ಮಾನವನು ದೇವನೊಡನೆ ಒಂದಾಗುವಂತೆ ಮಾಡುವದೇ ಪೂರ್ಣ ಯೋಗದ ಮುಖ್ಯ ಗುರಿಯಾಗಿದೆ.

**ಕಾರ್ಯಕ್ಷಮತೆಯು ಜೀವನದ ಮೊದಲ ಶಕ್ತಿ**ಯಾಗಿದೆ. ಪ್ರಕೃತಿಯು ಶಕ್ತಿಯ ಕಾರ್ಯಗಳಿಂದ ಪ್ರಾರಂಭಗೊಳ್ಳುವದು, ಈ ಕಾರ್ಯಗಳು ಸಪ್ರಜ್ಞವಾದವುಗಳಾಗಿ ಸಂಕಲ್ಪ ಶಕ್ತಿ ಹಾಗೂ ಅದರ ಸಾರ್ಥಕತೆಯ ರೂಪ ತಾಳುವವು. ಮಾನವನು ಇಂತಹ ಕಾರ್ಯಗಳಿಂದ ತನ್ನ ಜೀವನವನ್ನು ದಿವ್ಯ ಜೀವನವನ್ನಾಗಿಸಿಕೊಳ್ಳಲು ಪ್ರಾರಂಭಿಸುವನು. ಇದು ಕರ್ಮಯೋಗದ ಮೊದಲ ಹೆಜ್ಜೆಯೂ ಹೌದು. **ಕರ್ಮಯೋಗಿಯು** ಕೊನೆಗೆ **ಜ್ಞಾನಯೋಗಿಯೂ, ಪ್ರೇಮಯೋಗಿಯೂ, ಭಕ್ತಿಯೋಗಿಯೂ** ಆಗುವನು.

ಸಂಕಲ್ಪ, ಜ್ಞಾನ ಮತ್ತು ಪ್ರೇಮ ಈ ಮೂರು ಶಕ್ತಿಗಳ ಮಿಲನದಲ್ಲಿಯೇ ನಮ್ಮ ಪರಿಪೂರ್ಣತೆಯು ಸುಭದ್ರ ಬುನಾದಿಯನ್ನು ಪಡೆದುಕೊಳ್ಳುತ್ತದೆ. ಈ ರೀತಿಯ ಸಮಗ್ರ ಜ್ಞಾನವನ್ನು ಹೊಂದುವದೇ ಪೂರ್ಣಯೋಗವಾಗಿದೆ. ನಾವು ದೇವನತ್ತ ಮಾನಸ ಶಕ್ತಿಗಳಾದ **ಬುದ್ಧಿ, ಸಂಕಲ್ಪ, ಹೃದಯ**ಗಳ ಮೂಲಕವೇ ಸಾಗಬೇಕು. ಮೊದಲು ಕರ್ಮ, ಜ್ಞಾನ, ಭಕ್ತಿಗಳಲ್ಲಿ ಬೇಕಾದ ಒಂದನ್ನು ಆರಿಸಿಕೊಳ್ಳಬಹುದು, ಆದರೆ ಈ ಮೂರೂ ಮಾರ್ಗಗಳು ಒಂದಾದಾಗಲೇ ಸಾರ್ಥಕತೆ ಕಾಣುತ್ತದೆ. ಪ್ರೇಮವು ಕರ್ಮಗಳ ಪರಮ ಸಾರ್ಥಕತೆಯಾಗಿದೆ. ಜ್ಞಾನದ ಪರಿಪೂರ್ಣ ವಿಕಸನವಾಗಿದೆ.

**ಶ್ರೀ ಅರವಿಂದರ ಯೋಗ ಸಮನ್ವಯ, ಪುಟ; 549–556**

**ಪ್ರಕೃತಿಯ ತ್ರಿಗುಣಗಳು;**

ಪ್ರಕೃತಿಯ ಉಪಕರಣಗಳಾದ **ದೇಹ, ಪ್ರಾಣ ಮತ್ತು ಮನ**ಗಳ ಕಾರ್ಯಾಚರಣೆಯ ದ್ರವ್ಯಗಳಾದ **ಶಕ್ತಿಯ ಸಂಚಯ, ಪರಿಸರದ ಪರಿಸ್ಥಿತಿ, ಪ್ರಕೃತಿಯ ಚಲನೆಗಳ ತಾಳಮೇಳ** ಇವುಗಳನ್ನು ಅವನು **ಆಧ್ಯಾತ್ಮಿಕ ದೃಷ್ಟಿ, ಸ್ವೀಕೃತಿ, ನಿರಾಕರಣೆ**ಗಳಿಂದ ನಿರ್ಧರಿಸಬೇಕು. ನಿಮ್ಮ ಪ್ರಕೃತಿಗೆ ಅತೀತನಾದವನೇ ಅದನ್ನು ನಿಯಂತ್ರಿಸಬಲ್ಲ.

ತ್ರಿಗುಣಗಳ ಕಲ್ಪನೆಯು ಪುರಾತನ ಭಾರತೀಯರ ಕೊಡುಗೆಯಾಗಿದೆ. ಅದರ ಶೋಧವು ಸುಧೀರ್ಘ ಮಾನಸಿಕ ಪ್ರಯೋಗ ಹಾಗು ಅತಿ ಸರಳ ಗಂಭೀರ ಅನುಭವದ ಫಲವಾಗಿದೆ. ಆದುದರಿಂದ ಅದರ ಅರ್ಥವು ನಮಗೆ ಸುಲಭವಾಗಿ ಆಗುವದಿಲ್ಲ. ಬಹಳ ಕಾಲದವರೆಗಿನ ಆಂತರಿಕ ಅನುಭವ, ಸೂಕ್ಷ್ಮ ಆತ್ಮ ನಿರೀಕ್ಷಣೆ,

ಪ್ರಕೃತಿ ಶಕ್ತಿಗಳ ಅಂತರ್ಜ್ಞಾನದ ಗ್ರಹಿಕೆ ಇವುಗಳಿಲ್ಲದೇ ತ್ರಿಗುಣಗಳ ವಿಚಾರವನ್ನು ವಶಪಡಿಸಿಕೊಳ್ಳುವದು ಅಸಾಧ್ಯವಾಗಿದೆ. ಭಾರತೀಯರು ಈ ಮೂರು ಗುಣಗಳಿಗೆ **ಸತ್ವ, ರಜ, ತಮ**ಗಳೆಂಬ ಹೆಸರಿಟ್ಟರು. ಸತ್ವವು ಸಮತೋಲನದ ಶಕ್ತಿಯಾಗಿದ್ದು ಒಳಿತು, ಸಾಮರಸ, ಸುಖ, ಜ್ಞಾನಗಳನ್ನು ಒದಗಿಸುವದು. ರಜಸ್ಸು ಚಲನೆಯ ಶಕ್ತಿಯಾಗಿದ್ದು ಹೋರಾಟ, ಪ್ರಯತ್ನ, ಉದ್ವೇಗ, ಕಾಮ–ಕ್ರೋಧಾದಿಗಳನ್ನು ತರುವದು. ತಮಸ್ಸು ಅಪ್ರಜ್ಞತೆ, ಜಾಡ್ಯಗಳ ಶಕ್ತಿಯಾಗಿದ್ದು ಸಂದಿಗ್ಧತೆ, ಅಸಹಾಯಕತೆ, ನಿಷ್ಕ್ರಿಯತೆಗಳನ್ನು ರೂಪಿಸುವದು. ಮಾನಸಿಕ ಆತ್ಮ ವಿಶ್ಲೇಷಣೆಯಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ತ್ರಿಗುಣಗಳ ವಿಚಾರವನ್ನು ನಾವು ಭೌತಿಕ ಪ್ರಕೃತಿಯಲ್ಲಿಯ ಎಲ್ಲ ವಸ್ತುಗಳು, ಎಲ್ಲ ಅಸ್ತಿತ್ವಗಳು, ಈ ತ್ರಿಗುಣಗಳನ್ನು ಒಳಗೊಂಡೇ ಇರುವವು. ಪ್ರಕೃತಿಯ ರೀತಿಗಳು ಹಾಗೂ ಸಕ್ರಿಯ ಸ್ವರೂಪಗಳು ಈ ತ್ರಿಗುಣಗಳ ಪರಸ್ಪರ ಕ್ರಿಯೆ–ಪ್ರತಿಕ್ರಿಯೆಗಳಿಂದಲೇ ಬರುವವು.

ಆದರೆ ತ್ರಿಗಣಗಳಿಗೆ ಅತೀತರಾಗುವದು ಈ ಮುನ್ನಡೆಯ **ಮೊದಲ ಹೆಜ್ಜೆಯಾಗಿದೆ. ಏಕೆಂದರೆ** ತ್ರಿಗುಣಾತೀತರಾಗುವದು ಮೊದಲ ನಿಯಮವಾಗಿದೆ. ತ್ರಿಗುಣಗಳ ಪರಿವರ್ತನೆಯು ಪೂರ್ಣಯೋಗದ ಮಹತ್ವದ ಹಾಗೂ ನಿರ್ಧಾರದ ಹೆಜ್ಜೆಯಾಗಿದೆ.

**ಶ್ರೀ ಅರವಿಂದರ ಯೋಗ ಸಮನ್ವಯ, ಪುಟ; 230–240**

**ಅತಿಮಾನಸ ಉಪಕರಣಗಳು – ವಿಚಾರದ ಕಾರ್ಯಾಚರಣೆ;**

ದಿವ್ಯ ವಿಜ್ಞಾನವಾದ ಅತಿಮಾನಸವು ನಮ್ಮ ಸದ್ಯದ ಪ್ರಜ್ಞೆಗೆ ತೀರ ಹೊಸತೇನೂ ಆಗಿರುವದಿಲ್ಲ. ಅದು ಆತ್ಮನ ಉಚ್ಚ ಉಪಕರಣವಾಗಿದೆ. ನಮ್ಮ ಸದ್ಯದ ಸಾಮಾನ್ಯ ಪ್ರಜ್ಞೆಯ ಎಲ್ಲ ವ್ಯಾಪಾರಗಳೂ ಈ ಅತಿಮಾನಸದ **ಸೀಮಿತ, ನಿಮ್ನ, ವಿಕೃತ** ವ್ಯಾಪಾರಗಳೇ ಆಗಿವೆ. ಆದರೆ ಅತಿಮಾನಸವು ಆತ್ಮನ **ನಿಜ, ಪರಿಪೂರ್ಣ, ಸಹಜ–ಸಾಮರಸ್ಯದ ಪ್ರಕೃತಿಯಾಗಿದೆ.** ಸಾಮಾನ್ಯ ಮನದ ಸಾಮಾನ್ಯ ಕಾರ್ಯಾಚರಣೆಗಳ ತ್ರಿವಿಧತೆಯನ್ನು ನಾವೀಗ ಗಮನಿಸಬಹುದು. ಇಂದ್ರಿಯಾನುಭವಗಳಿಂದ, ಬಾಹ್ಯ ಸ್ತರದ ನರಮಂಡಳದ ಅನುಭವಗಳಿಂದ ಬಾಹ್ಯ ಭಾವನಾತ್ಮಕ ಸತ್ವದಿಂದ, ಬಾಹ್ಯ ಜೀವನ ಶಿಕ್ಷಣ ಪರಿಸರಗಳಿಂದ ಪಡೆದ ರೂಢಿಗತ ಕಲ್ಪನೆಗಳಿಂದ ತನ್ನ ವಿಚಾರಗಳನ್ನು ರೂಪಿಸಿಕೊಳ್ಳುವ ರೂಢೀಗತ

ಮನವು ದೇಹಧಾರಿ ಮಾನವನ ಮೊದಲ ತೀರ ನಿಮ್ನ ಮಾನಸಿಕ ಅಂಶವಾಗಿದೆ. ಈ ಮನಕ್ಕೆ ಎರಡು ರೀತಿಯ ಚಲನೆಗಳು ಇರುವವು. ಇದರಲ್ಲಿ ಯಾಂತ್ರಿಕವಾಗಿ ಮತ್ತೆ ಮತ್ತೆ ಮೂಡಿ ಬರುವ ಭೌತಿಕ, ಪ್ರಾಣಿಕ, ಭಾವನಾತ್ಮಕ, ವ್ಯಾವಹಾರಿಕ, ನಿಮ್ನ ಬೌದ್ಧಿಕ ಕಲ್ಪನೆ, ಅನುಭವಗಳ ಒಳ ಪ್ರವಾಹವಿರುತ್ತದೆ. ಈ ಮನದ ಇನ್ನೊಂದು ಭಾಗವು ಹೊಸದಾಗಿ ಬರುವ ಅನುಭವಗಳನ್ನು ಅರಗಿಸಿಕೊಳ್ಳಲು ಯತ್ನಿಸುವದು.

**ಎರಡನೇಯದು ವ್ಯಾವಹಾರಿಕ ಮನ**ವಾಗಿದೆ. ಅದು ಜೀವನದ ಬಾಹ್ಯ ಸ್ತರದಿಂದ ಮೇಲೇರಿ ತತ್ತ್ವ ಹಾಗೂ ಪ್ರಾಣಶಕ್ತಿಗಳ ನಡುವಿನ ಸೃಜನಾತ್ಮಕ ಶಕ್ತಿಯಾಗುವದು. ಇದು ಸದ್ಯದ ಜೀವನದ ಸತ್ಯ ಹಾಗು ಜೀವನದಲ್ಲಿ ಇನ್ನೂ ಪ್ರಕಟವಾಗದಿರುವ ಸತ್ಯಗಳ ನಡುವೆ ಸಂಬಂಧವನ್ನು ಬೆಳೆಸುವ ಅಂಶವಾಗಿದೆ.

**ಪರಿಶುದ್ಧ ತಾತ್ವಿಕ ಮನವು ಮೂರನೆಯ ಅಂಶ**ವಾಗಿದೆ. ಅದು ಕ್ರಿಯೆ, ಅನುಭವಗಳಲ್ಲಿ ಉದಾಸೀನತೆಯನ್ನು ತಾಳಿ ಕೇವಲ ತಾತ್ವಿಕತೆಯಲ್ಲಿಯೇ ಮಗ್ನವಾಗುವದು. ಅದು ಪರಿಶುದ್ಧ ತತ್ವವನ್ನು ಅರಸುವದಕ್ಕಾಗಿಯೇ ಇಂದ್ರಿಯಾನುಭವಗಳನ್ನೂ, ಆಂತರಿಕ ಅನುಭವಗಳ ಮೇಲ್ಸ್ತರವನ್ನೂ ಗಮನಿಸುವದು. ಅದು ಎಲ್ಲದರ ಹಿಂದಿರುವ ಪರಿಶುದ್ಧ ಜ್ಞಾನವನ್ನೇ ಗಮನಿಸಲೆತ್ನಿಸುವದು. ಪ್ರಾಣ ಸ್ತರದಲ್ಲಿಯೂ ಮನದ ಸೃಜನಾತ್ಮಕ ಕಾರ್ಯವನ್ನೂ ಕೂಡ ಇದು ಇದೇ ಉದ್ದೇಶದಿಂದಲೇ ನಿರೀಕ್ಷಿಸುವದು. ಬುದ್ಧಿಯು ಈ ಮೂರು ಅಂಶಗಳನ್ನು ಸಾಮರಸ್ಯಪೂರ್ಣವಾಗಿ ಸರಿಹೊಂದಿಸಿಕೊಳ್ಳುವದು ಮಾನವನ ಮನಸ್ಸಿಗೆ ಕಠಿಣ ಕಾರ್ಯವಾಗಿದೆ.

ಈ ಅತಿಮಾನಸ ನಿರೀಕ್ಷಣೆಯಲ್ಲಿ **ಮೂರು ವಿಧದ ಚಲನೆ**ಗಳಿರುವವು. ಮೊದಲು ಜ್ಞಾತೃವು ತನ್ನ ಪ್ರಜ್ಞೆಯನ್ನು ಜ್ಞೇಯವಸ್ತುವಿನತ್ತ ಹರಿಬಿಡುವನು. ಈ ಪ್ರಜ್ಞೆಯು ಜ್ಞೇಯವಸ್ತುವನ್ನಾಕ್ರಮಿಸಿ, ಅದರಲ್ಲಿ ಹೆಚ್ಚು ಜ್ಞಾನವನ್ನು ಹೊಂದುವದು.

**ಜ್ಞೇಯವಸ್ತುವನ್ನು ಸ್ಪರ್ಶಿಸಿ ಅದರ ಜ್ಞಾನವನ್ನು ಹೊಂದುವದು** ಎರಡನೆಯ ಚಲನೆಯಾಗಿದೆ. ಸಾಕ್ಷೀಭಾವವನ್ನು ತಾಳಿದವನಲ್ಲಿ ಪರರ ವಿಚಾರಗಳು, ಭಾವನೆಗಳು ಒಳಬಂದು ತಮ್ಮ ವಿಷಯದಲ್ಲಿನ ಜ್ಞಾನವನ್ನು ಒದಗಿಸುವವು. ಆದರೆ ಈ ಒಳಸೇರುವಿಕೆ, ಗ್ರಹಿಕೆಗಳ ಸಹಾಯವಿಲ್ಲದೇ ಅತಿಮಾನಸಿಕ ಗ್ರಹಿಕೆಯಿಂದಲೇ ವಸ್ತುಗಳ ಜ್ಞಾನವನ್ನು ಪಡೆದುಕೊಳ್ಳಬಹುದು.

**ಮೂರನೇ ಹಂತದಲ್ಲಿ, ವಸ್ತುವಿನ ಛಾಯೆಯು ಆಂತರ್ಯದಲ್ಲಿ ಮೂಡಬಹುದು** ಇಲ್ಲವೇ ವಸ್ತುವಿನ ಕಲ್ಪನೆಯಷ್ಟೇ ಸಾಕಾಗಬಹುದು. ಕೇವಲ ಸಂಕಲ್ಪ ಮಾತ್ರದಿಂದಲೇ ಅತಿಮಾನಸಿಕ ಜ್ಞಾನವು ಲಭಿಸುವದು. ಜ್ಞೇಯ ವಸ್ತುವಿನಲ್ಲಿರುವ ಜ್ಞೇಯ ಭಾವವೇ ಅತಿಮಾನಸಿಕ ಜ್ಞಾನವನ್ನು ಒದಗಿಸಬಹುದು.

**ಶ್ರೀ ಅರವಿಂದರ ಯೋಗ ಸಮನ್ವಯ, ಪುಟ; 872,73,89 – ಶ್ರೀ ಅರವಿಂದರು**

## ದಿವ್ಯತ್ವದ ಜೊತೆಗೆ ಸದಾ ...

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಯೋಗವೆಂದರೆ ದೈವದೊಂದಿಗೆ ಒಂದಾಗುವುದು, ಮತ್ತು ಒಂದಾಗುವುದನ್ನು ಅರ್ಪಣೆ ಮೂಲಕ ಕಾರ್ಯಗತಗೊಳಿಸ ಬೇಕು. ಅದು ನಿಮ್ಮ ಆತ್ಮವನ್ನು ಸಮರ್ಪಿಸುವುದರ ಮೇಲೆ ನಿಂತಿದೆ. ಪ್ರಾರಂಭದಲ್ಲಿ ಸಾಮಾನ್ಯವಾದ ಮಾರ್ಗದಲ್ಲಿ ಈ ಸಮರ್ಪಣೆ ನೆರವೇರಿಸುತ್ತಿರಿ, ಎಲ್ಲವೂ ಒಂದೇ ಸಲ ಎನ್ನುವಂತೆ; ನೀವು ಹೇಳುತ್ತೀರಿ."ನಾನು ದೈವದ ಸೇವಕ ನಿದ್ದೇನೆ: ನನ್ನ ಜೀವನವನ್ನು ಕೇವಲ ದೈವಕ್ಕೆ ಅರ್ಪಿಸಿದ್ದೇನೆ. ನನ್ನ ಎಲ್ಲಾ ಪ್ರಯತ್ನಗಳು ದೈವಿ ಜೀವನವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಮಾತ್ರ". ಆದರೆ ಅದು ಮೊದಲನೆಯ ಹೆಜ್ಜೆ; ಇದು ಹೀಗೆ ಸಾಕಾಗುವುದಿಲ್ಲ. ಯಾವಾಗ ನಿರ್ಧಾರ ತೆಗೆದುಕೊಳ್ಳುವಿರೋ ಯಾವಾಗ ನಿಮ್ಮ ಜೀವನವನ್ನೆಲ್ಲ ದೈವಕ್ಕೆ ಅರ್ಪಿಸುತ್ತಿರೋ, ನೀವು ಪ್ರತಿಕ್ಷಣ ದೈವವನ್ನು ನೆನಪು ಮಾಡಿಕೊಳ್ಳಬೇಕು ಮತ್ತು ನಿಮ್ಮ ವಿಸ್ತಾರವಾದ ಅಸ್ತಿತ್ವದಲ್ಲಿ ಅದನ್ನು ಕೊಂಡೊಯ್ಯಬೇಕು. ಪ್ರತಿ ಹೆಜ್ಜೆಯಲ್ಲೂ ನೀವು ದೈವಕ್ಕೆ ಸೇರಿದವರೆಂದು ಸಂವೇದಿಸಬೇಕು; ಸತತವಾಗಿ ನೀವದನ್ನು ಅನುಭವಿಸಬೇಕು. ನೀವು ಏನೆಲ್ಲ ಆಲೋಚಿಸುತ್ತಿರೋ ಮತ್ತು ಮಾಡುತ್ತಿರೋ, ಅದು ಯಾವಾಗಲೂ ದೈವಕ್ಕೆ ನಿಮ್ಮ ಮೂಲಕ ಕೆಲಸ ಮಾಡುತ್ತದೆ. ನೀವಿನ್ನೂ ನಿಮ್ಮದು ಅಂತ ಏನನ್ನು ಅನ್ನುವ ಹಾಗಿಲ್ಲ: ಎಲ್ಲವೂ ದೈವದಿಂದ ಬರುತ್ತದೆ ಎಂದು ಸಂವೇದಿಸುತ್ತಿರಿ, ಮತ್ತು ನೀವು, ಅದನ್ನು ಮತ್ತೆ ಅದರ ಮೂಲಕ್ಕೆ ಅರ್ಪಿಸಬೇಕು.

ಸಾಮಾನ್ಯವಾದ ಅರ್ಪಣೆಯನ್ನು ಪರಿಪೂರ್ಣವಾದ ಅರ್ಪಣೆಯಾಗಿ ಮಾಡಬೇಕು. ಯಾವಾಗಲೂ ದೈವೀ ಸಾನಿಧ್ಯದಲ್ಲಿ ಜೀವಿಸಬೇಕು. ಈ ಸಾನ್ನಿಧ್ಯವೇ ನಿಮ್ಮನ್ನು ಕ್ರಿಯಾತ್ಮಕವಾಗಿರಿಸಿದೆ ಮತ್ತು ನೀವು ಏನೆಲ್ಲ ಮಾಡುತ್ತೀರೋ,

ಅದನ್ನೆಲ್ಲವನ್ನೂ ಅದೇ ಮಾಡುತ್ತಿದೆ ನಿಮ್ಮ ಕ್ರಿಯೆಗಳನ್ನೆಲ್ಲ ಅದಕ್ಕೆ ಅರ್ಪಿಸಿ, ಬರೀ ಮಾನಸಿಕ ಕ್ರಿಯೆಗಳನ್ನು ಅಷ್ಟೇ ಅಲ್ಲ, ಎಲ್ಲಾ ಆಲೋಚನೆಗಳನ್ನು ಮತ್ತು ಸಂವೇದನೆಗಳನ್ನು ಸಹಿತ ಅರ್ಪಿಸಿರಿ. ಆದರೆ ಬಹಳ ಸಾಮಾನ್ಯವಾದವುಗಳನ್ನು, ನಾವು ಆಹಾರವನ್ನು ತೆಗೆದುಕೊಳ್ಳುತ್ತಿರುವ ಬಾಹ್ಯ ಕ್ರಿಯೆಗಳನ್ನು; ಯಾವಾಗ ನೀವು ಉಣ್ಣುತ್ತಿರೋ, ಆಗ ದೈವವೇ ನಿಮ್ಮ ಮೂಲಕ ಆಹಾರ ಸೇವಿಸುತ್ತದೆ ಎಂದು ಭಾವಿಸಬೇಕು. ಯಾವಾಗ ನಿಮ್ಮ ಎಲ್ಲಾ ಚಲನೆಗಳನ್ನು ಏಕ ಜೀವನದಲ್ಲಿ ಇರಿಸುತ್ತಿರೋ, ಆಗ ನಿಮ್ಮಲ್ಲಿ ಭಿನ್ನತೆ ಬದಲಾಗಿ ನಿಮ್ಮಲ್ಲಿ ಏಕತೆ ಬರುತ್ತದೆ. ನಿಮ್ಮ ಪ್ರಕೃತಿಯ ಒಂದು ಭಾಗವನ್ನು ದೈವಕ್ಕೆ ಕೊಡುವುದು, ಜೊತೆಗೆ ಅದೇ ಕಾಲಕ್ಕೆ ಮಿಕ್ಕಿದ್ದು ಸಾಮಾನ್ಯ ಮಾರ್ಗ ಹಿಡಿಯದೇ, ಸಾಮಾನ್ಯ ಸಂಗತಿಗಳಿಂದ ಆವರಿಸದೆ, ನಿಮ್ಮ ಎಲ್ಲಾ ಜೀವನದಲ್ಲಿ ಅಳವಡಿಸಿಕೊಂಡಲ್ಲಿ, ಆಗ ಒಂದು ಸಮಗ್ರ ಪರಿವರ್ತನೆ ನಿಧಾನವಾಗಿ ನಿಮ್ಮಲ್ಲಿ ಸಾಕ್ಷಾತ್ಕಾರವಾಗುತ್ತದೆ.

ಸಮಗ್ರ ಯೋಗದಲ್ಲಿ, ಸಮಗ್ರ ಜೀವನದ ಸಣ್ಣ ವಿವರವು ಕೂಡ ಪರಿವರ್ತನೆಯಾಗಬೇಕು, ದೈವೀಕರಣಗೊಳ್ಳಬೇಕು, ಇಲ್ಲಿ ಯಾವುದು ಅಮುಖ್ಯವಲ್ಲ, ಯಾವುದು ತಾತ್ಸಾರವಲ್ಲ, ನೀವು ಆ ರೀತಿ ಹೇಳಬಾರದು. “ಯಾವಾಗ ನಾನು ಧ್ಯಾನಿಸುತ್ತೇನೋ, ತತ್ವಜ್ಞಾನವನ್ನು ಓದುತ್ತಿರುತ್ತೇನೆಯೋ ಅಥವಾ ಈ ಸಂವಾದಗಳನ್ನು ಕೇಳುತ್ತೇನೆಯೋ, ಈ ರೀತಿಯ ಪರಿಸ್ಥಿತಿಗಳಲ್ಲಿ ಪ್ರಕಾಶದೆಡೆಗೆ ತೆರೆದಿರುತ್ತೇನೆ ಮತ್ತು ಅದನ್ನು ಕರೆಯುತ್ತಾ ಇರುತ್ತೇನೆ, ಆದರೆ ಯಾವಾಗ ನಡೆಯಲು ಹೋದಾಗ ಅಥವಾ ಗೆಳೆಯರನ್ನು ಕಾಣಲು ಹೋದಾಗ, ನನ್ನಷ್ಟಕ್ಕೆ ದೈವವನ್ನು ಮರೆಯುತ್ತೇನೆ ಎಂದರೆ, ಇದೆ ನಿಲುವಿನಲ್ಲಿ ಮುಂದುವರಿದರೆ ನೀವು ಪರಿವರ್ತನೆ ಆಗುವುದಿಲ್ಲ ಮತ್ತು ನಿಜವಾದ ಏಕತೆ ಸಾಧಿಸುವುದಿಲ್ಲ”

ಯಾವಾಗಲೂ ನೀವು ಭಿನ್ನರಾಗಿರುವಿರಿ, ನಿಮಗೆ ಬಹಳವೆಂದರೆ ಉನ್ನತ ಜೀವನದ ಕ್ಷಣಿಕ ದರ್ಶನವಾಗುತ್ತದೆ. ಆದಾಗ್ಯೂ ಕೆಲವು ಅನುಭವಗಳು ಮತ್ತು ಸಾಕ್ಷಾತ್ಕಾರಗಳು ಧ್ಯಾನದಲ್ಲಿ ಅಥವಾ ಅಂತರಂಗದ ಪ್ರಜ್ಞೆಯಲ್ಲಿ ಬರಬಹುದು, ನಿಮ್ಮ ದೇಹ ಮತ್ತು ನಿಮ್ಮ ಬಾಹ್ಯ ಜೀವನ ಪರಿವರ್ತನೆಯಾಗದೆ ಉಳಿಯುತ್ತದೆ.......

**ಪ್ರಶ್ನೆ: ನಾವು ಯಾವಾಗ ಮಾನಸಿಕ ಚಲನೆಗಳಲ್ಲಿ ಏಕಾಗ್ರವಾಗಿ ಇರುತ್ತೇವೋ ಅಥವಾ ಬುದ್ಧಿವಂತಿಕೆಯ ಪ್ರಯತ್ನದಲ್ಲಿದ್ದಾಗ, ಕೆಲವೊಂದು ಸಲ ಯಾಕೆ ಮರೆತುಬಿಡುತ್ತೇವೆ ಅಥವಾ ಸ್ಪರ್ಶವನ್ನು ಕಳೆದುಕೊಳ್ಳುತ್ತೇವೆ?**

– ನಿಮ್ಮ ಪ್ರಜ್ಞೆ ಇನ್ನೂ ಭಿನ್ನತೆಯಿಂದಲೇ ಕೂಡಿಕೊಂಡು ಇರುವುದರಿಂದ ನೀವದನ್ನು ಕಳೆದುಕೊಳ್ಳುವಿರಿ. ದೈವವು ನಿಮ್ಮ ಮನಸ್ಸಿನಲ್ಲಿ ಪ್ರತಿಷ್ಠಾಪನೆಗೊಂಡಿಲ್ಲ: ನೀವು ಸಂಪೂರ್ಣವಾಗಿ ದೈವೀ ಜೀವನಕ್ಕೆ ನಿಮ್ಮನ್ನು ಮುಡುಪಾಗಿಟ್ಟಿಲ್ಲ. ಇಲ್ಲವೆಂದರೆ ನೀವು ಅಂತಹ ವಿಷಯಗಳ ಬಗ್ಗೆ ಎಷ್ಟೇ ಏಕಾಗ್ರತೆಯಿಂದ ಇದ್ದರೂ ಕೂಡ ನಿಮಗೆ ದೈವವು ಸಹಾಯ ಮತ್ತು ಬೆಂಬಲ ನೀಡುತ್ತಿದೆ ಎನ್ನುವ ಭಾವನೆ ಇರುತ್ತದೆ.

ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ, ಬುದ್ಧಿವಂತಿಕೆಯ ಅಥವಾ ಕ್ರಿಯಾತ್ಮಕದ್ದು ಎಂದರೆ ನಿಮ್ಮ ಒಂದೇ ಉದ್ದೇಶವಾಗಿರಿಸಿಕೊಂಡು "ಸ್ಮರಿಸಿಕೊಳ್ಳಬೇಕು ಮತ್ತು ಅರ್ಪಿಸಬೇಕು", ನೀವು ಏನೇ ಮಾಡಿದರು ಅದು ದೈವಕ್ಕೆ ಅರ್ಪಣೆ ಎಂದು ಭಾವಿಸಬೇಕು. ಮತ್ತು ಇದು ಕೂಡ ನಿಮಗೆ ಒಂದು ಒಳ್ಳೆಯ ಶಿಸ್ತು ರೂಪಿಸುತ್ತದೆ; ಅದು ನಿಮ್ಮಿಂದ ಬಹಳಷ್ಟು ಮೂರ್ಖತನದ ಮತ್ತು ಈ ಮೂಲಕ ಅದು ನೀವು ಮತ್ತೆ ಅನುಪಯೋಗಿ ಸಂಗತಿಗಳನ್ನು ಮಾಡುವುದರಿಂದ ತಡೆಯುತ್ತದೆ.

**ಪ್ರಶ್ನೆ: ಬಹಳ ಸಲ ಕ್ರಿಯೆ ಮಾಡುವ ಪ್ರಾರಂಭದಲ್ಲಿ ಇದನ್ನು ಮಾಡಬಹುದು; ಆದರೆ ನಾವು ಕೆಲಸದಲ್ಲಿ ತಲ್ಲೀನವಾದಾಗ, ನೆನಪು ಮಾಡಿಕೊಳ್ಳುವುದು ಹೇಗೆ?**

– ಯಾವ ಸ್ಥಿತಿಯ ಉದ್ದೇಶ ಇರಬೇಕೆಂದರೆ, ಯೋಗದ ನಿಜವಾದ ಸಾಧನೆ, ಅಂತಿಮವಾಗಿ ಪರಿಪೂರ್ಣತೆ ಮತ್ತು ಪ್ರಾಪ್ತಿ, ಅದಕ್ಕಾಗಿ ಮಿಕ್ಕ ಎಲ್ಲವೂ ಕೂಡ ತಯಾರಿ ಮಾತ್ರ, ದೈವವಿಲ್ಲದೇ ಏನು ಮಾಡಲು ಸಾಧ್ಯವಿಲ್ಲ ಎನ್ನುವ ಪ್ರಜ್ಞೆಯಿಂದ ಮಾಡಬೇಕು: ತದನಂತರ, ದೈವವಿಲ್ಲದೆ ನಿಮ್ಮ ಕ್ರಿಯೆಯ ಮೂಲ ಕಾಣೆಯಾಗುತ್ತದೆ; ಜ್ಞಾನ, ಶಕ್ತಿ ಎಲ್ಲವೂ ಹೋಗುತ್ತದೆ. ಎಲ್ಲಿಯತನಕ ನೀವು ನಿಮ್ಮ ಶಕ್ತಿಯನ್ನು ಉಪಯೋಗ ಮಾಡುತ್ತಿದ್ದೀರೆಂಬ ಭಾವನೆ ನಿಮ್ಮಲ್ಲಿ ಇರುತ್ತದೆಯೋ, ಆ ರೀತಿಯಲ್ಲಿ ಇರುವ ತನಕ ನೀವು ದೈವದ ಬೆಂಬಲವನ್ನು ತಪ್ಪಿಸಿಕೊಳ್ಳುತ್ತಿದ್ದಿರಿ.

ನೀವು ಯೋಗದ ಪ್ರಾರಂಭದಲ್ಲಿ ಸಾಕಷ್ಟು ಸಲ ದೈವವನ್ನು ಮರೆಯುತ್ತೀರಿ. ಆದರೆ ಸತತವಾದ ಅಭೀಪ್ಸೆಯಿಂದ ನೆನಪುಗೊಳಿಸುವುದನ್ನು ಹೆಚ್ಚಿಸಿಕೊಳ್ಳಬೇಕು, ಮರೆತುಹೋಗುವುದನ್ನು ಕಡಿಮೆ ಮಾಡಿಕೊಳ್ಳಬೇಕು. ಆದರೆ ಇದನ್ನು ದೇವರ ಶಿಸ್ತಿನಿಂದಲ್ಲ ಅಥವಾ ಒಂದು ಕರ್ತವ್ಯವೆಂದಲ್ಲ; ಅದೊಂದು ಪ್ರೀತಿ ಮತ್ತು ಸಂತೋಷದ ಕಾರ್ಯವಾಗಿರಬೇಕು. ನಂತರ ಒಂದು ಹಂತ ಬರುತ್ತದೆ, ಎಲ್ಲಾ ಕ್ಷಣದಲ್ಲಿ ಮತ್ತು ನೀವು ಏನೆಲ್ಲಾ ಮಾಡುತ್ತಿರುವಿರೋ ಅದರಲ್ಲಿ ದೈವೀ

ಸಾನಿಧ್ಯವನ್ನು ಸಂವೇದಿಸುವುದಿಲ್ಲವೋ, ಆಗ ನಿಮಗೆ ಏಕಾಂಗಿತನ, ದುಃಖ ಮತ್ತು ಕೆಲಸಕ್ಕೆ ಬಾರದ ಹಂತದಲ್ಲಿರುವ ಸಂವೇದನೆ ಆಗುತ್ತದೆ.

ನೀವು ಯಾವಾಗಲಾದರೂ, ದೈವದ ಸಾನಿಧ್ಯವಿಲ್ಲದಿದ್ದರೂ ಏನಾದರೂ ಮಾಡಿದಾಗ ಪರಿಪೂರ್ಣವಾಗಿ ಹಿತಕರವೆನಿಸಿದರೆ, ನೀವು ಆ ಭಾಗವನ್ನು ಸಂಪೂರ್ಣವಾಗಿ ದೈವಕ್ಕೆ ಮುಡುಪಾಗಿಟ್ಟಿಲ್ಲ ಎಂದರ್ಥ. ಸಾಮಾನ್ಯವಾದ ಮಾನವರು ಇದೇ ರೀತಿಯಾಗಿ ದೈವದ ಅವಶ್ಯಕತೆ ಇಲ್ಲವೆಂದು ತಿಳಿಯುವರು. ಆದರೆ ದೈವೀ ಜೀವನದ ಸಾಧಕನು ಬೇರೆಯದೇ ರೀತಿಯಾಗಿ ಆಲೋಚಿಸುವನು. ಮತ್ತು ಸಂಪೂರ್ಣವಾದ ದೈವದೊಂದಿಗಿನ ತಿಳುವಳಿಕೆಯುಳ್ಳ ಏಕತೆ ಹೊಂದಿರುತ್ತಾನೆ; ಆಗ ದೈವವು ಒಂದು ಕ್ಷಣ ನಿಮ್ಮಿಂದ ಹಿಂದೆ ಸರಿದರೆ ನೀವು ಸುಮ್ಮನೆ ಸತ್ತಂತೆ ಆಗುತ್ತೀರಿ; ಈಗ ದೈವವು ನಿಮ್ಮ ಜೀವನದ ಜೀವ, ನಿಮ್ಮ ಸಂಪೂರ್ಣ ಅಸ್ತಿತ್ವ ನಿಮ್ಮ ಒಂದೇ ಮತ್ತು ಸಂಪೂರ್ಣ ಬೆಂಬಲ ಆಗಿರುತ್ತದೆ. ದೈವವಿಲ್ಲದಿದ್ದರೆ, ಅಲ್ಲಿ ಏನೂ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/24–27 – ಶ್ರೀಮಾತೆ**

**ಅನುಬಂಧ:**

ಉದಾರ (ಒಬ್ಬ ಆಶ್ರಮವಾಸಿ) ಶ್ರೀಮಾತೆಯವ ರೊಂದಿಗಿನ ಸಂವಾದವನ್ನು ನಿರೂಪಿಸುತ್ತಾರೆ.

ಒಂದು ದಿನ ಶ್ರೀಮಾತೆಯವರಿಗೆ ನಾನು ಕೇಳಿದೆ "ನಾನು ಬಹಳ ವರ್ಷದಿಂದ ಯೋಗವನ್ನು ಮಾಡುತ್ತಿದ್ದೇನೆ, ಆದರೆ ಶ್ರೀ ಅರವಿಂದರ ಯೋಗವನ್ನು ಹೇಗೆ ಮಾಡಬೇಕೆಂದು ಸಂಪೂರ್ಣವಾಗಿ ನಿಶ್ಚಿತವಾಗಿ ಗೊತ್ತಿಲ್ಲ. ನಾನು ಎಲ್ಲಾ ಪುಸ್ತಕಗಳನ್ನು ಓದಿದ್ದೇನೆ ಮತ್ತು ಯೋಗ ಮಾಡಲು ಪ್ರಯತ್ನಿಸಿದ್ದೇನೆ, ಆದರೆ ನಾನು ಎಷ್ಟು ಪ್ರಗತಿ ಸಾಧಿಸಿದ್ದೇನೆ ಎಂದು ನಿಶ್ಚಿತವಾಗಿಲ್ಲ".. ನಾನು ಶ್ರೀಮಾತೆಯವರಿಗೆ ನನಗೆ ಸಹಾಯ ಮಾಡಿರೆಂದು ಕೇಳಿದೆ.

ಅವರು ಹೇಳಿದರು. "ನೀನು ಎಲ್ಲವನ್ನು ತಪ್ಪಾಗಿ ಮಾಡುತ್ತಿದ್ದೀಯಾ. ಅದನ್ನು ಕೇಳಿ ನಾನು ಸಂಪೂರ್ಣವಾಗಿ ತಬ್ಬಿಬ್ಬಾದೆ. ಹಾಗಾದರೆ ನಾನು ಏನು ಮಾಡಬೇಕು?" ಕೇಳಿದೆ. ಅವರು ಉತ್ತರಿಸಿದರು, "ನಾನು ನಿನಗಾಗಿ ಯೋಗ ಮಾಡುವೆನು. ನಾನು ಪುಳಕಗೊಂಡೆ!" ಮತ್ತೆ ಕೇಳಿದೆ, ನಾನು ಏನು ಮಾಡಬೇಕು? ಅದಕ್ಕೆ ಅವರು

ಹೇಳಿದರು “ನೀನು ನನಗೆ ನಿನ್ನನ್ನು ಕೊಡು ಮತ್ತು ನಾನು ನಿನಗಾಗಿ ಯೋಗ ಮಾಡುವೆನು”. ನಾನು ಕೇಳಿದೆ “ಅದು ಹೇಗೆ.....?” ಅವರು ನನಗೆ ಕೇಳಿದರು “ನಿನಗೆ ಪ್ರಾಮಾಣಿಕವಾಗಿರಬೇಕೇನು?” ನಾನು ಉತ್ತರಿಸಿದೆ “ಹೌದು, ನಿಶ್ಚಿತವಾಗಿ ಶ್ರೀಮಾತೆ.” ನಂತರ ಶ್ರೀಮಾತೆ ಕೇಳಿದರು “ನೀನು ಬೆಳಿಗ್ಗೆ ಎದ್ದ ತಕ್ಷಣ ಮೊದಲ ಕೆಲಸ ಏನು ಮಾಡುತ್ತೀಯ?” ನಾನು ಹೇಳಿದೆ, “ನಾನು ಹಲ್ಲು ಉಜ್ಜುತ್ತೇನೆ.” ಅವರು ಕೇಳಿದರು “ನೀನು ಹಲ್ಲನ್ನು ಹೇಗೆ ಉಜ್ಜುತ್ತಿಯ?” ನಾನು ಅಚ್ಚರಿಗೊಂಡೆ “ಹೇಗೆ?! ಎಲ್ಲರೂ ಉಜ್ಜುವ ಹಾಗೆ.” ಅವರು ಹೇಳಿದರು, “ನೀನು ಅಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದೀಯಾ. ಬದಲಾಗಿ ಉಜ್ಜುವಾಗ ನನ್ನನ್ನು ಆಲೋಚಿಸು. ನಾನು ಮಾಡುತ್ತಿದ್ದೇನೆಂದು ಆಲೋಚಿಸು. ಅಥವಾ ನೀನು ನಿನ್ನ ಮುಖ ತೊಳೆಯುವಾಗ ನಿನ್ನ ಜೊತೆಗೆ ನಾನೂ ತೊಳೆಯುತ್ತಿದ್ದೇನೆ ಎಂದು ಆಲೋಚಿಸು, ಅಥವಾ ನೀನು ಊಟ ಮಾಡುವಾಗ ನಿನ್ನ ಜೊತೆ ನಾನು ಮಾಡುತ್ತಿದ್ದೇನೆಂದು, ನಾನು ನಿನ್ನ ಜೊತೆ ನಿನ್ನ ಊಟವನ್ನು ಆನಂದಿಸುತ್ತಿದ್ದೇನೆ ಎಂದು ಆಲೋಚಿಸು.”

ಅವರು ಮತ್ತೆ ಹೇಳಿದರು “ಯಾವಾಗ ನೀನು ನಿದ್ರೆಗೆ ಹೋಗುತ್ತೀಯಾ ನೀನು ತುಂಬಾ ನನ್ನ ಬಗ್ಗೆ ಪ್ರಜ್ಞಾಪೂರ್ವಕವಾಗಿರಬೇಕು. ನಾನು ನಿನ್ನನ್ನು ಮಲಗಿಸುವೆನು ಮತ್ತು ಪೂರ್ತಿ ರಾತ್ರಿ ನಿನಗೆ ಪ್ರಜ್ಞಾಯುಕ್ತ ನಿದ್ರೆ ಆಗುತ್ತದೆ. ಯಾವಾಗ ನೀನು ಏಳುತ್ತೀಯಾ ಮತ್ತು ನಿನ್ನ ದಿನವನ್ನು ಹೆಚ್ಚು ಪ್ರಜ್ಞಾಯುಕ್ತ ರೀತಿಯಲ್ಲಿ ಪ್ರಾರಂಭವಾಗುತ್ತದೆ.”

(ಮೂಲ: ಉದಾರ, ಶ್ರೀಮಾತೆಯ ಒಂದು ಮಗು, ಪು. 141)

## ಸದಾ ಸ್ಮರಣೆಯಲ್ಲಿರಲಿ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

“ನೀನು” ಏನಾಗಬೇಕೆಂದು ಬಯಸುತ್ತಿಯೊ ಅದು ದೈವವೇ ಆಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/336**

ಪ್ರತಿದಿನ, ಪ್ರತಿಕ್ಷಣ ಒಂದು ಹೊಸ ಮತ್ತು ಪೂರ್ಣವಾದ ಮುಡಿಪಿಡಲು ಒಂದು ಹೊಸ ಅವಕಾಶವಾಗಿರಬೇಕು, ಮತ್ತು ಒಂದು ತರಹದ ಉತ್ಸಾಹಿತ ಮತ್ತು

ಮುಡಿಪಿಡುವುದಲ್ಲ....... ಆದರೆ ಒಂದು ಆಳವಾದ ಮತ್ತು ಶಾಂತವಾದ ರೀತಿಯಲ್ಲಿ ಮುಡುಪಿಡುವುದು, ಅದು ಬಾಹ್ಯದಲ್ಲಿ ಅಗತ್ಯವಾಗಿ ಕಾಣಲಿಕ್ಕಿಲ್ಲ. ಆದರೆ ಉದಿಸಿ ಬರುತ್ತದೆ ಮತ್ತು ಎಲ್ಲಾ ಕ್ರಿಯೆಗಳನ್ನು ರೂಪಾಂತರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/80**

...... ಎಲ್ಲಾ ಯಾತನೆಗಳು, ಶರಣಾಗತಿ ಇನ್ನೂ ಸಂಪೂರ್ಣವಾಗಿಲ್ಲ ಎನ್ನುವುದರ ಚಿಹ್ನೆಗಳು. ನಂತರ, ಯಾವಾಗ ನೀವು ಏನೋ "ಅಪ್ಪಳಿಸಿದೆ" ಎಂದು ಸಂವೇದಿಸುವಿರೋ, ಅದೇ ತರಹ, ಈ ರೀತಿ ಹೇಳುವುದರ ಬದಲು "ಓ ಓಹೋ, ಇದು ಕೆಟ್ಟದ್ದು ಅಥವಾ ಈ ಪರಿಸ್ಥಿತಿ ಕಷ್ಟಕರವಾದದ್ದು" ಎಂದು ನೀವು ಭಾವಿಸುತ್ತೀರೋ, ಆಗ ನೀವು ಈ ರೀತಿ ಹೇಳಬೇಕು "ನನ್ನ ಶರಣಾಗತಿ ಪರಿಪೂರ್ಣವಾಗಿಲ್ಲ." ಹೌದು, ಅದು ಸರಿಯಾಗಿದೆ. ಮತ್ತು ನೀವು, ಯಾವ ಕೃಪೆ ನಿಮಗೆ ಸಹಾಯ ಮತ್ತು ನಿರ್ದೇಶನ ಮಾಡುತ್ತಿದೆ ಎಂದು ಸಂವೇದಿಸುತ್ತಿರೋ ಅದೇ ರೀತಿ ಮುಂದುವರೆಯುತ್ತೀರಿ, ಒಂದು ದಿನ ನೀವು ಯಾವುದೇ ಭಾಧೆಯಿರದ ಶಾಂತಿಯಲ್ಲಿ ಸೇರುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/398**

ಆನಂದ, ಸತತ ಶಾಂತಿ, ನೀರವತೆ, ಪ್ರಕಾಶ ಮತ್ತು ಬದಲಾಗದ ಸಂತೋಷ ರೂಪಣೆ ಆಗುವುದಿಲ್ಲವೋ, ಅಂದರೆ ನೀವು ನಿಮ್ಮನ್ನು ಇನ್ನೂ ಶುದ್ಧೀಕರಿಸಿಕೊಳ್ಳಬೇಕೆಂದು ಅರ್ಥ ಮತ್ತು ಕೆಲವು ಸಲ ಕಠಿಣ ಶ್ರಮ ಪಡಬೇಕು. ಇದೆ ಗುರುತು.

ಭಿನ್ನವಾಗಿರುವ ಭಾವನೆಯಿಂದ ನೋವು, ದುಃಖ, ಸಂಕಟ, ಅಜ್ಞಾನ ಮತ್ತು ಎಲ್ಲಾ ಅಸಮರ್ಥತೆಗಳು ಕಾಣುತ್ತವೆ. ಕೇವಲ ಸ್ವಯಂ–ಕೊಡುಕೊಳ್ಳುವಿಕೆ, ಸ್ವಯಂ–ಮರೆಯದಿರುವಿಕೆ ಆಗುತ್ತದೆ. ಸಂಪೂರ್ಣವಾದ ಮುಡಿಪಿಡುವಿಕೆಯಿಂದ ದುಃಖ ಮಾಯವಾಗುತ್ತದೆ ಮತ್ತು ಯಾವುದೇ ಪರದೆಯಿಂದಲೂ ಮುಚ್ಚಿಡಲಾಗದ ಆನಂದ ಪ್ರತಿಷ್ಠಾಪಿತವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/401–02** **– ಶ್ರೀಮಾತೆ**

### ಶ್ರೀ ಅರವಿಂದರ

## “ಋಗ್ವೇದದ ಪ್ರಥಮ ಋಕ್” – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

**2**

ಇನ್ನು ಹೃತ್ ಅಥವಾ ರಾಜಸಿಕ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಇವು ನಮ್ಮ ಭಾವನೆಗಳಾಗಿವೆ ಅಷ್ಟೇ ಅಲ್ಲ ಜನ್ಮಗತವಾಗಿ ಬಂದಿರುವ ಗುಣಗಳಾಗಿವೆ. ಇನ್ನು ಮಾನಸ ಅಥವಾ ಸುನಿಶ್ಚಿತ ಸಂವೇದನಾತ್ಮಕವಾದ ಚಿತ್ತವು ಎಲ್ಲ ತರಹದ ಅಭಿವ್ಯಕ್ತಿಗಳನ್ನು ಊಹಿಸುವಲ್ಲಿ ಮತ್ತು ಸಾತ್ವಿಕ ಮನೋಭಾವದಲ್ಲಿ ರೂಪುಗೊಳ್ಳುವಲ್ಲಿ ಸಫಲವಾದಲ್ಲಿ ಅದನ್ನೇ ಜಾಣತನ(ಪ್ರತಿಭೆ) ಚಿಂತನವೆಂದು ಕರೆಯಲಾಗುತ್ತಿದೆ. ಈ ಹಂತದ ಜ್ಞಾನವನ್ನೇ ಮಾನವನು ಇತರೇ ಪ್ರಾಣಿಗಳ ಸಂಗಡ ಹಂಚಿಕೊಳ್ಳುತ್ತಾನೆ.

ಬುದ್ಧಿ ಅಥವಾ ಯುಕ್ತತ್ವ(Rational)ವು ಕಲ್ಪನಾತ್ಮವಾದ ಮತ್ತು ಧೀಶಕ್ತಿಯಾಗಿದ್ದು, ಇದು ಸ್ಮೃತಿಸಹಾಯಭೂತವಾಗಿ ಕೂಲಂಕಷ ವೀಕ್ಷಣೆಯ ಮೂಲಕ ನೆಲೆಗೊಳ್ಳುವದರ ಮೂಲಕ, ತುಲನಾತ್ಮಕ ಕ್ರಿಯೆಯಲ್ಲಿ, ಸುಸಂಗತ ಯುಕ್ತತ್ವದಿಂದ, ಪರಿಗ್ರಾಹಿಯಾಗಿ(ಅಂತರ್–ಗ್ರಹಿತವಾಗಿ), ಸಂಯೋಜನೆಯಲ್ಲಿ ಮತ್ತು ಸೃಷ್ಟಿಶೀಲವಾಗಿ ಇದ್ದು ಸಂಯುಕ್ತತೆಯನ್ನು ಅಭಿವ್ಯಕ್ತಗೊಳಿಸಿದಾಗ, ಅದರ ಕಾರ್ಯಗಳನ್ನು ನಾವು ಪ್ರಜ್ಞೆ ಎಂದು ಕರೆಯುತ್ತೇವೆ.

ಮಾನಸಾನಂದ; ಚಿದಾನಂದ; ಅಥವಾ ಪರಿಶುದ್ಧವಾದ ಆನಂದವು ಅಸಂಗತ ಮನೋಭೂಮಿಕೆಯಲ್ಲಿ (ವಾತಾವರಣದಲ್ಲಿ) – ಅಂದರೆ ದೇಹ, ಮನಸ್ಸು ಮತ್ತು ಪ್ರಾಣಗಳು ಎಲ್ಲ ವಿಧವಾದ ನೋವು–ಕ್ಲೇಶಗಳಿಂದ ಬಾಧಿತಗೊಂಡಿರುವಾಗ ರೂಪಾಂತರ ಹೊಂದುತ್ತಿರುತ್ತವೆ. ಆದಾಗ್ಯೂ ಸಹಿತ, ಚಿದಾನಂದವು ತನ್ನಲ್ಲಿ ತಾನು ಯಾವಾಗಲೂ ಪರಿಶುದ್ಧವಾದ ಸ್ಥಿತಿಯಲ್ಲಿಯೇ ಇರುತ್ತದೆ. ಏಕೆಂದರೆ ಇದು ಅಹೇತುಕವಾದದಲ್ಲಿ (ನಿರ್ಮಮಕಾರದಲ್ಲಿ) ಇರುತ್ತದೆ.

ಇನ್ನು ಮಾನಸ ತಪಸ್ಸು (ಮನೋತಪಃ) ಅಥವಾ ಪರಿಶುದ್ಧಾತ್ಮಕವಾದ ಆತ್ಮಶಕ್ತಿಯು (Willpower) ಜ್ಞಾನಕ್ಕಾಗಿ ಕ್ರಿಯಾಪ್ರವೃತ್ತವಾಗಿ, ಅನುಭವಗಳಲ್ಲಿ ಮತ್ತು ಉದ್ದೇಶಗಳಲ್ಲಿ, ಅಶುದ್ಧಮಯ ಮನೋಭೂಮಿಕೆ ಇದ್ದಾಗ – ಅಶುದ್ಧಿಯ ಹಂತದಲ್ಲಿ – ಅಶಕ್ತ ಹಂತದಲ್ಲಿ (ಬಲಹೀನ ಸ್ಥಿತಿಯಲ್ಲಿ), ಕ್ಷೀಣಗೊಂಡು ಜಡತೆಯಲ್ಲಿ,

ಅಜ್ಞಾನದಲ್ಲಿ ಮತ್ತು ಪ್ರಮಾದಗಳಲ್ಲಿ ಕ್ರಿಯಾಪ್ರವೃತ್ತವಾಗುತ್ತದೆ. ಆದರೆ ಇದು ಯಾವಾಗಲೂ ತನ್ನಲ್ಲಿ ತಾನು – ಅಂತರಾಳದಲ್ಲಿ – ಎಂದೆಂದಿಗೂ ಪರಿಶುದ್ಧವಾಗಿರುತ್ತದೆ. ಇದಕ್ಕೆ ಕಾರಣವೆಂದರೆ ಇದು ಅಹೇತುಕವಾಗಿದೆ. ಯಾವುದೇ ಬಯಕೆ, ಇಚ್ಛೆ, ಮತ್ತು ಮಮಕಾರರಹಿತವಾಗಿದೆ. ಬಾಹ್ಯದಲ್ಲಿ ಅಭಿವ್ಯಕ್ತಗೊಳ್ಳುವಾಗಲೂ ಸಹಿತ, ಯಾವುದೇ ಉದ್ದೇಶವಿರದ ಅಥವಾ ಅಂತಹ ಬಾಹ್ಯಾಭಿವ್ಯಕ್ತದ ಪ್ರಕಟಣೆಯ ಮೂಲಕ, ಚಿಂತನದ ಕ್ರಿಯೆಯನ್ನಾಗಲಿ ಮತ್ತು ಭಾವನೆಯ ಸತ್ಯವನ್ನಾಗಲೀ ಪ್ರಭಾವಿಸುವದಿಲ್ಲ.

ಅಹೇತುಕ ಸತ್ಯ ಅಥವಾ ಪರಿಶುದ್ಧ ಸಾಕ್ಷಾತ್ಕಾರವು ಯಾವಾಗಲೂ ಪರಿಷ್ಕರಣೆಗೆ ಒಳಪಡದ ಇಂದ್ರಿಯ(impure organs)ಜನ್ಯವಾದ ಅಹಂಕಾರ ಮತ್ತು ಭೇದದ (Egoism and Limitation) ಮೂಲಕವೇ ಕಾರ್ಯಪ್ರವೃತ್ತ–ವಾಗಬೇಕಿದ್ದರೂ, ಅದು ಆಂತರ್ಯದಲ್ಲಿ ಮಾತ್ರ ಪರಿಶುದ್ಧವಾಗಿಯೇ ಇದ್ದು, ವೈವಿಧ್ಯತೆಯಲ್ಲಿ ಇರುವ ಏಕತೆ(ಐಕ್ಯತೆ)ಯ ಬಗೆಗೆ ನಿಖರವಾದ ಅಭಿಪ್ರಾಯ ಹೊಂದಿರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಇದು ನಿರ್ಮಮಕಾರದಿಂದ ಕೂಡಿದೆ; ಯಾವುದೆ ರೂಪಾಂತರದ ಮೂಲಕ ಪ್ರಕಟಗೊಳ್ಳಬೇಕೆಂಬ ಅಥವಾ ನಾಮಕರಣಗೊಳ್ಳಬೇಕೆಂಬ ಇಚ್ಛೆಯನ್ನು ಹೊಂದಿರುವದಿಲ್ಲ.

ಕೊನೆಯದಾಗಿ ಮನದಲ್ಲಿ ನೆಲೆಸಿರುವದು ಆತ್ಮವಾಗಿದೆ. ಈ ಆತ್ಮವೇ ಸತ್ ಮತ್ತು ಚಿತ್ ಆಗಿದೆ. ಧನಾತ್ಮಕ ಮತ್ತು ಋಣಾತ್ಮಕ ಅಂಶಗಳೆರಡೂ "ಸಃ"ದಲ್ಲಿ ಅಂತರ್ಗತವಾಗಿದ್ದು, ಇದೇ 'ವಸುದೇವ' ಅಂಶ(ತತ್ವ)ವಾಗಿದೆ. ಜೊತೆಗೆ, ತತ್ ಅಥವಾ ಪರಬ್ರಹ್ಮವೂ ಇದೇ ಆಗಿದೆ. ಹೀಗಾಗಿ ಸಃ ಮತ್ತು ತತ್ ಎರಡೂ ಸಮಾನಾರ್ಥದ ಪದಗಳೇ(ಒಂದೇ) ಆಗಿವೆ. ಮೇಧಾ ಅಥವಾ ಬುದ್ಧಿಯು (ಅರಿತುಕೊಳ್ಳುವಿಕೆ) ಸಂವೇದನೆಗಳ ಮೂಲಕವೇ ಜ್ಞಾನಗ್ರಹಿಕೆಗೆ ಪೂರಕವಾದ ಅಂಶವಾಗಿ, ಮಾನಸ ಸ್ಥಿತಿಯಾಗಿ, ಚಿತ್ತವಾಗಿ, ಹೃತ್ ಅಥವಾ ಪ್ರಾಣವಾಗಿ, ಆಧೀನ ಮತ್ತು ಅನಿಶಾ ಸಂವೇದನೆಗೆ ಅನ್ವಯಗೊಂಡು ರೂಪುಗೊಳ್ಳುತ್ತದೆ.

ತರ್ಕ–ಯುಕ್ತತ್ವವು (ಸ್ಮೃತಿ ಅಥವಾ ಧೀಶಕ್ತಿ, ಪ್ರಜ್ಞೆ) ಬುದ್ಧಿಯು ಸಂವೇದನೆಗಿಂತ ಮತ್ತು ವ್ಯತಿರಿಕ್ತ ವಿರೋಧಾಭಾಸಗಳಿಗಿಂತಲೂ ಮೇಲ್–ಸ್ತರದಲ್ಲಿ ಇದ್ದು ಜ್ಞಾನೋನ್ನತಿಯ ಪ್ರಕಾಶದಲ್ಲಿ ವಿಭಾಗೀಕರಣಗೊಂಡು ಪ್ರಕಟಗೊಳ್ಳುತ್ತದೆ. ಇನ್ನು ಜ್ಞಾನ, ಸತ್ಯ ಅಥವಾ ಸತ್ವವು ತಂತಾನೆ ತಾನು ಜ್ಞಾನದ ತುರೀಯಾವಸ್ಥೆಯ ಹಂತವಾಗಿದೆ. ಈ ಎಲ್ಲ ವಿಭಾಗಗಳಿಗೂ/ಹಂತಗಳಿಗೂ ಒಬ್ಬೊಬ್ಬ ದೇವತೆ ಇರುತ್ತಾನೆ. ಹಲವಾರು ದೇವತೆಗಳು ಇರುವ ಸಂದರ್ಭಗಳೂ ಇರುತ್ತವೆ.

ಇವರನ್ನು ಗಣಗಳು ಅಥವಾ ಉಪದೇವತೆಗಳು ಎನ್ನುತ್ತಾರೆ. ಈ ವಿಭಾಗಗಳನ್ನು "ಜೀವ" ಅಥವಾ "ಆತ್ಮಶಕ್ತಿಯು" (Spirit) ಉಪಯೋಗಿಸಿಕೊಳ್ಳುವದರಿಂದ, ಇದಕ್ಕೆ "ಹಂಸ" ಎನ್ನುತ್ತಾರೆ. ಈ ಹಂಸವು ಯಾವಾಗಲೂ ಊರ್ಧ್ವಮುಖೀ ವಿಕಸನದ ಸಲುವಾಗಿಯೇ ಸಂಚರಿಸುತ್ತಿರುತ್ತದೆ. ಈ ಆರೋಹಣದ ಸಂಚಾರದ ಹಂತದಲ್ಲಿ, ಕೇವಲ ಮೇಲ್–ಸ್ತರಕ್ಕೆ ಪಯಣಿಸುವಾಗ ಮನಸ್ಸು ಸಚ್ಚಿದಾನಂದದ ನೆಲೆಗೆ ಸಾಗುತ್ತದೆ. ಇಲ್ಲಿ ಸತ್, ಚಿತ್ ಮತ್ತು ಆನಂದಗಳನ್ನು ಮಾತ್ರ ಸಂಪರ್ಕದಲ್ಲಿ ಇರಿಸಿಕೊಂಡಿರುತ್ತದೆ. ಈಗ ಇದು ಸದಾತ್ಮ ಅಥವಾ ವಾಸುದೇವ ತತ್ತ್ವದಲ್ಲಿ ಸಂವಿಷ್ಟಗೊಂಡಿರುತ್ತದೆ (Reposed). ಈ ಹಂತಕ್ಕೆ ಪರಬ್ರಹ್ಮ ಎನ್ನುತ್ತಾರೆ. ಪರಬ್ರಹ್ಮ ಎಂದರೆ ಪರಮಾತಿಪರಮ ಊರ್ಧ್ವದ ಹಂತದವರೆಗೂ ವಿಕಸನದ ತುರೀಯವನ್ನು ಪ್ರತಿಪಾದಿಸುವವನು ಎಂದರ್ಥವಿದೆ.

ಇದು ವೇದಗಳಲ್ಲಿ ಅಡಕಗೊಳಿಸಲ್ಪಟ್ಟಿರುವ ಮೂಲಭೂತವಾಗಿರುವ ಜ್ಞಾನವಾಗಿದೆ. ಇಂತಹ ಜ್ಞಾನವನ್ನು ಕಳೆದುಕೊಂಡು, ನಿರುಕ್ತಗಳಿಗೆ ಕಾಲ್ಪನಿಕ ಅರ್ಥಗಳನ್ನು ಆರೋಪಿಸುತ್ತ, ಪ್ರಕ್ಷೇಪಗೊಳಿಸುತ್ತ ನಾವೀಗ ವೇದಗಳ ಬಗೆಗೆ ಗೊಂದಲಮಯದ ವಾತಾವರಣದಲ್ಲಿ ಸಿಲುಕಿಕೊಂಡಿದ್ದೇವೆ. ಅಷ್ಟೇ ಅಲ್ಲದೇ, ವೇದಾರ್ಥಗಳನ್ನೂ ಸಹಿತ ಮೌಲ್ಯರಹಿತವಾಗಿರುವ ಸ್ಥಿತಿಯಲ್ಲಿಯೇ ಅರ್ಥೈಸಿಕೊಳ್ಳುವ ಹಂತಕ್ಕೆ ತಲುಪಿದ್ದೇವೆ.

**ಚಂದ್ರ:**

ಸ್ಮೃತಿ ಅಥವಾ ಪ್ರಜ್ಞೆಯ ದೇವತೆ ಚಂದ್ರ. ಸತ್ಯಕ್ಕೆ ಸೂರ್ಯ ದೇವತೆ. ಮನಸ್ಸಿಗೆ ಇಂದ್ರ ದೇವತೆ. ಸೂಕ್ಷ್ಮ ಪ್ರಾಣಕ್ಕೆ ವಾಯು ದೇವತೆ. ಭಾವನಾತ್ಮಕ ಮನಸ್ಸು ಅಥವಾ ಗುಣಕ್ಕೆ ಮಿತ್ರ, ವರುಣ, ಆರ್ಯಮಾ ಮತ್ತು ಭಗ ದೇವತೆಗಳು. ಸಹೇತುಕ ಚಿತ್ತಿಗೆ ಅಥವಾ ತಪಸ್ಸಿಗೆ ಬೃಹಸ್ಪತಿ ದೇವತೆ. ಸಹೇತುಕ ಸತ್‌ಗೆ ಬ್ರಹ್ಮ ದೇವತೆ. ಸಹೇತುಕ ತಪಸ್ಸಿಗೆ ಅಗ್ನಿ ದೇವತೆ. ಈ ಎಲ್ಲ ವಿವರಗಳೂ ಪ್ರತಿಮಾತತ್ತ್ವದಲ್ಲಿ ವೇದದಲ್ಲಿ ರೂಪಿತಗೊಂಡಿವೆ. ಈ ವರ್ಗೀಕರಣ ಕೇವಲ ಮಾರ್ಗದರ್ಶೀ ಸೂತ್ರಗಳು. ಹಲವಾರು ಗುಣಗಳ ಮತ್ತು ಶಕ್ತಿಗಳ ಸಂಗಮವಾಗಿರುವ ಮತ್ತು ಅವುಗಳನ್ನು ಪ್ರತಿನಿಧಿಸುವ ಹಲವಾರು ಉಪದೇವತಾ ಗಣಗಳನ್ನು ಅತ್ಯಂತ ನಿಖರವಾಗಿ ನಿಕಷಕ್ಕೆ ಒಳಪಡಿಸಿಯೆ ವೇದವು ಈ ವ್ಯವಸ್ಥೆಯನ್ನು ಅಂಗೀಕರಿಸಿಕೊಂಡಿದೆ. ಜೊತೆ ಪ್ರತಿನಿಧಿಸುತ್ತಿದೆ. ಈ ದೇವಗಣಗಳೇ ಯಜ್ಞ ಪುರುಷನ, ಈಶನ, ಆಧಾರಭೂತದ ಶಕ್ತಿಯಾದ ಸಪ್ತರೂಪೀ ಆವಿಷ್ಕಾರಕ್ಕೆ, ಪರಿಪಕ್ವ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿರುತ್ತದೆ.

ಇನ್ನು ಬೃಹದ್ದೇಹಿಗಳೆಂದು ವರ್ಗೀಕರಿಸಲ್ಪಟ್ಟ ದೈತ್ಯರೂ ಸಹಿತ ದೇವತೆಗಳಷ್ಟೇ ದಿವ್ಯತ್ವದ ಸ್ಥಾನ ಹೊಂದಿದ್ದರು. ಈ ದೇವಗಣಗಳ ಕಾರ್ಯವನ್ನು ಹಾನಿ ಮಾಡಲು, ಅಲ್ಲೋಲಕಲ್ಲೋಲಗೊಳಿಸಲು ಯತ್ನಿಸುತ್ತಿರುತ್ತಾರೆ. ಈ ವ್ಯವಸ್ಥೆಯಲ್ಲಿ ಮಾನವನು ಅಧಃಪತನಗೊಂಡು, ತನ್ನ ಬದುಕನ್ನು ಸದಾ ಅಂಧಕಾರಮಯದ ವಾತಾವರಣದಲ್ಲಿಯೇ ಉಳಿಯುವಂತೆ ರೂಪಿಸಲ್ಪಡುವ ಇವರ ಯೋಜನೆಗಳಲ್ಲಿ ಉಳಿಯುವ, ಅಥವಾ, ಮಾನವನು ಈ ಅಂಧಕಾರದ ವ್ಯವಸ್ಥೆಯನ್ನು ಒಡೆದು, ಊರ್ಧ್ವಮುಖಿಯಾಗಿ ಹೊರಹೊಮ್ಮುವಲ್ಲಿ ಹಾಗೂ ಅಂತರ್ಗತವಾಗಿ ಇನ್ನೂ ಪರಿಪೂರ್ಣಗೊಳ್ಳದಿದ್ದರೂ ಸಹಿತ ಸೌಷಮ್ಯ(ಸೌಂದರ್ಯಯುತ)ವಾಗಿ ಇರುವ ಹಂತದೆಡೆಗೆ ಸಾಗುತ್ತ, ಮತ್ತು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣದಿಂದಲೂ ಪರಿಪೂರ್ಣತೆಯ ಕೊರತೆಯಿಂದ ಅತೃಪ್ತಿಗೊಳ್ಳುವ ಹಂತದಲ್ಲಿ, ಅವನನ್ನು ಸಂತೈಸುತ್ತ, ಮತ್ತೆ ಮತ್ತೆ ಮಾರ್ಗದರ್ಶನ ಮಾಡುತ್ತ, ಅವನನ್ನು ಸದಾ ಅನಂತತೆಯ ಸ್ಥಾನದತ್ತ ಪಯಣಿಸಲು ಸಹಕರಿಸುತ್ತದೆ. ಇದು ಋಜು ಮಾರ್ಗದಲ್ಲಿ ಸಾಗುವ ಉತ್ತಮ ಗತಿಯ ಮೂಲಕ ವಸುದೇವ ತತ್ತ್ವದ ಎಡೆಗೆ ಅಥವಾ ಅವನು ಪಯಣದಲ್ಲಿ ಮುಂದುವರೆಯಲು ಅಶಕ್ತನಾಗಿದ್ದಲ್ಲಿ "ಅಧಮಗತಿ" ಅಥವಾ "ಪ್ರಕೃತಿಭಾವ"ದ ಸೀಮಿತತನಕ್ಕೆ ಒಯ್ಯುತ್ತದೆ. ಹೀಗಾಗಿ ವೇದಕಾಲದ ಆರ್ಯವರ್ಗವು ಈ ದೈತ್ಯಶಕ್ತಿಯ ಅಥವಾ ದಸ್ಯುಗಳ ತೊಂದರೆಯನ್ನು ದೇವಗಣಗಳ ಸಹಾಯದಿಂದಲೇ ನಿವಾರಿಸಿಕೊಂಡ ಉದಾಹರಣೆಗಳಿವೆ. ಆದ್ದರಿಂದಲೇ ಈ ದೇವಗಣಗಳೇ ಕಾಲಕ್ರಮೇಣ – ತಂತಾನೆ – ಮಾನವನು ತಲುಪಬಹುದಾದ ಗಮ್ಯವಾಗಿ "ಗುರಿ"ಯಾಗಿ ಆರಾಧಿಸಲ್ಪಡತೊಡಗಿತು.

**ಅಗ್ನಿ:**

ಅಗ್ನಿಯು ಭೌತಿಕ ಶಕ್ತಿಯ ವ್ಯಾಪ್ತಿಯಲ್ಲಿ 'ತೇಜಸ್ಸಿನ' ಪ್ರತೀಕವಾಗಿದ್ದಾನೆ. ಇದು ಪಂಚಭೂತ ತತ್ತ್ವಗಳಲ್ಲಿ ತೃತೀಯ ಹಾಗೂ ಅತ್ಯಂತ ಪ್ರಾಮುಖ್ಯದ ಸ್ಥಾನದಲ್ಲಿ ಇದೆ. ಈ ವಿಷಯವನ್ನು ವೇದಕಾಲದ ವಿಜ್ಞಾನ ಕಂಡುಕೊಂಡಿತ್ತು. ಈ ತೇಜಸ್ಸು ಸಪ್ತರೂಪಿ ಆಯಾಮ ಹೊಂದಿದ್ದು, ಛಾಯಾ ಅಥವಾ ನಿಷೇಧಾತ್ಮಕ ಕಾಂತಿಯ (Negative luminosity) ರೂಪದಲ್ಲಿ ಅನ್ನಮಯ ಕೋಶದ ತತ್ತ್ವವಾಗಿದೆ. ದೋಷ ಅಥವಾ ನಿಷಾದಿ(twilight)ಯು ಛಾಯೆಯ ಮೂಲಕವಾಗಿ ಸಂವಾದಗೊಂಡ ಪಂಚದೋಷಗಳ ಆಧಾರದಲ್ಲಿ ರೂಪಣೆಗೊಂಡ ತೇಜತ್ವವಾಗಿದೆ.

**ತೇಜಸ್ಸು:**

ಇದು ಸುಸ್ಪಷ್ಟದಲ್ಲಾಗಲೀ ಅಥವಾ ಸಹಜ ಸ್ಪಷ್ಟತೆಯಲ್ಲಿ ಮತ್ತು ದೀಪ್ತಿಮಯ ಕಾಂತಿಯಲ್ಲಿ, ದಿನದ(ಬೆಳಗಿನ) ಪ್ರಕಾಶದಲ್ಲಿ ಇರುವಾಗ ಮನಃಕೋಶದ ತತ್ತ್ವವಾಗಿರುತ್ತದೆ. ಜ್ಯೋತಿ ಅಥವಾ ಸೂರ್ಯಪ್ರಕಾಶವು ಅತ್ಯಂತ ಉಜ್ವಲವಾಗಿದ್ದು, ಪ್ರದೀಪ್ತತೆಯಿಂದ ಕೂಡಿದ್ದು, ಇದು ವಿಜ್ಞಾನಮಯ ಕೋಶದ ಆಧಾರವಾಗಿದೆ. ಅಗ್ನಿ ಅಥವಾ ತೇಜೋಮಯ ಪ್ರಕಾಶವು ಚಿತ್ಕೋಶದ ಆಧಾರತತ್ತ್ವವಾಗಿದೆ. ವಿದ್ಯುತ್ ಅಥವಾ ವಿದ್ಯುತ್–ಕಾಂತಿಯ ತೇಜೋಮಯತೆಯು ಆನಂದಕೋಶದ ಆಧಾರ ತತ್ತ್ವವಾಗಿದೆ. ಪ್ರಕಾಶವು ಸತ್–ಕೋಶದ ಆಧಾರವಾಗಿದೆ. ಹೀಗಾಗಿ ಈ ಏಳೂ ಅಂಶಗಳು ತಮ್ಮದೇ ಆದ ಗುಣವಿಶೇಷಗಳನ್ನು ಹಾಗೂ ಶಕ್ತಿಗಳನ್ನು ಹೊಂದಿವೆ. ಇಲ್ಲಿ ಶಕ್ತಿ(Energy) ಅಥವಾ ಚೈತನ್ಯಕ್ಕೆ ವಾಸ್ತವವು ಮತ್ತು ಪ್ರಕಾಶವು ಕೇವಲ ಶಕ್ತಿಯ ಗುಣಾತ್ಮಕ–ಸಹಚರಿಯಾಗಿರುತ್ತದೆ. ಈ ಸರ್ವ ವ್ಯವಸ್ಥೆಯಲ್ಲಿ, ಅಗ್ನಿಯು ಸರ್ವಶ್ರೇಷ್ಠನಾಗಿ, ವಿಶ್ವದಲ್ಲಿ ನೆಲೆಸಿದ್ದಾನೆ. ಇದು ವಿದ್ಯುತ್ ಗಿಂತಲೂ ಶ್ರೇಷ್ಠವಾಗಿದೆ. ಇಲ್ಲಿ ವಿದ್ಯುತ್ ಅಂಶದ ಪ್ರಧಾನ ದೇವತೆ ವಿಷ್ಣುವಾಗಿದ್ದರೂ ಸಹಿತ, ಮತ್ತೆ ಆನಂದಮಯ ಕೋಶದ ಒಡೆಯನೂ ವಿಷ್ಣುವೇ ಆಗಿದ್ದರೂ ಸಹಿತ, ಅಗ್ನಿಯೇ ಪ್ರಾಶಸ್ತ್ಯದಲ್ಲಿ ಇರುತ್ತಾನೆ. ಇದು ಉಪನಿಷತ್ತಿನಲ್ಲಿ ನಿರೂಪಿತವಾಗಿರುವ "ವಿದ್ಯತ್ತೋ ಮಾನವಃ(ವಿದ್ಯುನ್ಮಾನವ)"ದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ.

ವಿಜ್ಞಾನದ ವಿಷಯದಲ್ಲಿ, ಸೂರ್ಯ ಮತ್ತು ವಿಷ್ಣುವಿಗಿಂತಲೂ ಅಗ್ನಿಯೇ ಮೇಲು ಎನ್ನುವದು ವಿಶ್ವಸತ್ಯ. ಆದರೆ ಇಲ್ಲಿ, ವಿಷ್ಣು ಮತ್ತು ಸೂರ್ಯ ಇಬ್ಬರೂ ಅಗ್ನಿಯ ಪ್ರಭುತ್ವದ ಚೇತನದಲ್ಲಿ (ಶಕ್ತಿ)ಯಲ್ಲಿಯೇ ಕಾರ್ಯ ಪ್ರವೃತ್ತರಾಗಿ – ಇಂದ್ರನನ್ನು ತೃಪ್ತಿಪಡಿಸಲು ಕಾರ್ಯ ನಿರ್ವಹಿಸುತ್ತಾರೆ. ವಿಷ್ಣುವನ್ನು ಇಂದ್ರನಿಗಿಂತಲೂ ಕೆಳಹಂತದಲ್ಲಿರುವ ದೇವತೆಯನ್ನಾಗಿ ರೂಪಿಸಿ – ಉಪೇಂದ್ರನೆಂದು ಕರೆದು – ಉಪನಿಷತ್ತುಗಳು ಈ ವಿಷಯದ ಹಿಂದಿರುವ ರಹಸ್ಯವನ್ನು ತೆರೆದಿಟ್ಟಿವೆ.

**ಆಧುನಿಕ ಭೌತಶಾಸ್ತ್ರ ಮತ್ತು ಅಗ್ನಿ:**

ಇವೆಲ್ಲ ವಿಷಯವನ್ನು ಆಧುನಿಕ ಭೌತಶಾಸ್ತ್ರದ ಪರಿಧಿಯಲ್ಲಿ ಅನುವಾದಿಸುವದಾದರೆ, ಅಗ್ನಿಯು ಉಷ್ಣತೆ ಮತ್ತು ತಂಪು ಎರಡನ್ನೂ ರೂಪಿಸವ, ನಿರ್ದೇಶಿಸುವ, ನಿರೂಪಿಸುವ ಶಕ್ತಿಯಾಗಿದ್ದಾನೆ. ಅಲ್ಲದೇ, ಪ್ರಕಾಶ

ಮತ್ತು ಉಷ್ಣತೆ(ಶಾಖ)ದ ಪ್ರಾತಿಭಾಸಿಕ ಜಗತ್ತಿನಲ್ಲಿ ಈ ಅಗ್ನಿಯೇ ಆಧಾರಭೂತ ಶಕ್ತಿತತ್ವವಾಗಿದೆ. ಇಲ್ಲಿ ಸೂರ್ಯನು ಪ್ರಕಾಶ ಮತ್ತು ಉಷ್ಣದ ಸಂಗ್ರಹಾಗಾರ ಮಾತ್ರ. ವಿಶಿಷ್ಟ ತೆರನಾದ ಸೂರ್ಯನ ಜ್ವಾಲೆಗಳು ಕೇವಲ ತೇಜಸ್ಸಿನ ಸ್ವರೂಪವನ್ನು ಮಾತ್ರ ಕಾಣಿಸುತ್ತವೆ. ಹೀಗಾಗಿಯೇ ನಾವು ಸೂರ್ಯಪ್ರಕಾಶವನ್ನು ಪ್ರಕಾಶದ ಸ್ಥಾಯೀಶಕ್ತಿಯೆಂದು (Static energy) ಅಥವಾ ಸಾರಭೂತ ಪ್ರಕಾಶವೆಂದು ಕರೆಯುತ್ತೇವೆ. ಇದು ಸತ್–ಕೋಶದ ಆಧಾರವಾಗಿದೆ. ಇದೇ ವಿದ್ಯುತ್ಕಾಂತೀಯ ಶಕ್ತಿಯಾಗಿದ್ದು ಅಥವಾ ವಿದ್ಯುತ್ ಆಗಿರುತ್ತದೆ. ಇದರ ಜೊತೆಗೆ ಅಗ್ನಿಯ ತೇಜತ್ವವು ಸೂರ್ಯನ ಸ್ವಭಾವದಿಂದ ರೂಪಾಂತರಗೊಂಡು, ಪ್ರಕಾಶದ ವಿವಿಧ ಪ್ರಕಾರಗಳನ್ನು ರೂಪಿಸುವಲ್ಲಿ, ನಿರ್ಧರಣೆಗೊಳಿಸುವಲ್ಲಿ ಪ್ರಮುಖವಾಗಿರುತ್ತದೆ.

**ಪ್ರಕಾಶ ಮತ್ತು ವಿದ್ಯುತ್:**

ಇವೆರಡೂ ಅಗ್ನಿಯಲ್ಲಿ ಪ್ರವೇಶಿಸಿದಾಗ ಮಾತ್ರ ಕಾರ್ಯಪ್ರವೃತ್ತವಾಗುತ್ತವೆ. ಹೀಗಾಗಿ ಅಗ್ನಿಯ ಆಧಾರದಲ್ಲಿಯೇ ಕಾರ್ಯ ನಿರ್ವಹಿಸುವ ನಿಯತಿ ಇದೆ. ಸೂರ್ಯನಿಗೂ ಸಹಿತ ಈ ಅಗ್ನಿಯೇ ಶಕ್ತಿಪೂರೈಕೆಯ ಕೇಂದ್ರವಾಗಿದ್ದಾನೆ. ಇವನು ಜ್ಯೋತಿಗಳನ್ನು ಸೃಷ್ಟಿಸುತ್ತಾನೆ. ಇವನು ತೇಜಸ್ಸನ್ನೂ ಸೃಷ್ಟಿಸುತ್ತಾನೆ. ಸೃಷ್ಟಿಯನ್ನೂ ರೂಪಿಸುತ್ತಾನೆ. ಇಂತಹ ಸೃಷ್ಟಿಯು ನಿಷೇಧಾತ್ಮಕ ಅಂಶಗಳಿಂದ ಕೂಡಿದ್ದಲ್ಲಿ, ಅದು ಛಾಯಾ ಸೃಷ್ಟಿ ಎನಿಸಿಕೊಳ್ಳುತ್ತದೆ. ಇದು ಸೂಕ್ತವಾಗಿದೆಯೋ ಇಲ್ಲವೋ ಎನ್ನುವ ಸಂಶಯಕ್ಕಿಂತ, ವೇದದ ಭೌತಶಾಸ್ತ್ರದ ರಚನೆ ಇದಾಗಿದೆ.

**ಋಗ್ವೇದದ ಪ್ರಥಮ ಋಕ್ಕಿನ ಮನಶ್ಶಾಸ್ತ್ರೀಯ ಅಧ್ಯಯನ**

ಇನ್ನು ಈ ವಿಷಯವನ್ನು ಆಧುನಿಕ/ಪ್ರಾಚೀನ ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ, ಅಗ್ನಿಯು ಬುದ್ಧಿ–ಮನ (Intelligance Mind) ಆಗಿದ್ದು, ಅದರಲ್ಲಿ, ಇದು ಈಗ ಸರ್ವ–ಪ್ರಧಾನ–ಪ್ರಾಶಸ್ತ್ಯವನ್ನೂ ಹೊಂದಿದ್ದು, ಜ್ಞಾನವಾಗಲೀ ಅಥವಾ ಆನಂದವಾಗಲೀ, ಪೂರ್ಣವಾಗಿ ವಿಕಸನಗೊಂಡಿರದ ಹಂತದಲ್ಲೂ ಸಹಿತ – ಮನಸ್ಸಿನ ಹಂತಕ್ಕಿಂತ ಉನ್ನತ ಸ್ತರದಲ್ಲಿ ಇರುತ್ತದೆ. ಆದರೂ, ಸೋಮನಾಗಲೀ ಅಥವಾ ಬುದ್ಧಿಯು ಅದರಲ್ಲೂ ವಿವೇಚನಾತ್ಮಕ ಬುದ್ಧಿಯು ಮಾತ್ರ ಇದನ್ನು ನಿರ್ವಹಿಸಬಲ್ಲುದು. ಆದರೆ ಇದು "ಇಂದ್ರ" ಹಂತದಲ್ಲಿದೆ. ಸಂಪೂರ್ಣ ಸೋಮ ಸ್ವರೂಪದಲ್ಲಿ ಇರುತ್ತದೆ. ಹೀಗಾಗಿ ಅರಿವು

ಸಂವೇದನೆಗಳನ್ನು ಒಳಗೊಂಡು/ಆಧರಿಸಿ ರೂಪುಗೊಂಡು ಬುದ್ಧಿಯ ಮೂಲಕವಾಗಿ ಬಲವತ್ತರಗೊಳ್ಳುತ್ತದೆ. ಈ ಬುದ್ಧಿಯು ಪರಮ ಹಂತದಲ್ಲಿದ್ದು, ಸೋಮ, ಸೂರ್ಯ,ಅಗ್ನಿ ಮತ್ತು ಪರಮ ಪುರುಷೋತ್ತಮನಾದ ವಿಷ್ಣುವಿನ ಕಾರ್ಯಗಳಿಗಿಂತಲೂ ಪರಮ ಪದದಲ್ಲಿ ಇರುತ್ತವೆ. ತಾನೆ ಹೆಮ್ಮೆ ಪಡಲು ಕಾರಣವೆಂದರೆ – ಮಾನಸ ಹಂತದಿಂದ ವಿಜ್ಞಾನದ ಹಂತಕ್ಕೆ ಸಾಗುವ ವಿಕಸನದ ಜೊತೆಗೆ ಇರುವ ಸಂಯೋಗದಿಂದಾಗಿ ಮತ್ತು ಸಂವೇದನೆಗಳ ಮೂಲಕ ಅಥವಾ ವಿಜ್ಞಾನಮಯ ಸಂಭೂತಿ(Ideal Cognition)ಗಳ ಮೂಲಕ, ಮನುಷ್ಯ ತನ್ನಷ್ಟಕ್ಕೆ ತಾನೇ ವಿಕಾಸವಾದದ ದಿಸೆಯತ್ತ ಸಾಗುತ್ತಿರುವ ಬಗೆಗೆ ತನ್ನಲ್ಲಿ ತಾನೇ ಹೆಮ್ಮೆ ಪಡಲು ಕಾರಣವಾಗಿದೆ. ಇದು ಕೇವಲ ತನ್ನ ಸಲುವಾಗಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಅದು ನಿರೀಶ್ವರವಾದಕ್ಕೆ, ತಾತ್ವಿಕ ಸಂದೇಹಗಳಿಗೆ ಎಡೆಮಾಡಿ ಕೊಡುತ್ತ, ಜ್ಞಾನವನ್ನು ಎಲ್ಲ ರೀತಿಯಿಂದಲೂ ಬಂಧಿಸುತ್ತದೆ.

ಹಾಗೆಂದು ವೇದದಲ್ಲಿ ಮಂಡಿಸಲ್ಪಟ್ಟಿರುವ ಈ ಚಿಂತನವು ಕೇವಲ ವೇದದಲ್ಲಿ ರೂಪಿಸಲ್ಪಟ್ಟಿರುವ ಮನಶ್ಶಾಸ್ತ್ರೀಯ ಹಾಗೂ ಭೌತಿಕ ಬಲಗಳಿಗೆ ಕೇವಲ ವ್ಯಕ್ತೀಕರಣ(Personification)ಗೊಳಿಸುವ ಮೂಲಕ ವಿವರಣೆಗಳನ್ನು ಹೇಳುತ್ತಿಲ್ಲ. ಹೀಗಾಗಿ, ಎಲ್ಲ ದೇವತೆಗಳನ್ನೂ ಗುರುತಿಸುತ್ತಿರುವ ಹಂತವೆಂದರೆ – "ಈ ಎಲ್ಲ ದೇವತೆಗಳೂ ಮನಶ್ಶಾಸ್ತ್ರೀಯ ಮತ್ತು ಭೌತಿಕ ಕ್ರಿಯೆಗಳ ಹಿಂದಡಗಿರುವ ಸತ್ಯ ಸಂಗತಿಗಳಾಗಿ(ತತ್ತ್ವಗಳಾಗಿ)ವೆ. ಏಕೆಂದರೆ, ಯಾವುದೇ ಶಕ್ತಿಯು ತನ್ನಿಂದ ತಾನೇ, ಸ್ವಯಂಜನ್ಯವಾಗಿ ಉದ್ಭವಿಸುವದಿಲ್ಲ. ಇವೆಲ್ಲವೂ ಒಂದು ನಿರ್ದಿಷ್ಟವಾದ – ನಿರ್ದುಷ್ಟವಾದ ಕೆಲವು ಪ್ರಜ್ಞಾ ಕೇಂದ್ರವನ್ನು ಅಥವಾ ಅಂತಹ ಕೇಂದ್ರವೊಂದನ್ನು ಬಯಸುತ್ತದೆ, ಮತ್ತು, ತಮ್ಮ ಪ್ರತಿ ಹೆಜ್ಜೆಯಲ್ಲಿಯೂ ಈ ತೆರನಾದ ವ್ಯವಸ್ಥೆಯನ್ನು ಬಯಸುತ್ತವೆ. ಇಲ್ಲಿ ಒಂದು ಸಂದೇಹ ತಾನೇತಾನಾಗಿ ಉದಿಸುತ್ತದೆ. ವಿಷ್ಣು ಅಥವಾ ಪರಮ ಪುರುಷ ವೇದಕಾಲದಲ್ಲಿ ಹೇಗೆ 'ಉಪೇಂದ್ರ'ನೆಂದು ಕರೆಸಿಕೊಂಡಿದ್ದ? ಇದಕ್ಕೆ ಉತ್ತರವೆಂದರೆ, ವಿಕಾಸವಾದದ ನಿರ್ದಿಷ್ಟ ಹಂತದಲ್ಲಿ ಪರಮಾತಿಪರಮ ಪ್ರಾಮುಖ್ಯವಾಗಿರುವ ಯಾವುದೇ ಶಕ್ತಿಯನ್ನು (Energy) ವಿರಾಟ್–ವಿಷ್ಣುವಿನ ಸ್ವರೂಪದಲ್ಲಿಯೆ, ವಿಶಿಷ್ಟ ಗುಣವಾಗಿಯೇ ಸ್ವೀಕರಿಸಲ್ಪಟ್ಟಿತ್ತು."

ಹೀಗಾಗಿಯೇ 'ಆನಂದವು' ಪರಿಪೂರ್ಣ ವಿಕಸನದಲ್ಲಿ ತುರೀಯ ಸ್ಥಾನದಲ್ಲಿದೆ ಎನ್ನುವದನ್ನು ನಾವೀಗಾಗಲೇ ಕಂಡುಕೊಂಡಿದ್ದೇವೆ. ಆದ್ದರಿಂದ ವಿಷ್ಣುವು

ಆನಂದದ ಸರ್ವೋತ್ಕೃಷ್ಟ (Pre elementary God) ದೇವತೆಯಾಗಿದ್ದು, ಅವನು ಭೌತಿಕ ಪ್ರಪಂಚಕ್ಕೆ ಅವತರಣಗೊಂಡು ಬಂದಾಗ, ಅವನು ಸೂರ್ಯನಲ್ಲಿ ಪರಮೋಚ್ಚ ವಿದ್ಯುತ್ – ಬಲವಾಗಿ, ಅಗ್ನಿಯಲ್ಲಿ ಇದ್ದು ವಿಕಾಸ ವಾದದಲ್ಲಿ ಬಹಿರ್ಮುಖನಾಗುವ ತುರೀಯ–ಪರಮೋಚ್ಚ ವಿದ್ಯುತ್ ಶಕ್ತಿಯಾಗಿದ್ದಾನೆ. ಇದು ಆನಂದದ ಭೌತಿಕ ಸ್ವರೂಪವಾಗಿದ್ದು, ಇದಿಲ್ಲದೇ, ಜಗತ್ತಿನಲ್ಲಿ ಯಾವುದೆ ಕರ್ಮವೂ ಘಟಿಸುವದಿಲ್ಲ. ಇವನು ಕೇವಲ ನ್ಯೂನನಲ್ಲ. ತನ್ನನ್ನು ತಾನೇ ಆಧೀನಗೊಳಿಸಿಕೊಳ್ಳುತ್ತಾನೆ. ಕ್ರಿಯೆಯಲ್ಲಿ ತೊಡಗಿಕೊಳ್ಳಲು ಅಭಿಯೋಗಗೊಳಿಸಿಕೊಳ್ಳುತ್ತಾನೆ. ಹೀಗಾಗಿ ನಿಜವಾಗಿಯೂ ಇವನು ತನ್ನ ಕ್ರಿಯೆಯ ಮೂಲಕವಾಗಿಯೇ ನಿಯಂತ್ರಿಸುತ್ತಾನೆ. ಆದರೆ ವಿಷ್ಣುವಿನ ಸ್ಫುಟೀಕರಣ(Manifestation)ವು ತುರೀಯಾವಸ್ಥೆಯಲ್ಲಿಯ ಸ್ತರವು ಉಪೇಂದ್ರತ್ವವಾಗಿರುವದಿಲ್ಲ. ಹೀಗಾಗಿ ಇದು ಕೆಳ ಸ್ತರದ ಹಂತದಲ್ಲಿ ಘಟಿಸುವ ಒಂದು ವಿಶೇಷ ಪ್ರಕ್ರಿಯೆಯಾಗಿದೆ. ಒಟ್ಟಿನಲ್ಲಿ ಉಪೇಂದ್ರತ್ವವೆಂದರೆ ವಿಷ್ಣುತ್ವವಲ್ಲ. ಆದರೆ ಇದು ಅವನ ಕ್ರಿಯೆಗಳು ಮಾತ್ರ ಆಗಿವೆ.

**ಋಗ್ವೇದದ ಪ್ರಥಮ ಋಕ್ಕಿನ ಭಾಷಾಶಾಸ್ತ್ರೀಯ ಅಧ್ಯಯನ**

ಅಗ್ನಿಯು ತೇಜಸ್ಸಿನ ಒಡೆಯ; ಅವಿಶೇಷತಃ ಅಗ್ನಿಯು ತೇಜವೂ ಆಗಿದ್ದಾನೆ. ಮನಸ್ಸಿನ ಸಹೇತುಕ ತಪಸ್ಸಿನ ಪ್ರತಿನಿಧಿಯೂ ಆಗಿದ್ದಾನೆ. ಆಧುನಿಕ ಮನಶ್ಶಾಸ್ತ್ರದ ಭಾಷಾವ್ಯವಸ್ಥೆಯಲ್ಲಿ ಸಹೇತುಕ ತಪಸ್ಸು ಎಂದರೆ ಕರ್ಮಗಳಲ್ಲಿ ಪ್ರಕಟಗೊಳ್ಳುವ ಕೃತು(Will in Action) ಆಗಿದೆ. ಆದರೆ ಇದು ಕೇವಲ ಇಚ್ಛೆಯಂತೂ ಅಲ್ಲ. ಆದರೆ ಬಯಕೆಯನ್ನು ಜೊತೆಗೆ ಅಪ್ಪಿಕೊಂಡೇ ವೃದ್ಧಿಸುತ್ತಲೇ ರೂಪುಗೊಳ್ಳುತ್ತದೆ. ಹಾಗೆಂದು ಇದು ಕೇವಲ ಆಯ್ಕೆಯೂ ಅಲ್ಲ; ಅಭಿಲಾಷೆ ಅಥವಾ ಉದ್ದೇಶವು ಅಲ್ಲ. ವೇದದ ಮೂಲ ಚಿಂತನದ ಪ್ರಕಟ “ಕೃತುಶಕ್ತಿ” ಅಥವಾ “ಸತ್ಯ ಸಂಕಲ್ಪ”ವು ಶಕ್ತಿಯ ರೂಪವನ್ನು ಹೊಂದಿ ಜ್ಞಾನವಾಗುವಲ್ಲಿ ಅತ್ಯಾವಶ್ಯಕವಾದ ಸಂಗತಿಯಾಗಿದೆ. ಹೀಗಾಗಿ ಅಗ್ನಿಯು ಶುದ್ಧಾಂಗವಾಗಿ ಮನೋಶಕ್ತಿಯಾಗಿದ್ದು, ಇದು ಏಕಾಗ್ರತೆಗೆ ಅತ್ಯಾವಶ್ಯಕವಾದ ಸಂಗತಿಯಾಗಿದೆ. ಹೀಗೆ ನಾವು ವೇದದ ಆಂತರ್ಯವನ್ನು ಸರಿಯಾಗಿ ಗ್ರಹಿಸಿಕೊಂಡಲ್ಲಿ, ಆಗ ಈ ಅಗ್ನಿಯ ಅತ್ಯಪೂರ್ವ ಮಹತ್ವವನ್ನು ಅರಿತು, ಅಗ್ನಿಸೂಕ್ತದ ಮಂತ್ರಗಳ ಅಧ್ಯಯನವನ್ನು ನಡೆಸಲು, ಅರಿತುಕೊಳ್ಳಲು ಮಾರ್ಗದರ್ಶಿಯಾಗುತ್ತದೆ.

**ಅಗ್ನಿ ಶಬ್ದದ ವ್ಯುತ್ಪತ್ತಿ:**

ಅಗ್ನಿ ಶಬ್ದವು 'ಅಗ್' ಎನ್ನುವ ವ್ಯುತ್ಪತ್ತಿ ಸಿದ್ಧ ಕ್ರಿಯಾಪದದಿಂದ ರೂಪುಗೊಂಡಿದ್ದು ಇದಕ್ಕೆ ಸಂಯೋಗಗೊಂಡ 'ನಿ'ಯಿಂದಾಗಿ ಅಗ್ನಿಯಾಗುತ್ತದೆ. ಈ ಅಗ್ ಎನ್ನುವ ಕ್ರಿಯಾಪದವು ಸ್ವತಃ ತದ್ಧಿತ ಪ್ರತ್ಯಯವಾಗಿದ್ದು(Derivative) ಇದರ ಪ್ರಾಚೀನ ರೂಪವು "ಅ" ದಿಂದ ರೂಪಿತಗೊಂಡಿದೆ. "ಅ" ಎಂದರೆ 'ಇರಬೇಕಾದ'. 'ಆಗಬೇಕಾದ (To be)', ಎಂದೇ ಬಹುತೇಕ ಭಾಷೆಗಳಲ್ಲಿ ಈಗಲೂ ಪ್ರಚಲಿತದಲ್ಲಿದೆ. ಇನ್ನು 'ಗ್' ಧ್ವನಿಯು ಶಕ್ತಿಯ ಕುರಿತು ವಿಚಾರವನ್ನು ತಿಳಿಸುತ್ತದೆ. ಆದ್ದರಿಂದ 'ಅಗ್' ಎಂದರೆ ಶಕ್ತಿಯ ಹೊರಹೊಮ್ಮುವಿಕೆ, ಶಕ್ತಿಯ ಅಸ್ತಿತ್ವವೆಂದು, ಅದರಲ್ಲೂ ಪ್ರಾಚೀನ ಅವಧಿಯಲ್ಲಿ 'ಅತಿಶೋಭಾಕಾಂತಿಯ' ಅಥವಾ ಉಜ್ವಲೋಜ್ವಲ, ಸಾಮರ್ಥ್ಯಶಾಲಿ, ಅಪ್ರತಿಮ ಮತ್ತು ಅಗ್ನಿ ಎಂದರೆ ಮಹಾಬಲ ಎನ್ನುವ ಅಭಿಪ್ರಾಯವಿತ್ತು. ಜೊತೆಗೆ ಪರಮೋಚ್ಚ, ಪ್ರಜ್ವಲಪೂರ್ಣ, ಬಲಶಾಲಿ, ತೇಜೋಮಯ ಎನ್ನುವ ರೂಪಾರ್ಥಗಳಿವೆ. ಇದೇ ಅರ್ಥದ ಕ್ರಿಯಾ–ಮೂಲಧಾತುಗಳನ್ನು ಗ್ರೀಕ ಭಾಷೆಯಲ್ಲಿಯೂ ಸಹಿತ ಕಾಣುತ್ತೇವೆ. ಗ್ರೀಕನಲ್ಲಿ 'ಅಗಾಥೋಸ್'(Agathos), ಎಂದರೆ ಶುಭ ಮತ್ತೆ ಮೂಲ ಅರ್ಥದಲ್ಲಿ ಬಲಶಾಲಿ ಎಂತಲೇ ಬಳಕೆಯಲ್ಲಿತ್ತು. ಜೊತೆಗೆ ಅದಕ್ಕೆ ಪವಿತ್ರ, ವೀರ ಎನ್ನುವ ಅರ್ಥಗಳೂ ಇವೆ. ಅಗನ್–ಎಂದರೆ ಬಾಹುಳ್ಯವುಳ್ಳವನು; ಅಗೊ(ago) ಎಂದರೆ ಮುನ್ನಡೆಸು; ಲ್ಯಾಟಿನ್ ಭಾಷೆಯಲ್ಲಿಯೂ ಸಹಿತ ಅಗ್ನಿಗೆ ಅಗೋ(ago), ಅಗೇಲಾಸ್ ಎಂದು ಗ್ರೀಕಭಾಷೆಯಲ್ಲಿ ಅಗ್ನಿಯ ಹೆಸರು. ಇದಕ್ಕೆ ಜಾಜ್ವಲ್ಯಮಾನ ಎನ್ನುವ ಅರ್ಥದ ಬೇರೆಬೇರೆ ಶಬ್ದಗಳಿವೆ. ಅಗಿ(ಜಿ)ಸ್, ಅಗಾಮೆಮ್ನಾನ್ ಎನ್ನುವ ಶಬ್ದಗಳಿವೆ. ಸಂಸ್ಕೃತದಲ್ಲಿ ಅಗ್ರ, ಅಗಸ್ತೀ ಎನ್ನುವ ಸಮಾನಾರ್ಥದ ಶಬ್ದಗಳಿವೆ. ಇದು ಕ್ರಿಯಾಪದದ ಮೂಲಧಾತುವಿನೊಡಗೂಡಿ ಅಂತರ್–ಜೋಡಣೆಯ ಬದಲಾವಣೆಯ ಮೂಲಕ ಅಜ್ ಧಾತುವಿನೊಡನೆ ರೂಪಗೊಳ್ಳುತ್ತದೆ.

ಇದಕ್ಕೆ ಸಮಸ್ಪಂದಿ ಎನ್ನುವಂತೆಯೇ ಗ್ರೀಕ ಭಾಷೆಯ ಅಗೋ(ago) ವ್ಯುತ್ಪತ್ತಿಗೊಂಡಿದೆ. ಈ ಎಲ್ಲ ಶಬ್ದಗಳೂ ಮತ್ತೆ ಈ ಶಬ್ದದ ವಿಶೇಷ ಗುಣವಾದ "ಅಪ್ಪಿಕೊಳ್ಳುವ" ಅಥವಾ ಆಲಿಂಗಿಸುವ ಸ್ವಭಾವದಿಂದಾಗಿ ಹಾಗೂ ಗುಣವಿಶೇಷತೆಯಿಂದಾಗಿ, ಇದಕ್ಕೆ "ಪ್ರೇಮ"ವೆನ್ನುವ ನಾಮಕರಣವೂ ಉಂಟು. ಈ ಪ್ರೇಮದ ಅರ್ಥದಲ್ಲಿ ಅಗಾಪೆ(agape) ಎನ್ನುವ ಗ್ರೀಕ್ ಶಬ್ದವಿದೆ. ಆದರೆ ಈ ಎಲ್ಲ ವಿಷಯಗಳಲ್ಲಿ ಪ್ರಾಚೀನ ಸಂಸ್ಕೃತವು ಮಾತ್ರ "ಅಜ್ಗ" ಎನ್ನುವ

ರೂಪವನ್ನು ಸ್ವೀಕರಿಸಿದೆ. ಎರಡು ಕ್ರಿಯಾಪದಗಳು ಸಂಯೋಗಗೊಳ್ಳುವಲ್ಲಿ, ಅಗ್ ಮತ್ತು ಅಜ್ಗ್ ಸಂಯೋಗಗೊಂಡು ಅಜ್ಗತಿ – ಎಂದರೆ ಬೆಂಕಿ – ಎನ್ನುವ ಅರ್ಥ ಕೊಡುವ ಶಬ್ದಗಳು ಇವೆ. ಹೀಗಾಗಿಯೇ ಅಂಗೀರಸ ಎನ್ನುವದೂ ಸಹಿತ ಅಗ್ನಿಯ ಹೆಸರುಗಳಲ್ಲಿ ಒಂದಾಗಿದೆ. ಅಂಗಾರ ಎಂದರೆ ನಿಗಿಗುಡುವ ಕೆಂಡ (Live-coal) ಎಂದೇ ಅರ್ಥವಿದೆ.

ಸಂಸ್ಕೃತದ ಪ್ರಕೃತಿಜನ್ಯವಾಗಿರುವ ರೀತಿಯಂತೆ ಪ್ರತಿ ಮೂಲಧಾತುವಿಗೂ (ಕ್ರಿಯಾಪದಕ್ಕೂ) ಎರಡು ರೂಪಗಳಿರುತ್ತವೆ. ಇಲ್ಲಿ ಈಳೆ ಎನ್ನುವದು ಈಳ್ ಮತ್ತು ಈಲ್ ಆಗಿದೆ. ಇವುಗಳ ಮೂಲಧಾತು ಇಲ್ ಆಗಿದೆ. ಇಲ್ ಎಂದರೆ ಪ್ರೇಮಿಸು, ಅಪ್ಪುಗೆ ಕೊಡು, ಪ್ರಶಂಸಿಸು ಮತ್ತು ಆರಾಧಿಸು ಎನ್ನುವ ಅರ್ಥಗಳಿವೆ. ಈ cerebralಳ ಅಕ್ಷರವನ್ನು ಗಮನಿಸಿದರೆ, ಇದು ತೀರ ತೀರ ಇತ್ತೀಚಿನ ರೂಪವಾಗಿದ್ದು, ಇದು ದ್ವಾಪರ ಯುಗದಲ್ಲಿ ಪ್ರಚಲಿತವಿದ್ದ, ಪ್ರಭಾವಶಾಲೀ ಸಮುದಾಯದ ಸಂವಹನ ಭಾಷಾ ವ್ಯವಸ್ಥೆಯಲ್ಲಿ ಇದ್ದದ್ದರಿಂದ, ಅದೂ ಅವರ ಉಚ್ಚಾರ ವ್ಯವಸ್ಥೆಯ ವಿಶಿಷ್ಟತೆಯಲ್ಲಿ ರೂಪುಗೊಂಡಿದ್ದರಿಂದ, ಭಾಷಾ ವಿಶೇಷತೆಯಲ್ಲಿ ಅತಿ ಪ್ರಾಮುಖ್ಯವಾದ ಸಂಗತಿಯಾಗಿದೆ. ಆ ಸಮುದಾಯದಿಂದ ರಚಿತಗೊಂಡಿದ್ದರೂ, ಕ್ರಮೇಣ ಅದರ ಬದಲಾವಣೆಯನ್ನು ನಿಯಂತ್ರಿಸಿ, ತನ್ನ ಹಿಡಿತದಲ್ಲಿಯೇ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಹೀಗಾಗಿ ಇದು ಮತ್ತೆ ತನ್ನ ಮೂಲರೂಪವಾದ ಇಲ್ ಹಂತಕ್ಕೆ ಬರದೇ, ಮತ್ತೂ ಮೃದುವಾಗಿ ಉಚ್ಚರಿಸಲ್ಪಡುವ 'ಡ' ಹಂತಕ್ಕೆ ಪರಿವರ್ತನೆ ಹೊಂದಿತು. ಈ 'ಡ' ಮತ್ತು 'ಳ' ಇವು ಪರಿವರ್ತನೀಯ ಗುಣವನ್ನು ಹೊಂದಿವೆ. ಹೀಗಾಗಿ ಋಕ್ಕಿನಲ್ಲಿ ಈಡೆ ಎಂತಲೂ ಹಾಗೂ ಈಳೆ ಎಂತಲೂ ಉಚ್ಚಾರಣಾ ಪದ್ಧತಿ ಇದೆ. ಇಲ್ಲಿ ಯಾವುದೇ ಅಕ್ಷರ ಬಳಸಿದರೂ ಸಹಿತ ಅದರೆ ಅರ್ಥ ಮಾತ್ರ ಒಂದೇ ಆಗಿದೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ – ಇಲ್ಲಿ ಯಾವುದೆ ರೀತಿಯಲ್ಲಿ ಶ್ರೇಷ್ಠವಾದುದನ್ನು ಪ್ರೀತಿಸಲ್ಪಡುವ, ಪ್ರಾರ್ಥಿಸಲ್ಪಡುವ ಮತ್ತು ಆರಾಧಿಸಲ್ಪಡುವ ಹಂತದಲ್ಲಿರುವ ಸಂಗತಿ ಎನ್ನುವಂತಿಲ್ಲ. ಹೀಗಾಗಿ ಇಲ್ಲಿರುವ 'ಈಳೆ' ಶಬ್ದದ ಅರ್ಥವನ್ನು 'ಹೊಗಳು' ಅಥವಾ 'ಉಪಾಸನೆ ಮಾಡು' ಎಂದಿರದೇ, "ಆಕಾಂಕ್ಷೆ(Desire)", "ಉತ್ಕಂಠಿತನಾಗು (Yearn for)", ಎಂದಾಗುತ್ತದೆ.

(ಸಶೇಷ)

## ಶ್ರೀ ಅರವಿಂದರ ಸಂಸ್ಕೃತ ಕಾವ್ಯ
## "ಭವಾನೀ ಭಾರತೀ"
### (ಪದ್ಯಾನುವಾದ–4)

– ಅನುವಾದ: ಪುಟ್ಟು ಕುಲಕರ್ಣಿ

ದಟ್ಟೈಸಿ ಅಮರಿ ಆವರಿಸಿಕೊಂಡ ತಿಮಿರದಲಿ ಅಂಧವಾಗಿ
ಈ ಆರ್ಯಭರತಖಂಡವಿದು ಈಗ ಅಖಂಡದಲು ಖತಿಗೆ ಭಾಗಿ
ಅರಿಕುಲದ ಜಾಲದುರಿಯುರಿಗೆ ಸಿಲುಕಿ ಕತ್ತಲೆಯಲೀಗ ಅಡಗಿ
ಭರತಮಾತೆಯಾಕ್ರಂದವಿದೋ ಉತ್ಕಂಠ ಭರತವಾಗಿ ॥33॥

ಘನನಿಶೆಯಲೀಗ ದಿಟ್ಟಿಸಿದೆ ಅರಸಿ ಎನ್ನನುಜ ಬಳಗವನ್ನು
ದುಃಖಾರ್ತರಾಗಿ ವಿಚ್ಛಿದ್ರರಾದ ಅವರದೇ ಛಾಯೆಯನ್ನು,
ಬರಿ ಎಲುಬು–ಬುರುಡೆಗಳ ಸರಣಿ ಕಂಡೆ ನಾನೀಗ ಬುವಿಯ ತಲದಿ
ಶವರಾಶಿಯೊಳಗೆ ಸೋತಿರುವ ನೆಲವು, ಕರುಣಿಸೌ ಭೂಮ ಬಲದಿ ॥34॥

ಅಲ್ಲಿದೋ ಕಂಡೆ ಅಕ್ಕಸದ ಬಲದ ರಕ್ಕಸನ ಪೀಠವನ್ನು
ವಜ್ರಮುಷ್ಠಿಯಲಿ ಮಹತಿಗಳಿಸಿರುವ ಆ ಮುಕುಟಧಾರಿಯನ್ನು
ಮಾತೆಯಶ್ರುಗಳ ಜೊತೆಗೆ ರಕ್ತವನು ಹೀರುತಲಿ ಕೊಬ್ಬಿನಲ್ಲಿ
ತನ್ನದೇ ಬಳಗ ಸಲುಹಲೆನೆ ಸತತ ಮೆರೆಯುತಿಹ ದರ್ಪದಲ್ಲಿ ॥35॥

ಧವಲಹಿಮಗಿರಿಯ ಅದುಮಿ ಪದತಲದಿ ಅದನೀಗ ದೀನಗೊಳಿಸಿ
ಸತ್ವವಳಿಸಲೆನೆ ಆಂಧ್ರ–ಪೌಂಡ್ರರನು ಪೀಡಿಸಲು ಘಾಸಿಗೊಳಿಸಿ
ಝಳಪಿಸುತ ಸುಳಿವ ಆ ಹರಿತ–ಖಡ್ಗ ಉಗ್ರಾತಿ ಉಗ್ರದಲ್ಲಿ
ಚೀನ ಜೊತೆ ಪಾರಸಿಯ ಖಂಡದೆಡೆ ಬೀಸಿ ಹಿಂಸಿಸಲು ತುಡಿತದಲ್ಲಿ ॥36॥

ಸುವಿಶಾಲ ವ್ಯಾಪ್ತ ಬಲದಲ್ಲಿ ಗರ್ವ–ಪರ್ವದಲಿ ಸರ್ವ ಜಗವ
ಕುಹಕದಾತ್ಮಕ್ಕೆ ಧರ್ಮಲೇಪನದಿ ಪಾಪಿಷ್ಠ ಬುದ್ಧಿಗೊಳುವ,
ಇದ ಕಂಡು ಕನಲಿ, ಭೂ–ಚಿತ್ತದಗ್ನಿಕುಂಡವದು ಜ್ವಲನಗೊಂಡು
ಕ್ರೋಧದಲಿ ಹೊಮ್ಮಿ ಜ್ವಾಲೆಯಲಿ ಚಿಮ್ಮಿ ಶಾಶ್ವತದ ಭಾವವಿಂದು ॥37॥

ಕುಲಗುಣವ ಮರೆತು ಮಲಗಿರುವ ಜಡದ ಈ ಸನಾತನರ ಗುಣವ
ಬಡಿದು ಎಚ್ಚರಿಸೆ ಅಬ್ಬರಿಸಿ ಭೂಮೆ ಈ ಭೀಮ–ಗರ್ಜನೆಯ ಭಾವ
ಘೋರ–ಕ್ರೂರದಲಿ ಈ ಕರಾಲೆ ತಾ ಆಗಮಿಸಿ ಘೋಷದುಂಬಿ
ನನ್ನ ಬಳಿಗೀಗ ಸುಳಿದು ಬಂದಿಹಳು ಕರಿಕಾಳಿ ವೇಷದುಂಬಿ ॥38॥

ಭೀಮ–ಭೀಕರದ ಹೂಂಕಾರ ಮತ್ತೆ ಘೂತ್ಕಾರ ಧ್ವನಿಯು ತುಂಬಿ
ಕಂಪಿಸಿತು ಭೂಮಿ, ಮುನ್ನೀರು ಭುಗಿಲು, ಅಬ್ಬರಿಸಿ ಗಗನ ದೊಂಬಿ
ರೋಷ ಉಕ್ಕಿರುವ ಇವಳ ಈಕ್ಷಣೆಯ ಭೀಮದೃಷ್ಟಿಯಿಂದೀಗ
ಕುದಿಕುದಿವ ಅಗ್ನಿವೃಷ್ಟಿಯಲಿ ತಪ್ತ ಬ್ರಹ್ಮಾಂಡ ಬೆಂದುದೀಗ ॥39॥

ಉನ್ಮಾದ ತುಂಬೆ ಮೂಲೋಕಗಳಿಗೆ ಈ ಕಾಳಿ ಘೋರ ನಾದ
ಆಹುತಿಗೆ ಸರ್ವ ಅರ್ಪಿಸಲು ಪೂರ್ಣ ಆಹ್ವಾನವಿಡುತ ಪಾದ,
ಬಡಬಾಗ್ನಿ ಭುಗಿಲು, ಶಿಖರವದು ಸಿಡಿದು ಜ್ವಾಲೆಯದು ಮುಗಿಲಿನುದ್ದ
ಕಂಠದಲಿ ಹೊಮ್ಮಿ ಮುನ್ನುಗ್ಗಿತೀಗ ಆ ದೇವಿ ದಂಡು ಬದ್ಧ ॥40॥

---

35. ಅಕ್ಕಸದ ಬಲದ ರಕ್ಕಸನ ಪೀಠ; ಆಗ ವೈಸರಾಯ ಆಗಿದ್ದ ಲಾರ್ಡ ಕರ್ಝನ್. ಮಾತಿನಲ್ಲಿ ತುಂಬ ನಿಪುಣತೆಯಿಂದ, ಚಳವಳಿಯನ್ನೂ ಲೆಕ್ಕಿಸದೇ ವಂಗ–ಭಂಗ ಮಾಡಿದ ಅವಧಿಯಲ್ಲಿ ಜನ ಸಮುದಾಯದ ಮನಸ್ಸಿನಲ್ಲಿ ಇದ್ದ ಆಕ್ರೋಷವನ್ನೆಲ್ಲ ಇಲ್ಲಿ ಕಾಣಬಹುದು.

(ಸಶೇಷ)

## ಶ್ರೀ ಅರವಿಂದರ

# ಗೀತಾ ಪ್ರಬಂಧಗಳು

**– ಅನುವಾದ: ಜಾನ್ವಿ**

**1**

**ಪ್ರಾಸ್ತಾವಿಕ;**

ವೇದ, ಉಪನಿಷತ್ತುಗಳಂತೆ ಭಗವದ್–ಗೀತೆಯೂ ನಮ್ಮ ಪ್ರಮುಖ ಆಧ್ಯಾತ್ಮಿಕ ಹಾಗೂ ಧರ್ಮಗಳಲ್ಲಿ ಒಂದು. ಹಾಗೆ ನೋಡಿದರೆ ಇದು ಮಹಾಭಾರತದಲ್ಲಿ ಒಂದು ಸಣ್ಣ ಭಾಗ ಮಾತ್ರ; ಆದರೆ ಅದು ಪಡೆದಿರುವ ಮಹತ್ವ, ಜನಪ್ರಿಯತೆ, ಖ್ಯಾತಿ ಅಪಾರ. ಸುಮಾರು 5000 ವರ್ಷಗಳ ಪೂರ್ವದಲ್ಲಿ ಭಾರತವನ್ನು ಕುರುಕುಲವು ಆಳುತ್ತಿತ್ತು. ಹಸ್ತಿನಾಪುರ (ಈಗಿನ ದೆಹಲಿ) ಅದರ ರಾಜಧಾನಿ. ಅದರ ದೊರೆ ಧೃತರಾಷ್ಟ್ರ, ಅವನು ಜನ್ಮತಃ ಅಂಧ; ತನ್ನ ವಯಸ್ಸಾದ ಮೇಲೆ ತನ್ನ ಮಗನಿಗಿಂತ ಯೋಗ್ಯನಾದ, ತನ್ನ ತಮ್ಮನ ಮಗ ಯುಧಿಷ್ಠಿರನಿಗೆ ರಾಜ್ಯಭಾರ ವಹಿಸಿಕೊಡುವ ಮನಸ್ಸಿತ್ತು. ಆದರೆ ಅವನ ಮಗ ದುರ್ಯೋಧನ ದುಷ್ಟ; ಹಠದಿಂದ, ಮೋಸದಿಂದ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡ. ಯುಧಿಷ್ಠಿರನನ್ನು ತಮ್ಮಂದಿರ ಸಮೇತ ಕಾಡಿಗಟ್ಟಿದ.

ಶ್ರೀಕೃಷ್ಣ ವೃಷ್ಣ ಕುಲದ ಮುಖಂಡ. ಆ ಕಾಲದಲ್ಲಾಗಲೇ ಅವನನ್ನು ಭಗವಂತನ ಅವತಾರ ಎಂದು ಜನ ಮನ್ನಿಸುತ್ತಿದ್ದರು. ಚಿಕ್ಕಂದಿನಿಂದಲೇ ಅವನು ಅನೇಕ ಪವಾಡಗಳನ್ನು, ಸಾಹಸಗಳನ್ನು ಮಾಡಿ ಖ್ಯಾತನಾಗಿದ್ದ. ಅವನು ಯುಧಿಷ್ಠರನ ತಾಯಿ, ಕುಂತಿದೇವಿಯ ಅಣ್ಣನ ಮಗ; ಅವನು ಪಾಂಡವರ, ಯುಧಿಷ್ಠರನ ಪರವಾಗಿ ಒತ್ತಾಸೆಯಾಗಿ ನಿಂತುಕೊಂಡು. ಅವರಿಗೆ ರಾಜ್ಯಭಾರ ಸಿಕ್ಕುವಂತೆ ಮಾಡಲು ಪ್ರಯತ್ನಿಸಿದ. ಪಾಂಡವರ ಮತ್ತು ಕೌರವರ ನಡುವೆ ಸಂಧಾನ ವಿಫಲವಾಯಿತು, ಕೃಷ್ಣನೇ ಸಂಧಾನದ ಭಾರ ವಹಿಸಿದ್ದರೂ ಯಶಸ್ವಿಯಾಗಲಿಲ್ಲ. ಮಹಾಯುದ್ಧ ಆರಂಭವಾಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ಸೇರಿದ ಬಹು ದೊಡ್ಡ ಯುದ್ಧ ಅದು. ಧೃತರಾಷ್ಟ್ರನ ಸಾರಥಿಯಾದ ಸಂಜಯನು ದಿನಾಲೂ ಯುದ್ಧದ ವರದಿಯನ್ನು ಅರಸನಿಗೆ ತಿಳಿಸುತ್ತಿದ್ದ. ಆ ವಿವರಗಳು ದೊರೆತದ್ದು ಸಂಜಯನ ಮೂಲಕ. ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಗೀತೆಯ ಉಪದೇಶ ಕೂಡ ನಮಗೆ ಈ ಸಂಜಯನ ಮೂಲಕವೇ ದೊರೆಯಿತು.

ಹೌದು, ಶ್ರೀಕೃಷ್ಣನೇನು ಐತಿಹಾಸಿಕ ವ್ಯಕ್ತಿಯೇ? ನಿಜವಾಗಿ ಅವನಿದ್ದನೇ? ಎಂದು ಅನೇಕ ಪ್ರಶ್ನೆ ಮಾಡುತ್ತಾರೆ. ನಿಸ್ಸಂದೇಹವಾಗಿ ಕೃಷ್ಣನೆಂಬ ವ್ಯಕ್ತಿ ಇದ್ದು, ಅವನ ನೇತೃತ್ವದಲ್ಲಿಯೇ ಮಹಾಭಾರತದ ಮಹಾಯುದ್ಧ ನಡೆಯಿತು. ಈ ವಿಷಯದ ಬಗ್ಗೆ ಸಾಕಷ್ಟು ಪುರಾವೆಗಳು, ಸಾಕ್ಷ್ಯಾಧಾರಗಳು ಲಭ್ಯವಿವೆ. ಶ್ರೀಕಾಂತ ತಳಗೇರಿ, ಶ್ರೀ ನಿಲೇಶ ಓಕ, ಜಿ.ವಿ. ಕಾವೀಶ್ವರ, ಡಾ.ಪಿ. ವಿವರ್ತಕ ಹಾಗೂ ನಮ್ಮವರೇ ಆದ ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿ ಮತ್ತು ಡಾ॥ ಕೆ.ಎಸ್. ನಾರಾಯಣಾಚಾರ್ಯ ಇವರೆಲ್ಲ ಮಹಾಭಾರತದ ಪ್ರತಿ ಘಟನೆಯ ಕಾಲ ನಿರ್ಣಯ ಮಾಡಿದ್ದಾರೆ. ಅವರ ಗ್ರಂಥಗಳನ್ನು ನೋಡಬಹುದು.

ಆದರೆ ನಮ್ಮ ಅಧ್ಯಯನವು ಈ ವಿಷಯದತ್ತ ಗಮನ ಹರಿಸುವುದಿಲ್ಲ. ನಮಗೆ ಬೇಕಾಗಿರುವುದು ಕೃಷ್ಣನು ಬೋಧಿಸಿದ ಭಗವದ್‌ಗೀತೆ ಮತ್ತು ಅದರ ಆಧ್ಯಾತ್ಮಿಕ ಚಿಂತನೆ. ಭಗವದ್‌ಗೀತೆಯ ಮೇಲೆ ಭಾರತದ ಎಲ್ಲ ಆಚಾರ್ಯರೂ, ಮರ್ಷಿಗಳೂ, ಆಧ್ಯಾತ್ಮ ಚಿಂತಕರು, ಅಷ್ಟೇ ಏಕೆ ಗಾಂಧಿ, ಟಿಳಕರಂಥ ಸ್ವಾತಂತ್ರ್ಯ ಹೋರಾಟಗಾರರೂ ಸಹ ಭಾಷ್ಯ ಬರೆದಿದ್ದಾರೆ. ಪ್ರಸುತ್ತ ನಾವು ಶ್ರೀ ಅರವಿಂದರು ಬರೆದ ಗೀತೆಯ ಮೇಲಿನ ಪ್ರಬಂಧಗಳನ್ನು ಅಧ್ಯಯನ ಮಾಡುವವರಿದ್ದೇವೆ. ಗೀತೆಯಲ್ಲಿ ಸಾಂಖ್ಯ, ನ್ಯಾಯ, ಯೋಗ, ಜ್ಞಾನ, ಭಕ್ತಿ ಹೀಗೆ ಎಲ್ಲ ದರ್ಶನಗಳ, ಶಾಸ್ತ್ರಗಳ ಸಮನ್ವಯವಿದ್ದು ಶ್ರೀ ಅರವಿಂದರ ಯೋಗ ಸಮನ್ವಯಕ್ಕೆ ತುಸು ಆಧಾರವನ್ನು ಒದಗಿಸುತ್ತದೆ. "ಆದರೆ ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ, ಭಗವದ್‌ಗೀತೆಯು ಶ್ರೀ ಅರವಿಂದರ ಸಮಗ್ರ ಯೋಗದ ಸಂದೇಶವನ್ನು ಸಮಗ್ರವಾಗಿ, ಸಂಪೂರ್ಣವಾಗಿ ಬಿತ್ತರಿಸುವುದಿಲ್ಲ. ಏಕೆಂದರೆ ಗೀತೆಯ ಮೋಕ್ಷವನ್ನು ಪರಮ ಗುರಿಯಾಗಿ ಪ್ರತಿಪಾದಿಸುತ್ತದೆ; ಅದು ಆಧ್ಯಾತ್ಮಿಕ ವಿಕಾಸದ ಪರಿಕಲ್ಪನೆಯನ್ನು, ಪ್ರಜ್ಞೆಯನ್ನು ಮಾನವನ ಜೀವನದಲ್ಲಿ ಇಳಿಸಿ ತಂದು, ಮಾನವನ ಜೀವನವನ್ನು ದಿವ್ಯ ಜೀವನವನ್ನಾಗಿ ಪರಿವರ್ತಿಸುವ ಧ್ಯೇಯವನ್ನು ಹೊಂದಿಲ್ಲ." (ಪಪೂ) ಆದ್ದರಿಂದ ಶ್ರೀ ಅರವಿಂದರ ಗೀತಾ ಪ್ರಬಂಧಗಳನ್ನು ತುಸು ಹೊಸ ದೃಷ್ಟಿ ಕೋನದಿಂದ, ಪೂರ್ವಗ್ರಹವನ್ನು ಬಿಟ್ಟು ಅಧ್ಯಯನ ಮಾಡುವುದು ಅವಶ್ಯವಿದೆ.

ಗೀತಾ ಪ್ರಬಂಧಗಳ ಮೊದಲ ಭಾಗವು ಆರ್ಯಪತ್ರಿಕೆಯಲ್ಲಿ ಆಗಸ್ಟ 1916 ಜುಲೈ 1978ರ ವರೆಗೆ ಪ್ರಕಟವಾಯಿತು; ಆನಂತರ ಅದರ ಎರಡನೆಯ ಭಾಗವು ಆಗಸ್ಟ್ 1918 ರಿಂದ ಜುಲೈ 1920ರ ವರೆಗೆ ಮುಂದುವರೆಯಿತು. 1928ರಲ್ಲಿ

ಶ್ರೀ ಅರವಿಂದರು ಎರಡು ಭಾಗಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ ಒಂದೇ ಗ್ರಂಥವಾಗಿ ಪ್ರಕಟಿಸಿದರು.

## ಮೊದಲನೆಯ ಭಾಗ

### ಅಧ್ಯಾಯ 1, ಗೀತೆಯಿಂದ ನಾವು ಆಶಿಸುವುದೇನು?

ಈ ಜಗತ್ತಿನಲ್ಲಿ ಧರ್ಮ ಗ್ರಂಥಗಳಿಗೇನೂ ಕೊರತೆ ಇಲ್ಲ, ಬೇಕಾದಷ್ಟಿವೆ. ಕೆಲವೊಂದು ಪೂರ್ಣ ಸಾಕ್ಷಾತ್ಕಾರದಿಂದ, ಕೆಲವೊಂದು ಅರೆಬರೆ ಸಾಕ್ಷಾತ್ಕಾರದಿಂದ, ನಿರ್ದಿಷ್ಟ ಧರ್ಮದಿಂದ ತತ್ವದಿಂದ, ಮತ, ಪಂಥ, ಜಾತಿ ಹೀಗೆ ಪ್ರೇರಿತವಾದ ಅನೇಕ ಗ್ರಂಥಗಳಿವೆ. ಗಂಟುಬಿದ್ದು, ತಮ್ಮದೊಂದೇ ಶ್ರೇಷ್ಠ ಗ್ರಂಥ, ಭಗವಂತನ ವಾಣಿ ಅಂದರೆ ಅದೊಂದೇ, ಉಳಿದವುಗಳೆಲ್ಲ ತಿರಸ್ಕಾರಯೋಗ್ಯ, ಅಪರಿಪೂರ್ಣ ಅಂತಃಪ್ರೇರಣೆಯಿಂದ ರಹಿತವಾದವುಗಳು, ಕೇವಲ ಬೌದ್ಧಿಕ, ಕೇವಲ ತಾರ್ಕಿಕ, ಅರೆಬರೆ ಸತ್ಯದಿಂದ ಕೂಡಿದವುಗಳು, ಅವುಗಳಲ್ಲಿ ಅರೆಬರೆ ಸತ್ಯ ಇದೆ, ಎಂದು ಹೇಳಿ ನಿರಾಕರಿಸಿಬಿಡುವುದುಂಟು. ಅಷ್ಟೇ ಏಕೆ, ಭೌತಿಕ ವಿಜ್ಞಾನದ ಸಂಶೋಧನೆಗಳನ್ನು ಕೂಡ ಒಂದು ಶಾಸ್ತ್ರವನ್ನಾಗಿ ರೂಪಿಸಿ, ಅದರ ಹೆಸರಲ್ಲಿ ಧರ್ಮ, ಆಧ್ಯಾತ್ಮ ಎಲ್ಲವನ್ನೂ ಅವಿದ್ಯೆ, ಅಜ್ಞಾನ, ಮೂಢನಂಬಿಕೆ ಎಂದು ತಿರಸ್ಕರಿಸಿದ್ದುಂಟು. ಇಂಥ ವಾದಕ್ಕೆ ಎಷ್ಟೋ ಜನ ಬುದ್ಧಿವಂತರೂ ಸಹ ಬಲಿಬಿದ್ದಿರುವುದುಂಟು. ಅದನ್ನು ಬೌದ್ಧಿಕ ಅಹಂ, ಬೌದ್ಧಿಕ ಗರ್ವ ಹೀಗೆ ಏನಾದರೂ ಕರೆಯಬಹುದು, ಹಾಗೆ ಅನೇಕ ಜನ ಬುದ್ಧಿವಂತರು, ವಿದ್ವಾಂಸರು ಜಾರಿ ತಪ್ಪಿರುವುದುಂಟು. ಆದರೆ ಇತ್ತೀಚೆಗೆ, ಜನರು ತುಸು ಉದಾತ್ತರಾಗಿದ್ದಾರೆ, ವಿಚಾರವಂತರಾಗಿದ್ದಾರೆ; ಭಗವಂತನ ಸತ್ಯ ಎಂಬ ಹೆಸರಲ್ಲಿ ನಾವು ನೆರೆಯವರನ್ನು ಹಿಂಸಿಸುವ, ಕೊಲ್ಲುವ ಮಟ್ಟಕ್ಕೆ ಹೋಗುವುದಿಲ್ಲ; ಅವರು ಬೇರೆ ವಿಚಾರ ಮಾಡುತ್ತಿರಬಹುದು, ಬೇರೆ ರೀತಿಯ ಶಿಕ್ಷಣ ಪಡೆದಿರಬಹುದು, ಅವರ ತರಬೇತಿ ಬೇರೆ ವಿಧವಾಗಿ ಆಗಿರಬಹುದು, ಅವರ ಸ್ವಭಾವ, ಅವರ ಧರ್ಮ ಬೇರೆ ಆಗಿರಬಹುದು; ನಮ್ಮಿಂದ ಭಿನ್ನರಾಗಿದ್ದಾರೆ ಎಂಬ ನೆಪದಿಂದ ನಾವು ಅವರನ್ನು ದ್ವೇಷಿಸುವ ಹಂತಕ್ಕೆ ಹೋಗುತ್ತಿಲ್ಲ. ಅಷ್ಟೇ ಏಕೆ, ಸತ್ಯವೆಂಬುದು ಸರ್ವತ್ರ ಇದೆ, ಅದು ಕೇವಲ ನಮ್ಮ ಸ್ವತ್ತಲ್ಲ; ಬೇರೆ ಬೇರೆ ಧರ್ಮಗಳಲ್ಲಿ, ತತ್ವಗಳಲ್ಲಿ ಕೂಡ ಸತ್ಯ ಇದ್ದಿರಬೇಕು, ನಾವು ಒಮ್ಮೆಲೇ ಅವನ್ನೆಲ್ಲ ತಿರಸ್ಕರಿಸಿ ಬಿಡಬಾರದು ಎನ್ನುವ ಹಂತಕ್ಕೆ ಬಂದಿದ್ದೇವೆ. ಆದರೂ ನಮ್ಮ ಧರ್ಮ ಅಥವಾ ಪಂಥವು ಸಂಪೂರ್ಣ

ಹಾಗೂ ಶ್ರೇಷ್ಠ ಜ್ಞಾನವನ್ನು ನೀಡುತ್ತದೆ. ಉಳಿದ ಧರ್ಮಗಳು ಅರ್ಧಮರ್ಧ ಗ್ರಹಿಸಿದ ಸತ್ಯವನ್ನು, ನಮ್ಮ ಧರ್ಮ ಅಥವಾ ತತ್ವಜ್ಞಾನವು ಸಂಪೂರ್ಣವಾಗಿ ಗ್ರಹಿಸಿದೆ, ಚೆನ್ನಾಗಿ ವಿಕಾಸ ಹೊಂದಿದ ಬುದ್ಧಿ ಮಾತ್ರ ಇದನ್ನು ಅರ್ಥ ಮಾಡಿಕೊಳ್ಳಬಲ್ಲದು ಎಂದು ಹೇಳಲೂ ಮರೆಯುವುದಿಲ್ಲ. ಹಾಗೆಯೇ ಎಲ್ಲರೂ ನಮ್ಮ ಈ ವಿಚಾರವನ್ನು ತತ್ವವನ್ನು ಒಪ್ಪಿ, ಅನುಸರಿಸಿದರೆ ಮನುಕುಲವೇ ಉದ್ಧಾರವಾಗುವುದೆಂಬ ನಂಬಿಕೆ ಹೊತ್ತಿದ್ದೇವೆ ಹಾಗೂ ಆ ರೀತಿ ಹೇಳಲೂ ಹಿಂಜರಿಯುವುದಿಲ್ಲ.

ಆದ್ದರಿಂದ ಪುರಾತನ ಗ್ರಂಥಗಳಾದ ವೇದ, ಉಪನಿಷತ್ತು, ಗೀತೆ ಇಂಥವುಗಳನ್ನು ಕುರಿತು ಮಾತನಾಡುವಾಗ ನಾವು ಅವುಗಳನ್ನು ಯಾವ ದೃಷ್ಟಿಕೋನದಿಂದ ನೋಡುತ್ತೇವೆ ಮತ್ತು ಅವುಗಳಿಂದ ಮಾನವನ ಭವಿಷ್ಯದಲ್ಲಿ ಪ್ರಯೋಜನವಾಗುವುದಾದಂಥ ಯಾವ ಅಂಶಗಳನ್ನು ಸ್ವೀಕರಿಸುತ್ತೇವೆ ಅನ್ನುವುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ನಿಸ್ಸಂದೇಹವಾಗಿ ನಾವು ಅರಸುತ್ತಿರುವುದು ಒಂದು ದೈವೀ ಸತ್ಯವನ್ನು; ಶಾಶ್ವತವಾದ ಆ ಸತ್ಯವು ಉಳಿದೆಲ್ಲ ಸತ್ಯಗಳನ್ನು ಒಳಗೊಂಡಿದೆ, ಅದರ ಬೆಳಕೇ ಉಳಿದೆಲ್ಲ ನಿತ್ಯಗಳಲ್ಲಿ ಪ್ರತಿಫಲಿತವಾಗುತ್ತಿದೆ, ಒಟ್ಟಾರೆ ಜ್ಞಾನದ ವ್ಯವಸ್ಥೆಯಲ್ಲಿ ಅವುಗಳಿಗೆಲ್ಲ ಸ್ಥಾನ ಸಿಕ್ಕಿರುವುದೇ ಈ ಪರಮ ಸತ್ಯದಿಂದಾಗಿ. ಅಂಥ ಸತ್ಯ ನಮಗೆ ಬೇಕಾಗಿದೆ. ಅಂದ ಮೇಲೆ ಅದು ಒಂದು ಸಣ್ಣ ಸೂತ್ರದಲ್ಲಿ ಬಂಧಿತವಾಗಿರಲು ಸಾಧ್ಯವಿಲ್ಲ, ಯಾವುದಕ್ಕೂ ಒಂದು ಶಾಸ್ತ್ರದಲ್ಲಿ, ತತ್ತ್ವ ಜಿಜ್ಞಾಸೆಯಲ್ಲಿ ಅಂಥ ಸತ್ಯ ನಮಗೆ ಸಿಕ್ಕಲಾರದು, ಯಾವುದೋ ಒಬ್ಬ ವ್ಯಕ್ತಿ, ಮನೀಷಿ, ಪ್ರವಾದಿ ಅಥವಾ ಅವತಾರ ಪುರುಷನು ಸಾರ್ವಕಾಲಿಕ ಸತ್ಯವನ್ನು ಸಂಪೂರ್ಣವಾಗಿ ಪ್ರಕಟಪಡಿಸಲು ಸಾಧ್ಯವಿಲ್ಲ ಎಂಬ ಸಂಗತಿ ನಮಗೆ ತಿಳಿದಿರಬೇಕು. ನಾವು ಬೇರೆ ಬೇರೆ ಧರ್ಮಗಳ, ತತ್ತ್ವ ಸಿದ್ಧಾಂತಗಳ ಖಂಡನೆ ಮಾಡುವುದನ್ನು ನಿಲ್ಲಿಸದ ಹೊರತು ನಮಗೆ ಸಂಪೂರ್ಣ ಸತ್ಯ ದಕ್ಕಲಾರದು. ನಮಗೆ ಗೊತ್ತಿಲ್ಲದ ಬೇರೆ ಧರ್ಮಗಳ, ಸಿದ್ಧಾಂತಗಳ ತತ್ತ್ವವನ್ನು ನಾವು ಹೇಗೆ ವಿರೋಧಿಸಬಲ್ಲೆವು? ಬರೀ ತರ್ಕ, ಉತ್ಸಾಹಗಳು ಆ ಕೆಲಸ ಮಾಡಲಾರವು. ದಿವ್ಯವಾದ ಸತ್ಯವೇನೋ ಒಂದೇ, ನಿಸ್ಸಂದೇಹ; ಆದರೆ ಕಾಲ, ದೇಶ, ವ್ಯಕ್ತಿಗನುಗುಣವಾಗಿ ಅಭಿವ್ಯಕ್ತಿಯು ಬದಲಾಗುವುದು. ಆದ್ದರಿಂದ ಪ್ರತಿ ಗ್ರಂಥವು ಎರಡು ಮೂಲಭೂತ ಅಂಶಗಳಿಂದ ಕೂಡಿರುತ್ತದೆ. ಒಂದು ತಾತ್ಕಲಿಕ, ಇನ್ನೊಂದು ಸನಾತನ, ಶಾಶ್ವತ. ತಾತ್ಕಾಲಿಕ ಅಂಶವು ತತ್ಕಾಲೀನ ವಿಚಾರ

ಪ್ರಣಾಳಿಕೆ, ದೇಶ, ದೇಶದ ಸಂಸ್ಕೃತಿ, ಇವುಗಳ ಮೇಲೆ ಅವಲಂಬಿಸಿರುತ್ತದೆ. ಶಾಶ್ವತವಾದುದಂತೂ ಸದಾ ಕಾಲಕ್ಕೂ ಸರ್ವತ್ರವೂ ಅನ್ವಯಿಸಬಹುದಾದ ಸತ್ಯವಾಗಿರುತ್ತದೆ. ಇನ್ನೊಂದು ಮಹತ್ವದ ಸಂಗತಿ ಏನೆಂದರೆ, ಮಹಾ ಸತ್ಯಕ್ಕೆ ಕೊಟ್ಟಿರುವ ರೂಪ, ವ್ಯವಸ್ಥೆ, ಬೌದ್ಧಿಕ ಮತ್ತು ತಾತ್ವಿಕ ಚಿಂತನೆ ಹಾಗೂ ಅಭಿವ್ಯಕ್ತಿಗಳು ಯಾವಾಗಲೂ ಬದಲಾಗುವಂಥವುಗಳಾಗಿರುತ್ತವೆ, ದೇಶ–ಕಾಲಗಳಿಗನುಗುಣವಾಗಿ ಅವುಗಳನ್ನು ಅನ್ವಯ ಮಾಡುವ ರೀತಿ ಕೂಡ ಬದಲಾಗುತ್ತದೆ. ಹೀಗಾಗಿ ಅದು ತನ್ನ ಮೂಲ ಶಕ್ತಿ, ಬಲಗಳನ್ನು ಕಳೆದುಕೊಳ್ಳುತ್ತದೆ. ನಮ್ಮ ಮನಸ್ಸು ಕೂಡ ಅದನ್ನು ಹಿಂಜೆ, ಭಾಗ ಇಬ್ಭಾಗ ಮಾಡಿ, ಒಡೆದು ನೋಡುವುದರಿಂದ ಕಾಲಕಾಲಕ್ಕೆ ಪುನಃ ಅವೆಲ್ಲವನ್ನೂ ಪುನರ್‌ಜೋಡಣೆ, ಪುನಃ ಸಮನ್ವಯ ಮಾಡಬೇಕಾಗುತ್ತದೆ. ಸಂಕೇತಗಳನ್ನು, ಪ್ರತಿಮೆಗಳನ್ನು, ಭಾಷೆಯನ್ನು ಬದಲು ಮಾಡಬೇಕಾಗುತ್ತದೆ. ಅಂತೆಯೇ ಅತಿ ಪುರಾತನ ಗ್ರಂಥಗಳನ್ನು ಮೂಲ ಸ್ವರೂಪದ ಶಕ್ತಿಯೊಂದಿಗೆ ತಿಳಿದುಕೊಳ್ಳುವುದು ಕಠಿಣವಾಗುವುದು. ಯಾವ ಅಂಶ ಅಥವಾ ಸತ್ಯವು ನಿಜವಾಗಿ ಅನುಭವಕ್ಕೆ ದಕ್ಕುವುದೋ, ಬದುಕಿನಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುವುದೋ ಮಾನಸಿಕ, ಬೌದ್ಧಿಕ ತಿಳುವಳಿಕೆಗಿಂತ ಹೆಚ್ಚಿನ ಜ್ಞಾನವನ್ನು ನೀಡಬಲ್ಲದೋ ಅದು ಮಾತ್ರ ವಿಶ್ವಾತ್ಮಕ, ಸಾರ್ವಕಾಲಿಕ ಸತ್ಯವಾಗಿ ಉಳಿಯುವುದು. ಭಗವದ್ಗೀತೆಯ ವಿಷಯಕ್ಕೆ ಬಂದರೆ, ಅದರಲ್ಲಿ ತಾತ್ಕಾಲಿಕವಾದುದು, ಸ್ಥಾನಿಕವಾದುದು, ತುಂಬ ಕಡಿಮೆ. ಅದರ ಆತ್ಮ ಎಷ್ಟು ವಿಶಾಲವಾಗಿದೆ ಅಂದರೆ ಈ ತಾತ್ಕಾಲಿಕ ಸಾಮಾಜಿಕ ವ್ಯವಸ್ಥೆಯ ಭಾಗವನ್ನು ಕೂಡ ಸಾರ್ವತ್ರಿಕಗೊಳಿಸಬಹುದು; ಆ ಕಾಲದ ಸಾಮಾಜಿಕ ವ್ಯವಸ್ಥೆ ಹಾಗೂ ಘಟನೆಯನ್ನು ಕೂಡ ಸಧ್ಯದ ಪರಿಸ್ಥಿತಿಗೆ ಅನ್ವಯಿಸಿಬಿಡಬಹುದು ಅನ್ನುವಷ್ಟು ಅದರ ಬೋಧವು ವಿಶಾಲವಾಗಿದೆ. ಉದಾಹರಣೆಗೆ ನೋಡುವುದಾದರೆ, ಯಜ್ಞವನ್ನು ದೇವತೆಗಳು ಮತ್ತು ಮಾನವರ ನಡುವಣ ವಿನಿಮಯ ಪರಸ್ಪರ ಭಾವಯಂತಃ ಎಂದು ಹೇಳಿ ಭಾರತದಲ್ಲಿ ಸದ್ಯದ ಜನರಲ್ಲಿ ಕೂಡ ಕಳೆದು ಹೋಗಿರುವ, ಮರೆತೇ ಹೋಗಿರುವ ಸಾಮಾನ್ಯ ಅರ್ಥವನ್ನು ಪ್ರಕಾಶ ಪಡಿಸುತ್ತ, ದೇವತೆಗಳೆಂದರೆ ಪೌರಾಣಿಕ ವ್ಯಕ್ತಿಗಳೆಂಬುದನ್ನು ಮರೆತು, ಯಜ್ಞವೆಂದರೆ ಬದುಕಿನ ಒಂದು ಅವಿಭಾಜ್ಯ ಅಂಗ ಮನುಷ್ಯ ಮತ್ತು ಪ್ರಕೃತಿ, ಮನುಷ್ಯ ಮತ್ತು ನಿಸರ್ಗ ಇವುಗಳ ನಡುವಣ ಬಾಂಧವ್ಯ ಎಂಬ ಅರ್ಥವನ್ನು ಹಿಡಿದು ಮುನ್ನಡೆಯಲು ಸೂಚಿಸುತ್ತದೆ. ಇದು ಒಂದು ರೀತಿಯಲ್ಲಿ ಈ “ಗೀತೆ”

ಯಜ್ಞವನ್ನು ಪ್ರತಿಪಾದಿಸುತ್ತದೆ. ಯಜ್ಞವೆಂದರೆ ಆತ್ಮ ಸಮರ್ಪಣೆ ಅಥವಾ ಆತ್ಮನಿವೇದನೆ (ಬಲಿದಾನ ಅಲ್ಲ;), ಇದರ ಮೂಲಕ ಮಾನವನ ಬದುಕಿನ ಎಲ್ಲ ಕ್ಷೇತ್ರಗಳಿಗೆ, ವ್ಯವಹಾರಗಳಿಗೆ ಆಧ್ಯಾತ್ಮಿಕ ಅರ್ಥವನ್ನು ಕೊಡುವ ಪ್ರಯತ್ನ ಗೀತೆ ಮಾಡಿದೆ ಅನ್ನುವುದು ಸ್ಪಷ್ಟವಾಗುತ್ತದೆ. ಅದೇ ರೀತಿ ಕರ್ಮ; ಸಮಾಜದಲ್ಲಿರುವ ಚತುರ್ವರ್ಣಗಳ ವ್ಯವಸ್ಥೆ ಎಂಬಂತೆ ತೋರಿದರೂ, ಆಳವಾಗಿ ವಿಚಾರ ಮಾಡಿದರೆ ಅದರ ಹಿಂದಿರುವ ಸತ್ಯ, ಆಧ್ಯಾತ್ಮಿಕ ಅರ್ಥ ಹೊಳೆಯುತ್ತದೆ. ಶೂದ್ರರಿಗಾಗಲಿ, ಸ್ತ್ರೀಯರಿಗಾಗಲಿ ಸದ್ಯದಲ್ಲಿ ನೀಡಲಾದ ಸ್ಥಾನಮಾನಗಳನ್ನು ಗಮನಿಸಿ ಗೀತೆಗೆ ಆರೋಪಿಸುವುದು ತಪ್ಪು ಎಂಬುದು ಅರಿವಾಗುವುದಲ್ಲದೇ, ಈ ವ್ಯವಸ್ಥೆಯು ಹೊಂದಿರುವ ಆಧ್ಯಾತ್ಮಿಕ ಅರ್ಥ ಸ್ಪಷ್ಟವಾಗುತ್ತದೆ. ಅದೇ ರೀತಿ ಶಾಸ್ತ್ರ; ಅದು ಒಂದು ರೀತಿಯ ಆತ್ಮಸಂಯಮದ ವ್ಯವಸ್ಥೆ, ಸಮಾಜದ ಹಿತ ದೃಷ್ಟಿಯಿಂದ ಮಾನವನು ತನ್ನ ಮೇಲೆ ತಾನೇ ಹೇರಿಕೊಳ್ಳಬಹುದಾದ ನೈತಿಕ ನಿಯಮ; ಮಾನವನ ಅಹಂ ಕೇಂದ್ರಿತ ಚಟುವಟಿಕೆಗಳು ಇದರಿಂದ ನಿಧಾನವಾಗಿ ಕಡಿಮೆಯಾಗಿ, ಆಧ್ಯಾತ್ಮಿಕದ ಕಡೆಗೆ, ತನ್ನ ಜೀವನದ ನಿಜವಾದ ಗುರಿಯ ಕಡೆಗೆ ಅವನು ಹೊರಳಲು ಸಹಾಯ ಮಾಡುತ್ತದೆ. ಸಮಾಜದಲ್ಲಿನ ಚಾತುರ್ವರ್ಣ್ಯ ವ್ಯವಸ್ಥೆಯ ಹಿಂದೆ ಕೇವಲ ಆಧ್ಯಾತ್ಮಿಕ ಸತ್ಯ ಅಷ್ಟೇ ಅಲ್ಲ; ಅದು ವಿಹಿತ ಕರ್ಮಗಳನ್ನು ಮುಕ್ತ ಹಾಗೂ ಸರಿಯಾದ ಕರ್ಮಗಳನ್ನು ವೈಯಕ್ತಿಕ ಸ್ವಭಾವಕ್ಕೆ ತಕ್ಕಂತೆ ಮಾಡುವ, ತನ್ನ ಆ ಜನ್ಮ ಸಂಸ್ಕೃತಿಗೆ ತಕ್ಕಂತೆ ಮಾಡುವ ಅವಕಾಶದ ಪರಿಕಲ್ಪನೆ ಇರುವುದನ್ನು ನಾವು ಸ್ಪಷ್ಟವಾಗಿ ಮನಗಾಣುತ್ತೇವೆ. ಹೀಗೆ ನಾವು ಯಾವುದನ್ನು ತಾತ್ಕಾಲಿಕ, ಸ್ಥಾನಿಕವೆಂದು ಪರಿಗಣಿಸಬಹುದೋ ಅಂಥ ಸಂಗತಿಗಳನ್ನು ಕೂಡ ಗೀತೆಯು ನಮ್ಮನ್ನು ಆಳವಾಗಿ ಯೋಚನೆ ಮಾಡಲು ಹಚ್ಚುತ್ತದೆ, ಅವುಗಳ ಹಿಂದಿರುವ ಅರ್ಥ, ಆಧ್ಯಾತ್ಮಿಕ ಸತ್ಯವನ್ನು ಕಂಡು ಹಿಡಿಯುವಂತೆ ಮಾಡುತ್ತದೆ. ಗೀತೆಯ ಯಾವುದೇ ವಿಚಾರವನ್ನು ತೆಗೆದುಕೊಂಡರೂ, ಚಾತುರ್ವರ್ಣ್ಯ, ಶಾಸ್ತ್ರ, ಯಜ್ಞಯಾಗಾದಿ ವೈಯಕ್ತಿಕ ಮತ್ತು ಸಾಮಾಜಿಕ ಸಂಗತಿಗಳನ್ನು ತೆಗೆದುಕೊಂಡರೂ, ಅವುಗಳ ಹಿಂದೆ ಅಡಗಿರುವ ಶಾಶ್ವತ ಸತ್ಯವನ್ನು ಕಂಡು ಹಿಡಿಯಲು ನಮಗೆ ಪ್ರೇರಣೆ ಸಿಕ್ಕುತ್ತದೆ..

(ಮುಂದುವರೆಯುತ್ತದೆ)

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

7

ಈ ವಂಗ–ಭಂಗದ ನಿಮಿತ್ತದಿಂದ ದೇಶದಲ್ಲಿ ಉತ್ಪನ್ನವಾದ ರಾಷ್ಟ್ರೀಯತ್ವದ ಭಾವನೆಯು ಹಾ ಹಾ (ನೋಡನೋಡುವಷ್ಟರಲ್ಲಿ) ದೇಶದಲ್ಲೆಲ್ಲವೂ ವ್ಯಾಪಿಸಿತು. ಆನರು ಸ್ವಾವಲಂಬಿಗಳಾಗಹತ್ತಿದರು. ಪರದೇಶಿ ಮಾಳಿನ ಮೇಲೆ ಬಹಿಷ್ಕಾರ ಹಾಕಿದ್ದರಿಂದ ಯರೋಪದವರ ಹೊಟ್ಟೆಯ ಮೇಲೆ ಕಾಲು ಬಂದಿತು (ತೊಂದರೆಯಾಗತೊಡಗಿತು). ಜನಸಮುದಾಯದಲ್ಲಿ ಆತ್ಮವಿಶ್ವಾಸವು ಉಂಟಾದುದರಿಂದ ಸರಕಾರೀ ಅಧಿಕಾರಿಗಳಿಗೆ ಈ ಮೊದಲು ಸಿಗುತ್ತಿದ್ದ ಮಾನವು ಕಡಿಮೆಯಾಗಹತ್ತಿತು. ಹೀಗಾಗಿ ಸರಕಾರೀ ನೌಕರೀ ಮಾಡುವದು ಹೀನತನದ ಲಕ್ಷಣವೆಂದು ಜನರ ಗ್ರಹಿಕೆಯಾಗಹತ್ತಿತು. ಇದೆ ಸರಕಾರಕ್ಕೆ ಹೇಗೆ ತಾನೇ ಸರಿ ಹೋದೀತು? ಆಜನರು ತಮ್ಮ ಹೊರತು ಬೇರೆ ಗತಿಯಿಲ್ಲವೆಂದು ನಂಬಿ ತಮ್ಮ ಮೇಲೆ ವಿಶ್ವಾಸದಿಂದ ಹೀಗೆ ಗುಲಾಮರಾಗಿರಬೇಕೆಂದು ಸರಕಾರದ ಇಚ್ಛೆಯಾಗಿತ್ತು. ಇದಕ್ಕೆ ವಿಪರೀತವಾಗಿ ಅವರೂ, ಈ ಜನರೆಲ್ಲ ಸ್ವಾವಲಂಬಿಗಳಾಗಿ ಸ್ವಾತಂತ್ರಾಪೇಕ್ಷೆಯುಳ್ಳವರಾದರೆ ಸರಕಾರದ ಮನಸ್ಸಿಗೆ ಹೇಗೆ ಸರಿ ಬರಬೇಕು? ಹೀಗಾಗಿ ರಾಷ್ಟ್ರೀಯತ್ವದ ಜ್ಯೋತಿಯನ್ನು ನಂದಿಸಲಿಕ್ಕೆ ಅಧಿಕಾರಿಗಳು ದಬ್ಬಾಳಿಕೆಯನ್ನು ಆರಂಭಿಸಿದರು. ಭೇದ ನೀತಿಯನ್ನು ಉಪಯೋಗಿಸಿ ಮುಸಲ್ಮಾನರನ್ನು ತಮ್ಮ ಪಕ್ಷಕ್ಕೆ ಎಳೆಯಲಿಕ್ಕೆ ನೋಡಿದರು. 1905 ಮಾರ್ಚ ತಿಂಗಳಲ್ಲಿ ಆದ "ಬಾರಿಸಾಲದ ಪ್ರಾಂತಿಕ ಸಭೆ"ಯನ್ನು ಚದುರಿಸಿದರು. ಸುರೇಂದ್ರಬಾಬುಗಳಂತಹ ಪ್ರಸಿದ್ಧ ಮುಖಂಡರಿಗೆ ಕೋರ್ಟಿನ ಅಪಮಾನ ಮಾಡಿದ ನಿಮಿತ್ತ **ರೂ.200/–[1] ದಂಡ** ವಿಧಿಸಿದರು. 'ವಂದೇ ಮಾತರಂ' ಎಂದು ಗರ್ಜಿಸಿದ್ದಕ್ಕಾಗಿ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಗೆ ಹಾಕಿದರು. ಫಟಕಿ(ಛಡಿ ಏಟಿನ) ಶಿಕ್ಷೆಯನ್ನು ಕೊಟ್ಟರು. ಪಿಶಾಚಿಗಳಿಗೆ ರಾಮನಾಮದ ಶ್ರವಣದಿಂದ ನಡುಕ ಹುಟ್ಟುವಂತೆ, ಈ 'ವಂದೇ ಮಾತರಂ' ಗರ್ಜನೆಯಿಂದ ಅಧಿಕಾರಿಗಳ ತಲೆ ತಿರುಗುವಂತಾಗುತ್ತಿತ್ತು. ಅಧಿಕಾರಿಗಳು ಅಸಮ್ಮತಿಯನ್ನು ತೋರಿಸಿದ್ದರಿಂದ ಈ ಶಬ್ದಕ್ಕೆ ಒಂದು ತರಹದ ವಿಶೇಷ ಗೌರವವೂ ಬಂದಿತು. ದೇಶದಲ್ಲಿ ಎಲ್ಲ ಕಡೆಗೆ **"ವಂದೇ ಮಾತರಮ್ ಘೋಷ"[2]**ವು ನಡೆಯಿತು. ಅದಕ್ಕೆ ಮಂತ್ರದ ಸ್ವರೂಪವೂ ಬಂದಿತು. ವೇದದ ಸಾರ ಸರ್ವಸ್ವವೂ ಹೇಗೆ ಓಂಕಾರದಲ್ಲಿ ಬರುವದೋ

ಹಾಗೆಯೇ ರಾಜಕಾರಣದ ರಹಸ್ಯವೂ ವಂದೇ ಮಾತರಮ್ ಮಂತ್ರದಲ್ಲಿ ಬಂದಿತು. ಈ ಶಬ್ದವು ರಾಜಕಾರಣದೊಳಗಿನ ಪ್ರಣವ ಮಂತ್ರವಾಯಿತು!

ರಾಜಕೀಯ ಸಭೆಗಳನ್ನು ಬಂದು ಮಾಡಿದರು(ನಿಷೇಧಿಸಲಾಯಿತು). ಪ್ರೆಸ್ಸುಗಳನ್ನು ಜಫ್ತು ಮಾಡಲಾಯಿತು. ಯಾಕೆಂದರೆ ಅವು ಜನರ ಆಕಾಂಕ್ಷೆಗಳಿಗೆ ಮೂರ್ತಸ್ವರೂಪ ಕೊಡುತ್ತವೆ. ಅದಕ್ಕಾಗಿ "ಮೂಲೇ ಕುಠಾರಃ" ಎನ್ನುವಂತೆ ಪ್ರೆಸ್ಸುಗಳನ್ನೇ ನಾಶ ಮಾಡಿದರೆ ಆಯಿತು ಎಂದುಕೊಂಡು ಅಧಿಕಾರಿಗಳು ತಿಳಿದುಕೊಂಡರು. ಸಂಪಾದಕರ ಮೇಲೆ ರಾಜದ್ರೋಹದ ಆರೋಪ ಹೊರಿಸಿ ಖಟ್ಲೆ ಮಾಡತೊಡಗಿದರು. ಯಾವ ಪೊಲೀಸರನ್ನು ದೇಶದ ಸಂರಕ್ಷಣೆಗೆ ನೇಮಿಸುವದುಂಟೋ ಅಂಥ ಪೊಲೀಸರನ್ನೇ, ದೇಶದ ಅಭ್ಯುದಯದ ಸಲುವಾಗಿ ಆತ್ಮಯಜ್ಞ ಮಾಡಿದ ನಿಸ್ವಾರ್ಥಿಗಳಾದ ಮುಖಂಡರನ್ನು ಕಾಡಲಿಕ್ಕೆ ಸರಕಾರದವರು ಉಪಯೋಗಿಸತೊಡಗಿದರು. ಇಲ್ಲಿ ನಿರ್ಲಜ್ಜರೂ, ಸ್ವಾಭಿಮಾನಶೂನ್ಯರೂ, ತಮ್ಮ ಗೇಣು ಹೊಟ್ಟೆಗಾಗಿ ದೇಶದ್ರೋಹದ ಮಹಾಪಾತಕವನ್ನು ಮಾಡಲಿಕ್ಕೆ ಹೇಸದವರು ಆದಂತಹ ಅಧಮ ಅಧಿಕಾರಿಗಳು ಪರಿಪರಿಯಿಂದ ಪ್ರಜೆಗಳನ್ನು ಪೀಡಿಸಿ ಆನಂದ ಹೊಂದತೊಡಗಿದರು!

ಬಂಗಾಳಿಗಳು ಅಧಿಕಾರಿಗಳ ಈ ನಿಂದ್ಯವರ್ತನೆಗೆ ಉತ್ತರವೆಂದು ತಮ್ಮ ಅಂಗೀಕೃತಕಾರ್ಯವನ್ನು ಇಮ್ಮಡಿ ಉತ್ಸಾಹದಿಂದ ಮುಂದೆ ಸಾಗಿಸಿದರು. ಒಬ್ಬ ಸಂಪಾದಕನು ಹೋದನೆಂದರೆ ಆ ಸ್ಥಳಕ್ಕೆ ಮತ್ತೊಬ್ಬ ಸಂಪಾದಕನು ಕೂಡಲೆ ಬರುತ್ತಿದ್ದನು. ಒಮ್ಮೆ ಕೇವಲ 14 ವರ್ಷದ ಹುಡುಗನು ಡಿಕ್ಲರೇಶನ್ ಸಲುವಾಗಿ ಮ್ಯಾಜಿಸ್ಟ್ರೇಟರ ಕಡೆಗೆ ಹೊಗಿ ಪರವಾನಿಗೆ ಬೇಡಿದನು!! ಈ ಕಾಲಕ್ಕೆ ಬಂಗಾಲದಲ್ಲಿ ವೃತ್ತಪತ್ರಿಕೆಗಳಿಗೆ ಉಕ್ಕು(ಭರತ) ಬಂದಿತ್ತು. ಸ್ಫೂರ್ತಿದಾಯಕ ವಿಚಾರಗಳಿಂದ ತುಂಬಿ ತುಳುಕುವ ವೃತ್ತಪತ್ರಗಳೂ, ಮಾಸಪತ್ರಿಕೆಗಳೂ ತೆರಪಿಲ್ಲದೇ ಹೊರಡುತ್ತಿದ್ದವು.

ರಾಷ್ಟ್ರೀಯ ವಿದ್ಯಾಲಯದ ಆಚಾರ್ಯರಾಗಿ ಕಲಕತ್ತೆಯಲ್ಲಿ ಶ್ರೀ ಅರವಿಂದ ಘೋಷರು ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡಿ 4–6 ತಿಂಗಳು ಆಗಿದ್ದಿಲ್ಲ. ಇಷ್ಟರಲ್ಲಿ ಇವರ ಕೀರ್ತಿ ಸುಗಂಧವು ದೇಶದ ಎಲ್ಲ ಭಾಗಗಳಲ್ಲಿ ಪಸರಿಸಿತು. ಬಂಗಾಲದ ರಾಷ್ಟ್ರೀಯ ಪಕ್ಷದ ಪ್ರಮುಖ ಪತ್ರವಾದ **"ವಂದೇ ಮಾತರಮ್"ದ 12 – ಡಿಸೆಂಬರ 1906 ರ ಸಂಚಿಕೆಯಲ್ಲಿ ಶ್ರೀ ಅರವಿಂದರು ತಮ್ಮ ಸಂಪಾದಕ ವರ್ಗದಲ್ಲಿ ಒಬ್ಬರಾಗಿರುವರೆಂದು ಪ್ರಕಟಿಸಲ್ಪಟ್ಟಿತು.**[2] ಆ ಕಾಲಕ್ಕೆ ಶ್ರೀ ಅರವಿಂದರ ಸಂಬಂಧವನ್ನು ಜೋಡಿಸಿಕೊಳ್ಳಲಿಕ್ಕೆ 'ವಂದೇ ಮಾತರಮ್'ದಂತಹ ಪ್ರಖ್ಯಾತ ಪತ್ರವು(ಪತ್ರಿಕೆ)

ಇಷ್ಟು ಆತುರವಾಗಿದ್ದುದರ ಮೇಲಿಂದ ಬಾಬೂ ಮಹಾಶಯರ ಯೋಗ್ಯತೆಯ ಕೀರ್ತಿಯೂ ಎಷ್ಟು ಬೆಳೆಯಿತೆಂಬುದು ಸಹಜವಾಗಿ ವ್ಯಕ್ತವಾಗುತ್ತದೆ. ರಾಷ್ಟ್ರೀಯ ಪಕ್ಷದ ವಿಚಾರಗಳನ್ನು ದೇಶದಲ್ಲಿ ಹರಡುವದಕ್ಕಾಗಿ ಒಂದು ಜಾಯಿಂಟ್–ಸ್ಟಾಕ್ ಕಂಪನಿಯು ಹೊರಟು(ಪ್ರಾರಂಭವಾಗಿ), ತದ್ವಾರವಾಗಿ (ಅದರ ಮೂಲಕವಾಗಿ) ಈ ಪತ್ರವು( ಪತ್ರಿಕೆಯು) ನಡೆಸಲ್ಪಡುತ್ತಿತ್ತು. ಇದರ ಸಂಪಾದಕತ್ವವು ಸುಪ್ರಸಿದ್ಧ ಲೇಖಕರೂ ಅಸದೃಶ ವಕ್ತೃತ್ವಶಾಲಿಗಳೂ **ಆದ ಬಿಪಿನಚಂದ್ರ ಪಾಲ್ ಹಾಗೂ ಬಾಬು ರಾಮಸುಂದರ ಚಕ್ರವರ್ತಿಗಳ** ಕಡೆಗೆ ಇತ್ತು. ಇದರ ಜೊತೆಗೆ ಶ್ರೀ ಅರವಿಂದರಂತಹ ಪ್ರತಿಭಾಶಾಲಿಗಳ ಲೇಖಕರೂ ಇರಬೇಕೆಂದು ನೆನಿಸಿ (ಬಯಸಿ) ಚಾಲಕರು (ಪ್ರಕಾಶಕರು) ಹಾಗೆ ಪ್ರಕಟಿಸಿದ್ದರು. ಆದರೆ ಆಗ ಶ್ರೀ ಅರವಿಂದರು ಸಮ್ಮತಿಸದಿದ್ದರೂ ಮುಂದೆ ಎಪ್ರಿಲ 15ನೇ ತಾರೀಕಿಗೆ ಈ ಕೆಲಸಕ್ಕೆ ಒಪ್ಪಿಕೊಂಡರು. ಆಗಾಗ್ಗೆ ಸ್ಫೂರ್ತಿದಾಯಕ ಲೇಖನಗಳನ್ನು ಬರೆದು ಜನರನ್ನು ಚೇತರಿಸಹತ್ತಿದರು. ಇವರಿಗೆ ಇಂಗ್ಲೀಶವು ಮಾತೃಭಾಷೆಯಂತೆ. ಇದಲ್ಲದೆ ಸಂಸ್ಕೃತ, ಗ್ರೀಕ್, ಲ್ಯಾಟಿನ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ನಿಷ್ಣಾತರು. ಇಂಥ ಅಗಾಧ ಪಂಡಿತರು ಬರೆದ ಲೇಖನಗಳನ್ನು ಓದಿ ಯಾರು ತಾನೆ ತಲೆದೂಗದಿರಲು ಸಾಧ್ಯ? “ಲಂಡನ್ ಟಾಯಿಮ್ಸ” ನಂತಹ ವಿರುದ್ಧ ಪಕ್ಷದ ಪತ್ರವೂ(ಪತ್ರಿಕೆಯೂ) ಸಹಿತ ‘ವಂದೇ ಮಾತರಮ್’ದ ಲೇಖನಗಳನ್ನು ಕಂಡು ತಲೆದೂಗಿತು! ವಂದೇ ಮಾತರಂದ ಸುಂದರವಾದ ಮಾರ್ಮಿಕ ಲೇಖನಗಳು ಜನರ ಚಿತ್ತವನ್ನು ಕೂಡಲೇ ಆಕರ್ಷಿಸುತ್ತಿದ್ದವು. ಅದರೊಳಗಿನ ಸ್ಫೂರ್ತಿದಾಯಕ ವಿಚಾರಗಳು ಜನರಲ್ಲಿ ಚೈತನ್ಯವನ್ನು ಉಂಟು ಮಾಡದೇ ಬಿಡುತ್ತಿದ್ದಿಲ್ಲ. ಸಾವಿರಾರು ವಾಚಕರು ದಿನಾಲೂ ಈ ಪತ್ರವು ಯಾವಾಗ ಕೈಗೆ ಬರುವದೋ ಎಂದು ಆತುರರಾಗಿರುತ್ತಿದ್ದರು. ಇದರ ಲೋಕಪ್ರೀತಿಯೇ ಇದಕ್ಕೆ ಮುಳುವಾಯಿತು. ಅಲ್ಪ ಕಾಲದೊಳಗೆ ಸರಕಾರದ ಕಣ್ಣಲ್ಲಿ ಇದು ಅಳುಕಹತ್ತಿತು(ಚುಚ್ಚತೊಡಗಿತು).

ರಾಷ್ಟ್ರೀಯ ಪಕ್ಷದ ಮುಖಂಡರನ್ನು ಹಿಡಿದು ಶಿಕ್ಷಿಸಿ, ಜನರಲ್ಲಿ ಒಂದು ತರದ ಅಂಜಿಕೆಯನ್ನು ಉಂಟು ಮಾಡಿ ತಮ್ಮ ವರ್ಚಸ್ಸು ಕೂಡ್ರಿಸಬೇಕೆಂದು ಸರಕಾರದವರು ಮುಂದಾಳುಗಳನ್ನು ಹಿಡಿಯುವ(ಬಂಧಿಸುವ) ಮಹಾಸತ್ರವನ್ನು ಆರಂಭಿಸಿದರು. ಇದರಲ್ಲಿ ಶ್ರೀ ಅರವಿಂದರಂತಹ ಲೋಕಪ್ರಿಯ ಮುಖಂಡರ ಬಾರಿಯು ಬಂದರೆ ಆಶ್ಚರ್ಯವೇನು? ‘ವಂದೇ ಮಾತರಮ್’ದ ತಾ॥ 27 ಜುಲೈ 1907 ರ ಸಂಚಿಕೆಯಲ್ಲಿ **‘ಯುಗಾಂತರ”ವೆಂಬ ಪತ್ರಿಕೆಯ**[3] ಮೇಲೆ ಯಾವ ಲೇಖನದ ಮೇಲೆ ಖಟ್ಲೆ ಹೂಡಲಾಗಿತ್ತೋ ಆ ಲೇಖದ ಸಾರಾಂಶವು ಕೊಡಲ್ಪಟ್ಟಿತ್ತೆಂದು,

28ನೇ ತಾರೀಕಿನ ಸಂಚಿಕೆಯಲ್ಲಿ "ಹಿಂದೂಸ್ತಾನವು ಹಿಂದೂ ಜನರ ಸಲುವಾಗಿ" (India for Indians) ಎಂಬ ಲೇಖನವು ಬರೆಯಲ್ಪಟ್ಟಿತೆಂದೂ ಆರೋಪವಿಟ್ಟು, ಪೊಲೀಸರು ಈ ಪತ್ರಿಕೆಯ ಮೇಲೆ ಖಟ್ಲೆಯನ್ನು ಹಾಕಿದರು. ಅಗಸ್ಟ 6 ರಂದು ಪತ್ರಿಕೆಯ ಆಫೀಸಿಗೆ ಜಪ್ತಿಯು ಬಂದಿತು. ಪೊಲೀಸರು ಕಾರ್ಯಾಲಯದ ಸಂದಿ–ಗೊಂದಿಗಳನ್ನು ಕಣ್ಣಲ್ಲಿ ಎಣ್ಣೆ ಹಾಕೊಂಡು ತಪಾಸ ಮಾಡಿದರು. ಒಂದೆರಡು ಗಾಡಿ ತುಂಬ ಕಾಗದಗಳನ್ನು ಜಪ್ತ ಮಾಡಿ ಒಯ್ದರು!

ಮೇಲೆ ಹೇಳಲ್ಪಟ್ಟ ಆರೋಪಿತ ಲೇಖನಗಳನ್ನು ಶ್ರೀ ಅರವಿಂದ ಬಾಬುಗಳೇ ಬರೆದರೆಂಬ ಸಂಶಯದಿಂದ ವಾರಂಟು ಹೊರಟಿತು. ತಾ.20 ಅಗಸ್ಟ ಅವರನ್ನು ಸೆರೆ ಹಿಡಿಯಲಾಯಿತು. ಬಳಿಕ ರೂ.2500/– ಜಾಮೀನಿನ ಮೇಲೆ ಬಿಡುಗಡೆಯಾಯಿತು. 26 ನೆ ಅಗಸ್ಟಕ್ಕೆ ನ್ಯಾಯ ವಿಚಾರಣೆ ಪ್ರಾರಂಭವಾಯಿತು. ಕೆಲವರ ಸಾಕ್ಷಿಗಳಾದವು. ಆದರೆ ಅವುಗಳಿಂದ ಈ ಲೇಖಗಳನ್ನು ಶ್ರೀ ಅರವಿಂದರೇ ಬರೆದರೆಂದು ಸಿದ್ಧವಾಗಲಿಲ್ಲ. ಕಾರಣ ಬಿಪಿನಪಾಲರನ್ನು ಸರಕಾರದವರು ತಮ್ಮ ವತಿಯಿಂದ ಸಾಕ್ಷಿಗೆ ಕರೆದರು. ಆದರೆ ಪಾಲರು ಇಂಥ ಅನ್ಯಾಯದ ಖಟ್ಲೆಯಲ್ಲಿ ಸಾಕ್ಷಿ ಹೇಳಲಿಕ್ಕೆ ತಮ್ಮ ಮನೋದೇವತೆಯು ಒಪ್ಪುವದಿಲ್ಲವೆಂದು ಹೇಳಿದರು. ಆಗ ಮ್ಯಾಜಿಸ್ಟ್ರೇಟರು ಸಿಟ್ಟಾಗಿ ಪಾಲರ ಮೇಲೇಯೇ ಖಟ್ಲೆ ಮಾಡುವದಕ್ಕೆ ಅಪ್ಪಣೆ ಕೊಟ್ಟರು; ಅದರಲ್ಲಿ ಪಾಲರಿಗೆ 6 ತಿಂಗಳ ಕೈದಿನ ಶಿಕ್ಷೆಯಾಯಿತು! ಶ್ರೀ ಅರವಿಂದ ಬಾಬುಗಳ ನ್ಯಾಯ ವಿಚಾರಣೆಯು ಮುಂದೆ ಸಾಗಿ, ಸಪ್ಟಂಬರ 22 ರಂದು ನಿರ್ದೋಷಿ ಎಂದು ತೀರ್ಪು ಸಿಕ್ಕಿತು.

ಸರಕಾರದವರ ಅವಕೃಪೆಗೆ ಪಾತ್ರರಾದ ಶ್ರೀ ಅರವಿಂದರನ್ನು 'ರಾಷ್ಟ್ರೀಯ ವಿದ್ಯಾಲಯ'ದಲ್ಲಿ ಉಳಿಯಗೊಟ್ಟರೆ ಸಂಸ್ಥೆಗೆ ಬಾಧೆ ಬರುವದೋ ಏನೋ ಎಂಬ ಶಂಕೆಯು ಚಾಳಕ ವರ್ಗದಲ್ಲಿ ಸೇರಿತು. ಸ್ವತಂತ್ರ ಪದ್ಧತಿಯಿಂದ ಶಿಕ್ಷಣವನ್ನು ಕೊಡಬೇಕೆಂಬ ರಾಷ್ಟ್ರೀಯ ವಿದ್ಯಾಲಯವು ಸ್ಥಾಪಿಸಲ್ಪಟ್ಟಿದ್ದರೂ, ಕೆಲವು ಶ್ರೀಮಂತ ಆಶ್ರಯದಾತರು ಶ್ರೀ ಅರವಿಂದರನ್ನು ಇಟ್ಟುಕೊಳ್ಳಲಿಕ್ಕೆ ಅನುಮಾನಿಸಹತ್ತಿದರು! ಇಂಥ ಪರಿಯಿಂದ ಇಲ್ಲಿ ಇರುವದಕ್ಕಿಂತ ಬಿಟ್ಟು ಹೋಗುವದೇ ಲೇಸೆಂದು ಬಗೆದು ಶ್ರೀ ಅರವಿಂದರು ತಮ್ಮ ಸ್ಥಳಕ್ಕೆ ರಾಜೀನಾಮೆಯನ್ನು ಕೊಟ್ಟರು.

750 ರೂಪಾಯಿ ಸಂಬಳವನ್ನು ಬಿಟ್ಟು ಕೇವಲ ಹೊಟ್ಟೆಗೆ ಬೇಕಾಗುವಷ್ಟು ಪ್ರತಿ ತಿಂಗಳಿಗೆ ಸಿಗುವ ಫಲವನ್ನು ಮಾತ್ರ ತಕ್ಕೊಂಡು ಕೆಲಸ ಮಾಡಲಿಕ್ಕೆ ಒಪ್ಪಿದ ಶ್ರೀ ಅರವಿಂದ ಬಾಬುಗಳು ತಿಂಗಳೊಂದಕ್ಕೆ ತಮಗೆ ಪಗಾರ ಸಿಗುವ ಈ

ಕೆಲಸವನ್ನು ಬಿಡಬೇಕಾಯಿತೆಂದು ನಿರುತ್ಸಾಹಿಗಳಾಗಲಿಲ್ಲ. ಬಡೋದೆಯ ಬಡೇಜಾ(ರಾಜರ ಆಸ್ಥಾನ)ವಿನೊಳಗಿಂದ ಅವರನ್ನು ಯಾವ ರಾಷ್ಟ್ರ ಧರ್ಮವು ಎಳೆದು ತಂದಿತ್ತೊ, ಅದರ ಪ್ರಸಾರವನ್ನು ವಿದ್ಯಾಲಯದಲ್ಲಿ ಆಚಾರ್ಯರಾಗಿಯೇ ಮಾಡಲಿಕ್ಕೆ ಬರುತ್ತದೆಂತಲ್ಲ, ಈ ಧರ್ಮವನ್ನು ಜನರಲ್ಲಿ ಹಲವು ರೀತಿಯಿಂದ ಹರಡಲಿಕ್ಕೆ ಬರುತ್ತದೆ. ರಾಷ್ಟ್ರೀಯ ವಿದ್ಯಾಲಯದೊಳಗಿಂದ ಹೊರಟ ಬಳಿಕ ಅವರು 'ವಂದೇ ಮಾತರಮ್'ದ ಸಂಪಾದಕ ವರ್ಗದಲ್ಲಿ ಕೆಲಸ ಮಾಡಹತ್ತಿದರು. ಶ್ರೀ ಅರವಿಂದರು ಮೊದಲು ನೂರಾರು ವಿದ್ಯಾರ್ಥಿಗಳ ಶಿಕ್ಷಕರಾಗಿದ್ದರೆ ಈಗ ಸಾವಿರಾರು ಶಿಷ್ಯರ ಆಚಾರ್ಯರಾದರು; ಮೊದಲು ನ್ಯಾಶನಲ್ ಕಾಲೇಜಿನ ಒಂದು ಪುಟ್ಟ ಕೋಣೆಯ ನಾಲ್ಕು ಗೋಡೆಗಳ ಅವಕಾಶದೊಳಗೆ ಕುಳಿತು ಅಧ್ಯಾಪನ ಕಾರ್ಯವನ್ನು ಮಾಡುತ್ತಿದ್ದರೆ, ಈಗ ನಿಸರ್ಗಸಿದ್ಧ ಮೇರೆಗಳಿಂದ ಮರ್ಯಾದಿತವಾದ ಭರತ ಖಂಡದ "ಕಿಂ ಬಹುನಾ" ಜಗತ್ತಿನ ವಿಶಾಲವಾದ ರಂಗಭೂಮಿಯ ಮೇಲೆ ನಿಂತು ತಮ್ಮ ಗಂಭೀರವಾಣಿಯಿಂದ ಮಾನವ ಕುಟುಂಬಕ್ಕೆ ಉದ್ಧರಿಸಲು ಸಮರ್ಥವಾದ ಉದಾತ್ತ ತತ್ತ್ವಗಳ ಉಪದೇಶ ಮಾಡಹತ್ತಿದರು.

ನಿರ್ದೋಷಿಯೆಂದು ನಿರ್ಣಯವು ಸಿಕ್ಕ ಬಳಿಕ ಶ್ರೀ ಅರವಿಂದರು 'ಪುನಶ್ಚ ಹರೀಃ ಓಂ" ಎನ್ನುವಂತೆ ಮತ್ತೆ ಕಾರ್ಯಕ್ಕೆ ತೊಡಗಿದರು. ರಾಷ್ಟ್ರಸೇವೆಯ ಇಕ್ಕಟ್ಟಾದ ಕಣಿವೆಯ ಮಾರ್ಗವನ್ನು ಸಾಗುವದರಲ್ಲಿ ಸಹಕಾರಿಗಳಾದ ಕೆಲವು ಮಿತ್ರರ ವಿಯೋಗವೂ ಆಯಿತು. ಬಿಪಿನಚಂದ್ರ ಪಾಲರಿಗೂ ಶಿಕ್ಷೆಯಾಯಿತು. ಬ್ರಹ್ಮಬಂಧೋಪಾಧ್ಯಾಯರೂ ದಿವಂಗತರಾದುದರಿಂದ ಚಿರವಿರಹದ ಪ್ರಸಂಗವೂ ಬಂತು. ಮತ್ತೆ ಕೆಲವಿ ಮಿತ್ರರು ಸರಕಾರದ ಅವಕೃಪೆಗೆ ಈಡಾದರು. ಹೀಗೆ ಬಹು ದೊಡ್ಡ ದೊಡ್ಡ ಮುಂದಾಳುಗಳು ಒಂದಿಲ್ಲೊಂದು ತರದಿಂದ ಇಲ್ಲದಂತಾಗಲು, ಬಂಗಾಲದ ತರುಣ ಪಕ್ಷದ ಮುಖಂಡತನವು ಶ್ರೀ ಅರವಿಂದರ ಕಡೆಗೆ ಬಂದಿತು. ನವಂಬರದಲ್ಲಿ ಕೂಡಿದ ಜಿಲ್ಲಾ ಪರಿಷತ್ತಿಗೆ ಮಿದನಾಪೂರ(ಮಿಡ್ನಾಪೂರ)ಕ್ಕೆ ರಾಷ್ಟ್ರೀಯ ಪಕ್ಷದ ವತಿಯಿಂದ ಶ್ರೀ ಅರವಿಂದರು ಹೋಗಿದ್ದರು. ಮಂದಪಕ್ಷದವರು ವೀರಪಕ್ಷದ ತೇಜಸ್ಸನ್ನು ತಾಳಲಾರದೇ ಆ ಸಭೆಯೊಳಗಿಂದ ಪಲಾಯನ ಮಾಡಿದ್ದರು. ರಾಷ್ಟ್ರೀಯ ಪಕ್ಷದ ಮೇಲೆ ಸರಕಾರದ ಕಣ್ಣು ಬಹಳವಿತ್ತು. ಸರಕಾರಕ್ಕೆ ಬೇಡವಾದ ಈ ಪಕ್ಷದ ಸಂಗಡ ಕೂಡಿ ನಡೆಯಲಿಕ್ಕೆ ಮಂದ ಪಕ್ಷದವರು ಅಂಜುತ್ತಿದ್ದರು. ಮಂದ ಪಕ್ಷದವರು ಪರಿಷತ್ತನ್ನು ಬಿಟ್ಟು ಹೋದರೂ, ವೀರಪಕ್ಷದವರು ಅದನ್ನು ಯಶಸ್ವಿಯಾಗಿಯೇ ಕೊನೆಗೊಳಿಸಿದರು (ಸಾಂಗಗೊಳಿಸಿದರು) ಇದರ ಶ್ರೇಯಸ್ಸು ಶ್ರೀ ಅರವಿಂದರಿಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಇತ್ತ ಸರಕಾರವು ಮುಸಲ್ಮಾನರನ್ನು ಒಡೆದು ನೋಡಿತು; ಕೆಲವು ಜನರಿಗೆ ಶಿಕ್ಷೆ ಕೊಟ್ಟು ನೋಡಿತು. ಏನು ಮಾಡಿದರೂ ಜನರು ಮಣಿಯದಿದ್ದುದನ್ನು ಕಂಡು ಸರಕಾರದವರು ಮತ್ತೊಂದು ಯುಕ್ತಿಯನ್ನು ಯೋಜಿಸಿದರು. ಮಂದ ಪಕ್ಷದವರ ಬೆನ್ನು ಚಪ್ಪರಿಸಿ, ಅವರನ್ನು ತಮ್ಮ ವಿಶ್ವಾಸಕ್ಕೆ ತಕ್ಕೊಂಡು, ಈ ತರುಣ ವೀರಪಕ್ಷವನ್ನು ಬಗ್ಗು ಬಡೆಯಬೇಕೆಂದು ಸರಕಾರದವರು ಹಂಚಿಕೆ ಹಾಕಿದರು. ಮಂದ ಪಕ್ಷದ ಬುದ್ಧಿಮಾಂದ್ಯದಿಂದ ಈ ಸರಕಾರದ ಯುಕ್ತಿಗೆ ಯಶಸ್ಸೂ ಬಂತು. ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದ ವರ್ಚಸ್ಸು ಹೆಚ್ಚಾಗುತ್ತಿದ್ದುದು ಮಂದಪಕ್ಷದವರಿಗೆ ಸೇರಿ ಬರಲಿಲ್ಲ. ಈ ಮಂದಪಕ್ಷದವು ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿದ್ದೇನೋ ನಿಜ. ಆದರೆ ರಾಷ್ಟ್ರದ ಆಕಾಂಕ್ಷೆಗಳು ವೃದ್ಧಿಂಗತವಾದಂತೆ ತಮ್ಮ ಧೋರಣವನ್ನಿಡಲಿಕ್ಕೆ ಮಂದಪಕ್ಷದವರು ಹೆದರಹತ್ತಿದರು. ಸರಕಾರದ ಹತ್ತಿರ ವಿನಂತಿ ಮಾಡಿಕೊಂಡು, ಠರಾವುಗಳನ್ನು ಪಾಸು ಮಾಡಿ ಕಳಿಸುವದು ಜನರಿಗೆ ಬೇಸರಿಕೆ ಬಂದಿತ್ತು. ವಿನಂತಿ ಮಾಡಿಕೊಂಡರೆ ತಮ್ಮ ಕೈಯೊಳಗಿನ ಅಧಿಕಾರವನ್ನು ಯಾರೂ ಬಿಟ್ಟುಕೊಡುವದಿಲ್ಲ. ಅದಕ್ಕೆ ಸ್ವಾವಲಂಬನದ ಮಾರ್ಗದಿಂದಲೇ ಯತ್ನಿಸಬೇಕೆಂದು ತರುಣರು ಅನ್ನುತ್ತಿದ್ದರು. ರಾಷ್ಟ್ರೀಯ ಪಕ್ಷದ ಈ ಮತಗಳು(ಅಭಿಪ್ರಾಯ) ಸೇರಲಿಲ್ಲ. ಮಂದರ ಮಾರ್ಗಕ್ರಮಣ ಪದ್ಧತಿಯೂ ಮಂದವಿತ್ತು. ಮಂದಮಂದವಾಗಿ ಸಾಗುವದು ವೀರರಿಗೆ ಸೇರದಾಯಿತು. ಮಂದವಾಗಿ ನಡೆದರೆ ಉದ್ದಿಷ್ಟಸ್ಥಾನಕ್ಕೆ ಹೋಗಲಿಕ್ಕೆ ಬಹಳ ಕಾಲಾವಧಿಯು ಬೇಕು. ಕಾರಣ ಕಾಲು ಬೇಗ ಎತ್ತುದು ಅವಶ್ಯವೆಂದು ವೀರಪಕ್ಷದ ಮತವಿತ್ತು. ಈ ಮಾತು ಮಂದಪಕ್ಷದ ಕೆಲವರಿಗೆ ಸರಿಯಾಗಿ ತೋರುತ್ತಿದ್ದರೂ ಸರಕಾರದ ಭೀತಿಯಿಂದ ಅವರು ಅದಕ್ಕೆ ಒಪ್ಪುತ್ತಿದ್ದಿಲ್ಲ. ಸರಕಾರದ ಭೀತಿಗೆ ಭಯಪಟ್ಟು ಧ್ಯೇಯಚ್ಯುತರಾಗಬೇಕೇ – ರಾಷ್ಟ್ರದ ಘಾತಕ್ಕೆ ಕಾರಣರಾಗಬೇಕೇ ಅಥವಾ ಬಂದದನ್ನು ಸಹಿಸಿ ಸರ್ವಭೂತ ಹಿತವನ್ನು ಸಾಧಿಸಬೇಕೇ ಎಂಬುದೇ ರಾಷ್ಟ್ರೀಯ ಪಕ್ಷದ ಕಣ್ಣೆದುರಿನ ಮುಖ್ಯ ಪ್ರಶ್ನೆಯಾಗಿತ್ತು. ಹಾಗೂ ಅವರು ಧ್ಯೇಯ ಸಿದ್ಧಿಯ ಸಲುವಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗಿದ್ದರು, ಅದರಂತೆ ಬಂದ ಕಷ್ಟಗಳನ್ನೂ ಸಂತೋಷದಿಂದಲೇ ಸಹಿಸಿದರು.

1907 ರಲ್ಲಿ ರಾಷ್ಟ್ರೀಯ ಸಭೆಯು ನಾಗಪೂರದಲ್ಲಿ ನೆರೆಯಬೇಕೆಂದು (ಸೇರಬೇಕೆಂದು) ಮೊದಲು ಗೊತ್ತಾಗಿತ್ತು. ಆದರೆ ಅಲ್ಲಿ ರಾಷ್ಟ್ರೀಯಪಕ್ಷದ ಬಹುಮತವಿದ್ದುದು ಕಂಡು ಬಂತು. ರಾಷ್ಟ್ರೀಯ ಸಭೆಯ ಚಾಲಕತ್ವವು ಪರಂಪರೆಯಿಂದ ಮಂದಪಕ್ಷದ ಕೈಯೊಳಗೆ ಇದ್ದುದರಿಂದ, ಅವರು **ಕೂಡಲೇ**

**ನಾಗಪೂರದಿಂದ ಸೂರತಕ್ಕೆ ಸಭೆ[4]ಯ**ನ್ನು ಕೂಡಿಸಬೇಕೆಂದು ಗೊತ್ತು ಮಾಡಿದರು. ಸೂರತದಲ್ಲಿ ಫೆರೋಝಶಹಾ ಮೇಧಾ ಇವರ ವರ್ಚಸ್ಸು ಹೆಚ್ಚು ಇತ್ತು. 1907ರ ಡಿಸೆಂಬರ ತಿಂಗಳು ಬಂತು. ರಾಷ್ಟ್ರೀಯ ಸಭೆಯು ನೆರೆಯುವ ದಿನಗಳೂ ಸಮೀಪಿಸಿದವು. ದೇಶದೊಳಗಿನ ಎರಡೂ ಪಕ್ಷದ ಜನರು ತಮ್ಮ ತಮ್ಮ ಮುಖಂಡರನ್ನು ಮುಂದೆ ಮಾಡಿಕೊಂಡು ಸಭೆಗೆ ಬಂದರು. ಅಲ್ಲಿ ಅಧ್ಯಕ್ಷರನ್ನು ಆರಿಸುವ ನಿಮಿತ್ತವಾಗಿ ನ್ಯಾಯವು ಹೊರಟು(ಭಿನ್ನಾಭಿಪ್ರಾಯ ತಲೆದೋರಿ) ಅದು ಹಟದಲ್ಲಿ ಪರ್ಯವಸಾನ ಹೊಂದಿತು. ಲಾಲಾ ಲಜಪತರಾಯರು ಮಧ್ಯಸ್ಥಿಕೆಯನ್ನು ಮಾಡಿದರು; ಆದರೆ ಉಪಯೋಗವಾಗಲಿಲ್ಲ. ಮೇಧಾ ಪ್ರಭೃತಿಗಳ ಮುಖಂಡರ ದುರಾಗ್ರಹದಿಂದ ಕಾರ್ಯಹಾನಿಯಾಯಿತು. ವೀರಪಕ್ಷದವರು ಲೋಕಮಾನ್ಯ ತಿಲಕರ ನೇತೃತ್ವದ ಕೆಳಗೆ ಹೋರಾಡಿದರು. ಬಿಪಿನಪಾಲರು ತುರಂಗಕ್ಕೆ(ಸೆರೆಮನೆ ವಾಸ) ಹೋದುದರಿಂದ, ಶ್ರೀ ಅರವಿಂದರು ಬಂಗಾಲಿಯ ವೀರಪಕ್ಷದ ವತಿಯಿಂದ ಲೋಕಮಾನ್ಯ ತಿಲಕರ ಬೆಂಬಲಕ್ಕೆ ಇದ್ದರು. **ಮೊದಲು ಶಾಬ್ದಿಕ ಕಲಹಕ್ಕೆ ಪ್ರಾರಂಭವಾಗಿ ಕಡೆಗೆ ಕೈಗೆ ಕೈ ಹತ್ತುವ ಪ್ರಸಂಗವೂ ಬಂತು. ಅನುಯಾಯಿಗಳೊಳಗೆ ಈ ಕಲಹವು ಸ್ವಲ್ಪ ವಿಕೋಪಕ್ಕೆ ಹೋಯಿತು; ಕೆಲವರು ಪೆಟ್ಟು ತಿಂದರು. ಹೀಗೆ ಕಾಂಗ್ರೆಸ್ ಎನ್ನುವ ಯುದ್ಧನೌಕೆಯು ಕಲಹ(ಒಳಜಗಳ)ಗಳೆಂಬ ಬಂಡೆಗಲ್ಲಿಗೆ ಅಪ್ಪಳಿಸಿ ಒಡೆಯಿತು.** ಸರಕಾರದ ಇಚ್ಛೆಯೂ ಸಫಲವಾಯಿತು. ಭೇದ ನೀತಿ ನಿಪುಣರಾದ ಅಧಿಕಾರಿಗಳು ಗೆದ್ದರು! ಅಧಿಕಾರಿಗಳ ವಿಜಯವೆಂದರೆ ರಾಷ್ಟ್ರದ ಪರಾಜಯವು. ವೀರ ಪಕ್ಷವು ಏಕಾಕಿಯಾಗಿ ಸರಕಾರದ ಅಳವಿನೊಳಗೆ ಸಿಲುಕಿತು.

ಸೂರತದ ಈ ದುಃಖಪರ್ಯವಸಾಯಿಯಾದ(ದುಃಖಾಂತದಲ್ಲಿ ಮುಕ್ತಾಯವಾದ) ರಾಷ್ಟ್ರೀಯ ಸಭೆಯು ಮುಗಿಯಿತು. ಶ್ರೀ ಅರವಿಂದ ಘೋಷರು ತಮ್ಮ ಮತಗಳ (ಅಭಿಪ್ರಾಯಗಳ) ಪ್ರಸಾರಾರ್ಥವಾಗಿ ಮಹಾರಷ್ಟ್ರ ಮಧ್ಯಪ್ರಾಂತಗಳಲ್ಲಿ ದೂರ ದೂರದ ಪ್ರವಾಸ ಮಾಡಿದರು. ದೇಶ ಸೇವೆಯು ಸುಮ್ಮನೆ ಆಗುವದಿಲ್ಲ. ಇದೊಂದು ಅಸಿಧಾರಾವ್ರತದಂತೆ. ಹರಿವಾದ ಖಡ್ಗದ ಮೇಲೆ ಮಾಡುವ ಕಸರತ್ತು ಇದ್ದಂತೆ. ಉಗ್ರವಾದ ತಪಶ್ಚರ್ಯದಂತೆ ಆತ್ಮಯಜ್ಞ ಮಾಡಿದವರಿಗೇ ಇದು ಸಾಧ್ಯವಾಗುತ್ತಿರುತ್ತದೆ. ಶ್ರೀ ಅರವಿಂದರು ಮೊದಲೇ ಆಸಕ್ತರು. ಆದರೂ ದೇಹದ ಪರಿವೆಯಿಲ್ಲದೇ ಕಷ್ಟಕರವಾದ ಪ್ರವಾಸಗಳನ್ನು ಮಾಡಿ ಜನರಲ್ಲಿ ಜಾಗೃತಿಯನ್ನು ಮಾಡಿದರು. ಶ್ರೀ ಅರವಿಂದರಂತೆ ರಾಷ್ಟ್ರೀಯ ಪಕ್ಷದ ಎಲ್ಲ ಮುಖಂಡರೂ ಲೋಕಜಾಗೃತಿಯ ಕೆಲಸಕ್ಕೆ ತೊಡಗಿಕೊಂಡರು.

ಮಂದ ಪಕ್ಷದವರು ವೀರ ಪಕ್ಷದವರಿಂದ ಈ ರೀತಿ ಸಿಡಿದು ಹೋದದ್ದು ಸರಕಾರಕ್ಕೆ ಅನುಕೂಲವಾಯಿತು. ತರುಣ ಪಕ್ಷದ ಮಾರ್ಗಗಳು ಸೇರದಿದ್ದರೆ ಮಂದಪಕ್ಷದವರು ಸುಮ್ಮನೇ ಕೂಡ್ರಬೇಕಾಗಿತ್ತು. ಮಂದಪಕ್ಷದವರಿಗೆ ದೇಶದ ಹಿತವೇ ಹೇಗೆ ಸಾಧಿಸಬೇಕಾದ ಸಂಗತಿಯಾಗಿತ್ತೋ ಹಾಗೆಯೇ ವೀರಪಕ್ಷದವರಿಗೂ ದೇಶದ ಕಲ್ಯಾಣವೇ ಬೇಕಾಗಿತ್ತು. ವೀರ ಪಕ್ಷದವರ ವಿರುದ್ಧ ಸಿಕ್ಕ ಸಿಕ್ಕ ಟೀಕೆಗಳನ್ನು ಬರೆದು ಮಂದ ಪಕ್ಷದವರು ಘೋರತರವಾದ ವಾದ ಮಾಡಿದರು. ಕೆಲವು ಮಂದಪಕ್ಷದ ವೃತ್ತಪತ್ರಕಾರರು ವೀರಪಕ್ಷದವರೆಮದರೆ ಬಂಡುಗಾರರೆಂದು ಸಹ ಸಂಶಯ ತಕ್ಕೊಂಡರು! ಸರಕಾರಕ್ಕೂ ಬೇಕಾದದ್ದು ಇದೇ ಮಾತಾಗಿತ್ತು. ಅದನ್ನು ನಮ್ಮ ಜನರೇ ಮಾಡಿಕೊಟ್ಟ ಮೇಲೆ ಅವರದೇನು ಹೋಗುತ್ತದೆ? ನಮ್ಮ ಜನರು ಚಾಡಿಬುರುಕರಾಗಿ (ಚಾಡಿ ಹೇಳುವವರು), ಮತ್ತೆ ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸುವ ಸಲುವಾಗಿ ತಮ್ಮವರ ವಿರುದ್ಧವಾಗಿಯೇ ಸ್ವ–ಇಚ್ಛೆಯಿಂದಲೇ ಹೇಡಿತನದ ಕಾರ್ಯ ಮಾಡಹತ್ತಿದರೆ ದೇಶಕ್ಕೆ ಊರ್ಜಿತ ಸ್ಥಿತಿಯು ಹೇಗೆ ಬರಬೇಕು? ಒಂದೇ ಹಡಗಿನಲ್ಲಿ ಕುಳಿತ ಜನರ ಹಾಗೆ ಹಿಂದೂಸ್ಥಾನ ವಾಸಿಗಳ ಸ್ಥಿತಿಯಿದೆ. ಹಿಂದೂ ಇರಲಿ, ಮುಸಲ್ಮಾನ ಇರಲಿ. ಯಾರೇ ಇರಲಿ, ಪರಸ್ಪರರಲ್ಲಿ ಹಿತವು ಪರಸ್ಪರರನ್ನೂ ಅವಲಂಬಿಸಿದೆ. ಹೀಗಿದ್ದೂ ತಾವು ಕುಳಿತ ಹಡಗಿಗೆ ತೂತು ಕೆಡಹುವ(ಕೊರೆಯುವ) ಆತ್ಮವಂಚಕ ಕೃತ್ಯವನ್ನು ಮಾಡಿದರೆ ಅದರಿಂದ ಯಾರ ಹಾನಿಯಾಗುವದು? ನಮ್ಮೊಳಗಿನ ಒಡಕಿನ ಲಾಭವನ್ನು ಸರಕಾರವು ತಕ್ಕೊಂಡು, ವೀರಪಕ್ಷದವರ ಮೇಲೆ ಬಿಚ್ಚುಗತ್ತಿಯನ್ನು ಎತ್ತಿತು.

(ಸಶೇಷ)

---

**ಟಿಪ್ಪಣಿಗಳು:**

1. **ರೂ 200/ ದಂಡ ಹಾಗೂ ರೂ 2500/–** ಜಾಮೀನು ವಿಷಯ ಈಗ ಕೇವಲ ಇಷ್ಟೇನೇ ಎನ್ನುವಂತಿದೆ. ಆದರೆ 1905–6 ರ ಸಮಯಕ್ಕೆ ಒಂದು ತೊಲ (ಅಂದಾಜು ಹತ್ತು ಗ್ರಾಂ) ಬಂಗಾರದ ಬೆಲೆ ಕೇವಲ 2 ರೂಪಾಯಿಗಳು!.

2. **"ವಂದೇ ಮಾತರಮ್ ಘೋಷ"[2;]** 1905 ರಲ್ಲಿ ಸ್ಥಾಪಿಸಲ್ಪಟ್ಟ "ವಂದೇ ಮಾತರಮ್" ಪ್ರಕಾಶನ ಸಂಸ್ಥೆಯಿಂದ 1906 ರಲ್ಲಿ ಪ್ರಪ್ರಥಮ ಪತ್ರಿಕೆ ಪ್ರಕಟಗೊಂಡಿತು. ಬಿಪಿನಚಂದ್ರ ಪಾಲ ಅವರು ಅದರ ಸಂಸ್ಥಾಪಕ ಸಂಪಾದಕರಾಗಿದ್ದರು. ತದನಂತರದಲ್ಲಿ ಶ್ರೀ ಅರವಿಂದರು ಸಂಪಾದಕರಾದರು. 1907 ಸಪ್ಟಂಬರ ದಿನಾಂಕ 29 ರಂದು ಪ್ರಕಟವಾದ ಸಂಚಿಕೆಯ ಪ್ರಥಮ

ಪುಟದಲ್ಲಿಯೇ ಶ್ರೀ ಅರವಿಂದರ ಫೋಟೊ ಇತ್ತು(ಚಿತ್ರ ಗಮನಿಸಿ). ಇದು ಬ್ರಿಟಿಶ ಸರಕಾರಕ್ಕೆ ಎಷ್ಟೊಂದು ಹೆದರಿಕೆ ಹುಟ್ಟಿಸಿತ್ತೆಂದರೆ 1910 ರಲ್ಲಿ ಪ್ರೆಸ್ ಕಾಯಿದೆ – 1910 ನ್ನು ಹೇರಿ ವಾಕ್–ಸ್ವಾತಂತ್ರ್ಯವನ್ನು ಕಿತ್ತು ಹಾಕಲಾಯಿತು. ಈಗಲೂ ಅದರ ಪಳೆಯುಳಿಯೆಯಲ್ಲಿಯೇ ನಮ್ಮ ಪ್ರೆಸ್ ಕಾಯಿದೆಗಳಿವೆ.


3. **"ಯುಗಾಂತರ"ವೆಂಬ ಪತ್ರಿಕೆ**[3]; ಯುಗಾಂತರ ಎನ್ನುವ ಸಂಸ್ಥೆಯೊಂದು ಭಾರತದ ಸ್ವಾತಂತ್ರ್ಯಕ್ಕಾಗಿ ಬಂಗಾಳದಲ್ಲಿ ಪ್ರಾರಂಭಗೊಂಡು ಹೋರಾಟ ಮಾಡುತ್ತಿತ್ತು. ಕಲಕತ್ತೆಯ ಸಬರ್ಬನ್ ಫಿಟನೆಸ್ ಕ್ಲಬ್‌ನ ಕೆಲವು ಸದಸ್ಯರು ಇದರಲ್ಲಿ ಇದ್ದರೆಂದು ಅವರನ್ನು ಬಂಧಿಸಲಾಗಿತ್ತು. ನೇಣಿಗೂ ಹಾಕಲಾಯಿತು. ಕೆಲವರನ್ನು ಕಾಲಾಪಾನಿ ಎಂದೇ ಕುಖ್ಯಾತವಾದ ಸೆಲ್ಯಲರ್ ಜೈಲಿನ ಅಂದಮಾನಕ್ಕೆ ರವಾನಿಸಲಾಗಿತ್ತು. ಆದರೆ ಆ ಸೆಲ್ಯುಲರ್ ಜೇಲಿನಲ್ಲಿದ್ದಾಗಲೇ ಅವರಲ್ಲಿ ಬಹುತೇಕರು ಕಮ್ಯುನಿಷ್ಟ ತತ್ವಗಳನ್ನು ಅಳವಡಿಸಿಕೊಂಡರು. 1906 ರಲ್ಲಿ ಯುಗಾಂತರವೆನ್ನುವ ಪತ್ರಿಕೆಯನ್ನೂ ಪ್ರಾರಂಭಿಸಲಾಯಿತು.

"ಯುಗಾಂತರ" ಹೆಸರಿನ ಪಕ್ಷವೊಂದನ್ನು 1906 ರಲ್ಲಿ ಅವರ ಸಹೋದರ ಬರೇನ್ ಘೋಷ, ಭೂಪೇಂದ್ರನಾಥ ದತ್ತಾ, ರಾಜಾ ಸುಬೋಧ ಮಲ್ಲಿಕ, ಮುಂದೆ ಶ್ರೀ ಅರವಿಂದರು ಅದರ ನೇತೃತ್ವ ವಹಿಸಿದ್ದರು. ಇವರಲ್ಲಿ ಬರೇನ್ ಘೋಷ ಮತ್ತು ಭಾಗಾ ಜತಿನ್ ಮುಖ್ಯಸ್ಥರಾಗಿದ್ದರು. ಇವರ ಸಂಗಡ ಮತ್ತೆ 21 ಜನರು ಕ್ರಾಂತಿಕಾರಿಗಳೆಂದೇ ಇತಿಹಾಸದಲ್ಲಿ ದಾಖಲಾಗಿದ್ದಾರೆ.

4. **ನಾಗಪೂರದಿಂದ ಸೂರತಕ್ಕೆ ಸಭೆ**[4]**;** ನ್ಯಾಷನಲ್ ಕಾಂಗ್ರೆಸ್ ಪಕ್ಷವು ಪ್ರಪ್ರಥಮವಾಗಿ ವಿಭಜನೆಗೊಂಡ ಘಟನೆ ಇದಾಗಿದೆ. 1907 ನೇ ಇಸ್ವಿಯ ಈ ಸೂರತ್ ಸಭೆಯಿಂದು ಕಾಂಗ್ರೆಸ ಪಕ್ಷವಿ ಇಬ್ಬಾಗವಾಯಿತು. ಇದನ್ನು ಬಳಸಿಕೊಂಡ ಬ್ರಿಟೀಶರು ಮುಸಲ್ಮಾನ ಸಮುದಾಯಕ್ಕೆ ಸಹಾಯಕವಾಗಿದ್ದುದರಿಂದ ಮುಂದೆ ಮಹಮ್ಮದ ಅಲಿ ಜಿನ್ನಾರಿಂದ "ಮುಸ್ಲಿಂ ಲೀಗ" ನಿಂದಾಗಿ ಮತ್ತೊಮ್ಮೆ ವಿಭಜನೆಗೊಂಡಿತು.




**"ವಂದೇ ಮಾತರಮ್ ಘೋಷ"**[2]



ಕ್ಷುದ್ರ ಕೀಟಕದ ಈ ತೆವಳು–ಗಮನ ಮಂದಗತಿ ಇದ್ದರೂನು
ಮಹಿಮೆದುಂಬಿರುವ ಭವ್ಯ ಉಡ್ಡಯನಕಿದು ನಾಂದಿ ಹೆಜ್ಜೆ ತಾನು
ಆಗಮಿಸಲಿರುವ ದೇವನಿಗೆ ಮನುಜ ಹಂತವಿದು, ತೊಟ್ಟಿಲಾಗಿ
ಭವದ–ಭಂಗುರದ ಚಣವು ತಾನಿರದು, ಅಮರತ್ವ ಶಕ್ತಿಗಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 10 ಪುಟ 240)**

Photo: Imaging Savitri

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಸಂಜ್ಞಾನವೊಂದು ಪರಿಮಾಣಗೊಳಲು ಹೃದಯಾಭಿಲಾಷೆಯೀಗ
ಪ್ರಜ್ವಲಿತ ಪದದಿ ವ್ಯೋಮ–ಮಂಡಲಕೆ ಆರೋಹಗೊಂಡಿತೀಗ
ಈ ಲೋಕಕೀಗ ಅವನ ದ್ವಾರಗಳು ತೆರೆತೆರೆಯಲೀಗ ಸತತ
ಬೆಳಕಿನಾಗರದ ಸಾಗರದ ಸರಣಿ ಆವರಿಸಿ ಬಂದು ನಿರತ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 9 ಪುಟ 236)**

Photo: Imaging Savitri

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.